ಏತಕ್ಕೆ ಹೇಳುತ್ತಿದ್ದೇನೆಂದರೆ ಮಾನ್ಯ ಸದಸ್ಯರೊಬ್ಬರು ಭಾಷಣ ಮಾಡುವಾಗ ಒಂದು ಮಾತು ಹೇಳಿದರು. ಗರಾಚೆ ನಾಡಿದರೆ ಮಾತ್ರ ಸರಕಾರ ಗಮನ ಕೊಟ್ಟು ತೀರ್ಮಾನ ಮಾಡುವಂಥ ಕಾರ್ಯಕ್ರಮ ಸರಕಾರ ಇಟ್ಟುಕೊಂಡಿದೆ ಆದುದರಿಂದ ಚಳವಳಿ ಮಾಡುತ್ತೇವೆ ಎಂದು ಮಾನ್ಯ ಸ್ನೇಹಿತರು ಮಾತನಾಡಿದರು. ಆದರೆ ಸರಕಾರ ನ್ಯಾಯವಾದ ತೀರ್ಮಾನ ಮಾಡುವಾಗ ಚಳವಳಿ ಮಾಡಬೇಕು ಎಂದು ಹಾಗೆ ಏನೂ ಇಲ್ಲ. ಪೆನ್‌ಷನರ್ಸ್ ಅವರ ಯಾವ ಚಳವಳಿ ಇಲ್ಲದೆ ಅವರು ಕೇಳದೆ ಇದ್ದರೂ ಕೂಡ ಅವರ ಕಷ್ಟ ಮನಗಂಡು ಪೆನ್‌ಷನ್ ಮೇಲೆ ತುಟ್ಟಿಭತ್ಯ ಹೆಚ್ಚು ಮಾಡಿದ್ದಾರೆ. ಹೀಗೆ ಜನಸಾಮಾನ್ಯರಿಗೆ ಅನುಕೂಲತೆ ಮಾಡಿ ಕೊಟ್ಟಿದ್ದಾರೆ. ಇದನ್ನು ಶ್ರೀಮಾನ್ ನರಸಿಂಹನ್ ಅವರು ಹೇಗೆ ಮರೆತರೋ ಗೊತ್ತಿಲ್ಲ.

ಮಾನ್ಯ ಸಭಾಪತಿಗಳೇ, ಇವತ್ತಿನ ದಿವಸ ಸಭೆಯ ಮುಂದೆ ಮಂಡಿಸಿದಂಥ ಆಯವ್ಯಯ ಅಂದಾಜು ಪತ್ರಿಕೆಯ ಮಂಡನೆ ಕುರಿತು ಮಾತನಾಡುವಾಗ ಮಾನ್ಯ ಸ್ನೇಹಿತರಾದ ಶ್ರೀಮಾನ್ ಶ್ರೀನಿವಾಸ ಶೆಟ್ಟರು ಸರಕಾರದ ಭಾಷಾ ಧೋರಣೆ ಕುರಿತು ಮಾತನಾಡಿದರು. ಸರಕಾರವು ತ್ರಿಭಾಷಾ ಧೋರಣೆಯನ್ನು ಒಪ್ಪಿಕೊಂಡಿರುವುದನ್ನು ಮಾನ್ಯ ವಿದ್ಯಾ ಸಚಿವರು ಸ್ಪಷ್ಟಪಡಿಸಿದ್ದಾರೆ. ತ್ರಿಭಾಷಾ ಸೂತ್ರದಲ್ಲಿ ಹಿಂದೀ ಭಾಷೆ ಹೇಳಿಕೊಡುತ್ತಾರೆ. ಹಿಂದೀ ಪರೀಕ್ಷೆಯಲ್ಲಿ ಪಾಸು ಆಗದೇ ಇದ್ದರೂ ಕೂಡ ಅಂಥ ವಿದ್ಯಾರ್ಥಿ ನಾಪಾಸಾಗುವುದಿಲ್ಲ. ಅಂದರೆ ಎರಡು ಭಾಷೆ ಕಲಿಯಬೇಕಾಗುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ಎಷ್ಟು ಭಾಷೆ ಕಲಿಯಬೇಕು ಎಂದು ಸರಕಾರ ಇಟ್ಟುಕೊಂಡಿದೆ ಎನ್ನುವ ನೀತಿಯನ್ನು ನೋಡಬೇಕು. ಒಟ್ಟು ಮೂರು ಭಾಷೆ ಕಲಿಯಬೇಕು ಎಂದು ಧೋರಣೆ ಇದೆ. ಒಂದು ಮಾತೃ ಭಾಷೆ, ಒಂದು ಇಂಗ್ಲೀಷ್ ಭಾಷೆ ಮತ್ತು ಹಿಂದೀ ಭಾಷೆ ಕಲಿಯಬೇಕು. ಹಿಂದೀ ಭಾಷೆಯಲ್ಲಿ ಇಷ್ಟೇ ಮಾರ್ಕ್ಸ್ ಪಡೆಯಬೇಕು ಎಂದು ನಿರ್ಬಂಧವಿಲ್ಲ. ಅದಕ್ಕೆ ಯಾವ ಅಡ್ಡಿ ಇಲ್ಲ. ಆದಂಥದಲ್ಲಿ ಹಿಂದೀ ಭಾಷೆ ತಿಳಿಯಬೇಕು ಎಂದು ಈ ರೀತಿ ಮಾಡಿದೆ. ನಮ್ಮಲ್ಲಿ ಮಾಡಿರುವುದಕ್ಕೆ ತದ್ವಿರುದ್ಧವಾಗಿ ಕೇರಳದಲ್ಲಿ ವಿದ್ಯಾರ್ಥಿಗಳು ಹಿಂದಿಯಲ್ಲಿ ಹೆಚ್ಚು ಮಾರ್ಕ್ಸ್ ತೆಗೆದುಕೊಳ್ಳಬೇಕು ಎಂದು ತೀರ್ಮಾನ ಮಾಡಿದ್ದಾರೆ. ಕೆಲವು ಮಾನ್ಯ ಸದಸ್ಯರು ಸರ್ಕಾರದ ಧೋರಣೆ ಕುರಿತು ಅಡಿದಂಥ ಮಾತುಗಳು ನಮ್ಮ ರಾಜ್ಯದ ಅಥವಾ ರಾಷ್ಟ್ರದ ಭಾವೈಕ್ಯತೆಗೆ ಅನುಕೂಲವಾಗುವಂಥ ಮಾತುಗಳು ಎಂದು ಹೇಳುವುದಕ್ಕಾಗುವುದಿಲ್ಲ. ಇಂಗ್ಲಿಷ್ ಬೇಡ ಎಂದು ಸರ್ಕಾರ ಹೇಳಿಲ್ಲ. ಕೇಂದ್ರ ವಿದ್ಯಾ ಸಚಿವರೂ ಇಂಗ್ಲಿಷ್ ಬೇಡ ಎಂದು ಹೇಳಿಲ್ಲ. ಅವರು ವೈಸ್ ಛಾನ್ಸಲರುಗಳ ಕಾನ್‌ಫರೆನ್ಸ್‌ನಲ್ಲಿ ಮಾತನಾಡುತ್ತ ಹೇಳಿದರು, ಇಂಗ್ಲಿಷ್ ಕಲಿಸುವಂಥ ಕ್ರಮ ಈಗ ನಡಿಲವಾಗುತ್ತಿದೆ, ಹೀಗಾಗಬಾರದು; ಇಂಗ್ಲಿಷ್ ಕಡ್ಡಾಯವಾಗಿ ಇನ್ನೂ ಬಿಗುವಾಗಿ ನಾವು ವಿದ್ಯಾರ್ಥಿಗಳಿಗೆ ಹೇಳಿಕೊಡಬೇಕು, ಹಾಗೆ ಹೇಳಿ ಕೊಡದೆ ಇದ್ದರೆ. "We will be going back to Eighteenth Century", ಎಂಬುದಾಗಿ ಕೇಂದ್ರ ವಿದ್ಯಾ ಸಚಿವರು ವೈಸ್ ಛಾನ್ಸಲರುಗಳ ಸಮ್ಮೇಳನದಲ್ಲಿ ಹೇಳಿದ್ದಾರೆ. ಇಂಗ್ಲಿಷ್ ಬೇಡ ಎನ್ನುವಂಥ ಮಾತನ್ನು ಯಾರೂ ಹೇಳುವುದಿಲ್ಲ. ಇಂಗ್ಲಿಷ್ ಜ್ಞಾನ ಬೇಕು. ಆದರೆ ಒಬ್ಬ ವಿದ್ಯಾರ್ಥಿ ವಿಷಯವನ್ನು ಚೆನ್ನಾಗಿ ಗ್ರಹಣ ಮಾಡಬೇಕಾದರೆ ಅವನ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯಲ್ಲಿ ಬೋಧಿಸಬೇಕು. ಹೀಗೆ ಮಾಡಿದರೆ ಬೋಧಿಸುವವರೂ ಇನ್ನೊಬ್ಬರಿಗೆ ಉತ್ತಮವಾಗಿ ತಿಳಿಸುವುದಕ್ಕೆ ಸಮರ್ಥರಾಗುತ್ತಾರೆ. ಆ ತತ್ವವನ್ನು ಸರ್ಕಾರ ಒಪ್ಪಿಕೊಂಡಿದೆ.

ಇವೊತ್ತು ಕಾಲೇಜು ಮಟ್ಟದಲ್ಲಿ ಕೂಡ ಕನ್ನಡ ಬೋಧಕ ಭಾಷೆಯಾಗಬೇಕು ಎಂದು ಒಂದುಕಡೆ ತೀರ್ಮಾನ ಮಾಡಿದ್ದಾರೆ. ಅವರು ಹಾಗೆ ಮಾಡಿದ್ದರೂ ಕೂಡ ಹೆತ್ತವರು ಮಾಡಿಲ್ಲ. ಮೈಸೂರು ವಿಶ್ವವಿದ್ಯಾಲಯದಲ್ಲಿ 33 ಸಾವಿರ ವಿದ್ಯಾರ್ಥಿಗಳಿದ್ದಾರೆ. ಅವರಲ್ಲಿ ಕನ್ನಡದಲ್ಲಿ ಪಾಠ ಕಲಿಯುವವರ ಸಂಖ್ಯೆ 500. ಇವರಲ್ಲಿ 450 ಜನ ಹೆಣ್ಣು ಮಕ್ಕಳು; ಮಹಾರಾಣಿ ಕಾಲೇಜಿನವರು. ಎರಡು ಪ್ಯಾರಲೆಲ್ ಕ್ಲಾಸುಗಳಿದ್ದರೂ ಕೂಡ ಇಂಗ್ಲೀಷಿನ ತರಗತಿಗಳಿಗೇ ಹೆಚ್ಚು ವಿದ್ಯಾರ್ಥಿಗಳು ಹೋಗುತ್ತಾರೆ. ಇದಕ್ಕೆ ಸರ್ಕಾರವನ್ನು ಟೀಕಿಸಿ ಪ್ರಯೋಜನವಿಲ್ಲ. ಸರ್ಕಾರ ತನ್ನ ಧೋರಣೆಯನ್ನು ಸ್ಪಷ್ಟಪಡಿಸಿದೆ. ಯಾವುದು ದೇಶಕ್ಕೆ, ಮಕ್ಕಳಿಗೆ ಹಿತವಾದೀತೋ ಅದನ್ನು ಸರ್ಕಾರ ಇವೊತ್ತು ಹೇಳುತ್ತಿದೆ. ನಮ್ಮಲ್ಲಿ ಇಂಗ್ಲಿಷ್ ಭಾಷೆಯೇ ಸಂಪರ್ಕ ಭಾಷೆಯಾಗಬೇಕು ಎಂದು ಹೇಳಿದರೆ ನಮ್ಮ ರಾಷ್ಟ್ರೀಯತೆಯ ಅಥವಾ ರಾಷ್ಟ್ರ ಪ್ರೇಮಕ್ಕೆ ವಿರುದ್ಧವಾದ ಮಾತಾಗುತ್ತದೆ. ಯಾರೋ ಒಬ್ಬ ಸ್ನೇಹಿತರು ಹೇಳಿದಂತೆ ನಮ್ಮ ಮಾನ್ಯ ಭಾರತದ ಪ್ರತಿನಿಧಿಯಾಗಿ ರಷ್ಯ ದೇಶಕ್ಕೆ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ಅವರು ಹೋದಾಗ ತಮ್ಮ ಎಲ್ಲ ಕ್ರೆಡೆನ್‌ಷಿಯಲ್ ಪತ್ರಗಳೂ ಇಂಗ್ಲಿಷಿನಲ್ಲಿ ಬರೆದು ರಷ್ಯ ದೇಶದಲ್ಲಿ ಕೊಟ್ಟಾಗ ಅದನ್ನು ಹಿಂದಕ್ಕೆ ತೆಗೆದುಕೊಂಡು ಹಿಂದಿ ಭಾಷೆ

ಯಲ್ಲಿ ಬರೆದು ಕೊಡಿ ಎಂದು ಹೇಳಿದರು. ಹಿಂದಿಯಲ್ಲಿ ಬರೆದು ಕೊಟ್ಟಿದ್ದನ್ನು, ಬರೆದು ಕೊಟ್ಟದ್ದು ಸರಿಯಾಗಿಲ್ಲ ಎಂದು ಇನ್ನೂ ಉತ್ತಮವಾದ ಹಿಂದಿಯಲ್ಲಿ ತಿದ್ದಿದರು ಎಂದು ಹೇಳುವುದನ್ನು ಕೇಳಿದ್ದೇನೆ. ಈ ಮಾತುಗಳಲ್ಲಿ ಸತ್ಯವಿರಬಹುದು, ಇಲ್ಲದೆ ಇರಬಹುದು. ಬೇರೆ ದೇಶಗಳಲ್ಲಿ ನಾವು ಇಂಗ್ಲಿಷ್‌ಗಿಂತ ನಮ್ಮ ಅಧಿಕೃತ ಭಾಷೆಯನ್ನು ಉಪಯೋಗಿಸಿದರೆ ಅನುಕೂಲವಾಗುತ್ತದೆ. ನನ್ನ ಸ್ನೇಹಿತರೊಬ್ಬರು ಎಫ್. ಆರ್. ಸಿ. ಎಸ್. ಓದಲು ಇಂಗ್ಲೆಂಡಿಗೆ ಹೋಗಿದ್ದರು. ಅವರು ವೈ. ಎಂ. ಸಿ. ಎ. ದಿಂದ ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ಭಾರತದ ಇತರ ವಿದ್ಯಾರ್ಥಿಗಳು, ಆಫ್ರಿಕ ಖಂಡದ ವಿದ್ಯಾರ್ಥಿಗಳು, ಬಾಕಿ ವಿದ್ಯಾರ್ಥಿಗಳು ಇದ್ದರು. ಒಟ್ಟಿಗೆ ಹೋಗುತ್ತಿದ್ದರೂ, ಅವರವರಲ್ಲಿ ಮಾತನಾಡುವಾಗ ಅವರ ದೇಶಭಾಷೆಯಲ್ಲಿ ಮಾತನಾಡಿದರು, ಇಂಗ್ಲೀಷಿನಲ್ಲಿ ಮಾತನಾಡುತ್ತಿರಲಿಲ್ಲ. ಭಾರತೀಯರಾದ ನಾವು ಇಂಗ್ಲಿಷಿನಲ್ಲಿ ಮಾತನಾಡಿದರೆ ನಗುತ್ತಿದ್ದರು. ಆಗ ನನಗೆ ಬಹಳ ನಾಚಿಕೆ ಆಯಿತು ಎಂದು ಅವರು ಹೇಳುತ್ತಿದ್ದರು.

ಸರ್ಕಾರ ಇಂಗ್ಲಿಷ್ ಬೇಡ ಎಂದು ಹೇಳುವುದಿಲ್ಲ, ಆದರೆ ಅಧಿಕೃತ ಭಾಷೆ ಹಿಂದಿ ಆಗಬೇಕು ಎಂದು ಹೇಳುತ್ತಿದ್ದರೆ ಅವರಲ್ಲಿ ತಪ್ಪೇನೂ ಇಲ್ಲ. ಆದಕಾರಣ ಅದನ್ನು ಮಾನ್ಯ ಸದಸ್ಯರು ಯಾರೂ ಟೀಕೆ ಮಾಡಬೇಕಾಗಿಲ್ಲ. ವಿದ್ಯಾರ್ಥಿಗಳು ಈ ರೀತಿಯ ಚಳುವಳಿಯನ್ನು ಮಾಡಲಿಕ್ಕೆ ಸರ್ಕಾರ ದವರೇ ಜವಾಬ್ದಾರಿಯನ್ನು ಹೊರಬೇಕು ಎಂದು ಕೆಲವು ಸದಸ್ಯರು ಹೇಳಿದರು. ಹೊರಬೇಕಾಗಿಲ್ಲ. ನಮ್ಮ ದೇಶದಲ್ಲಿ ಯಾವುದು ರಾಷ್ಟ್ರ ಭಾಷೆ ಆಗಬೇಕು ಎಂದು ತೀರ್ಮಾನ ಮಾಡುವುದು ಎಷ್ಟು ಮಂದಿ? ದೇಶದಲ್ಲಿ ಕೆಲಸ ಸಿಕ್ಕುತ್ತದೆ, ಕೆಲಸ ಮಾಡಲಿಕ್ಕೆ ನಮ್ಮ ಭಾರತದ ವಿವಿಧ ಭಾಗಗಳಿಂದ ಎಷ್ಟು ಮಂದಿ ಬರುತ್ತಾರೆ, ಸರ್ಕಾರಿ ಕೆಲಸವನ್ನು, ಕೇಂದ್ರ ಸರ್ಕಾರದ ಕೆಲಸವನ್ನು ಪಡೆದು ಕೊಳ್ಳಲಿಕ್ಕೆ ಅಂಥವರಿಗೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ನಮ್ಮ ದೇಶದಲ್ಲಿ ಯಾವುದು ರಾಷ್ಟ್ರ ಭಾಷೆಯಾಗಬೇಕು ಎಂದು ತೀರ್ಮಾನ ಮಾಡುವುದಲ್ಲ. ಆಫಿಷಿಯಲ್ ಲ್ಯಾಂಗ್ವೇಜ್ ಆಕ್ಟ್‌ನಿಂದ ಏನೂ ತೊಂದರೆ ಇಲ್ಲ, ಸಂಸತ್‌ನಲ್ಲಿ ಅಂಗೀಕರಿಸಿರುವ ನಿರ್ಣಯದಲ್ಲಿ ಒಂದು ಮಾತು ಇಷ್ಟೆಯಲ್ಲ ಅದರಿಂದ ತೊಂದರೆಯಾಗಿದೆ ಎಂದು ಹೇಳುತ್ತಾರೆ. ಅದರಲ್ಲಿ ಕೇಂದ್ರ ಸರ್ಕಾರದ ಕೆಲಸಗಳಿಗೆ ಸೇರುವ ಅಧಿಕಾರಿಗಳು ಹಿಂದಿ ಕಲಿಯಬೇಕು ಎಂದು ಹೇಳಿದ್ದಾರೆ. ಕೇಂದ್ರದ ಕೆಲಸಗಳಿಗೆ ಸೇರುವವರಿಗೆ ಕೆಲವರಿಗೆ ಅನಾನುಕೂಲವಾಗಬಹುದು ಇಂಗ್ಲಿಷನ್ನು ಬಿಟ್ಟು ಹಿಂದಿಯನ್ನು ಅಧಿಕೃತ ಭಾಷೆಯಾಗಿ ಇಟ್ಟುಕೊಂಡರೆ ಎನ್ನುವ ದೃಷ್ಟಿಯಿಂದ ಯಾವುದು ನಮ್ಮ ರಾಷ್ಟ್ರ ಭಾಷೆಯಾಗಬೇಕು, ಅಥವಾ ಅಧಿಕೃತ ಭಾಷೆ ದೇಶಕ್ಕೆ ಆಗಬೇಕು ಎಂದು ತೀರ್ಮಾನ ಮಾಡುವಾಗ microscopic percentage of population, ಕೇಂದ್ರ ಸರ್ಕಾರದ ನೌಕರಿಗಳಿಗೆ ಸೇರುವುದಕ್ಕೆ ಹೋಗುವವರು, ಯಾವುದನ್ನು ಅಧಿಕೃತ ಭಾಷೆ ಆಗಬೇಕೆಂದು ಹೇಳುತ್ತಾರೆ, ಅವರಿಗೆ ಯಾವುದರಿಂದ ಅನಾನುಕೂಲವಾಗುತ್ತದೆ ಎಂದು ಅಧಿಕೃತ ಭಾಷೆಯನ್ನು ನಾವು ತೀರ್ಮಾನ ಮಾಡುವುದಕ್ಕೆ ಆಗುವುದಿಲ್ಲ. ಕೇಂದ್ರದ ನೌಕರಿಗೆ ಹೋಗುವವರು ಒಂದು ಬಣ್ಣವನ್ನು ಕಂಡರೆ ಕಣ್ಣಿಗೆ ಹೊಡೆಯುತ್ತದೆ ಎಂದು ರಾಷ್ಟ್ರ ಧ್ವಜದಲ್ಲಿರುವ ಬಣ್ಣವನ್ನು ಬದಲಾಯಿಸುವುದಕ್ಕೆ ಸಾಧ್ಯವೇ? ಈ ದೃಷ್ಟಿಯಿಂದ ನಾವು ಭಾಷಾ ವಿಷಯವನ್ನೂ ಯೋಚನೆ ಮಾಡಬೇಕು.

ವಿದ್ಯಾರ್ಥಿಗಳಿಂದ ಚಳುವಳಿ ಆಗಿದ್ದರೆ ಅದ ತಪ್ಪು ತಿಳುವಳಿಕೆಯಿಂದ ಆಗಿದೆ ಎನ್ನುವಂಥ ಮಾತನ್ನು ನಾವು ಒಪ್ಪಿದ್ದೇವೆ. ನಮ್ಮ ಘಟನೆಯಲ್ಲಿ ನಾವು ಹಾಕಿಕೊಂಡಿದ್ದೇವೆ, ಅಧಿಕೃತ ಭಾಷೆ ಹಿಂದಿ ಎಂದು. ಅದನ್ನು ಪ್ರಸಾರ ಮಾಡಲಿಕ್ಕೆ ಬೇಕಾದ ಅನುಕೂಲತೆಯನ್ನು ಸರ್ಕಾರ ಮಾಡಿಕೊಂಡಿದೆ; ಹಿಂದಿಗೆ ಬೇಕಾದ ಅನುಕೂಲತೆಯನ್ನು ಮಾಡಿಕೊಳ್ಳುವುದಕ್ಕೆ ಸರ್ಕಾರದ ನೋಟಿನೆ ಏನಿದೆ ಎನ್ನುವುದನ್ನು ಆಯವ್ಯಯ ಪಟ್ಟಿಯಲ್ಲಿ ಕೊಟ್ಟಿದೆ. ಚಳುವಳಿಯ ಸಂಬಂಧದಲ್ಲಿ ಪೋಲೀಸಿನವರಿಂದ ಗಲಭೆ ಆಯಿತು, ಇಲ್ಲದಿದ್ದರೆ ಆಗುತ್ತಿರಲಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ಅದು ಅಭಿಪ್ರಾಯದ ಮಾತು. ಅವರ ಅಭಿಪ್ರಾಯ ಬೇರೆ ರೀತಿಯಲ್ಲಿರಬೇಕಾಗಿತ್ತು ಎಂದು ಹೇಳುವ ಸಾಮರ್ಥ್ಯ ನನಗಿಲ್ಲ. ಹಿಂದೆ ಆಗಬಾರದಂಥ ಘಟನೆಗಳು ಆಗಿ ಹೋದುವು, ಪೋಲೀಸಿನವರನ್ನು ದೂರಿ ಪ್ರಯೋಜನವಿಲ್ಲ. ಒಂದು ಮಾತಿನಲ್ಲಿ ಮಾನ್ಯ ನರಹಂಹಿನ್ ಅವರು ಹೇಳಿದರು, ಹಾನನದಲ್ಲಿ ಗಲಭೆ ಆಯಿತು, ಪೋಲೀಸಿನವರು ಏಕೆ ಶಾಂತಿಯನ್ನು ಕಾಪಾಡಲಿಲ್ಲ ಎಂದು ಕೇಳಿದರು. ಹುಡುಗರು ಬರುವುದಕ್ಕೆ ಮುಂಚೆಯೇ ಪೋಲೀಸಿನವರು ಇದ್ದುದರಿಂದ ಅದನ್ನು ನೋಡಿ, like a red rag to a bull. ಹುಡುಗರು ಕೆರಳಿರಬಹುದು ಎನ್ನುವ ಮಾತನ್ನೂ ಕೇಳುತ್ತೇವೆ.

Sri V. SRINIVASA SHETTY.—Without taking to force, is there no method of controlling these things even by the police?

ಶ್ರೀ ಕೆ. ನಾರ್ಯಣನಾರಾಯಣ ಅಡಿಗ.—ಅವರಿಂದ ಪೋಲೀಸಿನವರು ಹೋಗಬಾರದು ಎಂದು ನನ್ನ ಮಿತ್ರರು ಹೇಳುವುದಿಲ್ಲ. ಪೋಲೀಸರು ಹೋಗಬೇಕು. ಅವರು ಹೋದ ಮೇರೆ ಏನು ಮಾಡಬೇಕು, ಎಷ್ಟು ಮಾಡಬೇಕು ಎನ್ನುವುದನ್ನು ಆ ಪರಿಸ್ಥಿತಿ ಆ ಸಮಸ್ಯೆ, ಎದುರಿಸಿದಾಗ ಹೇಳಬೇಕು. ನಾವು ದೂರದಲ್ಲಿ ನಮ್ಮ ಮನೆಯಲ್ಲಿ ಕುಳಿತು ಅದನ್ನು ಹೇಗೆ ಹೇಳುವುದಕ್ಕೆ ಸಾಧ್ಯ! ನಾವು ಯಾರೂ ಅಲ್ಲಿ ಇದ್ದವರಲ್ಲ. ಅವರು ಮಾಡಿದ್ದು ತಪ್ಪಿದ್ದಿರಬಹುದು. ತಪ್ಪು ಎಂದೂ ಹೇಳುವುದಕ್ಕಾಗುವುದಿಲ್ಲ. ನ್ಯೂಸೆನ್ಸ್ ಅಧಿಕಾರ ಮೀರಿ ಹೋಗಿ ಒಬ್ಬರಿಗೆ ಹೊಡೆಯುವುದಕ್ಕೆ ಬದಲಾಗಿ ಇಬ್ಬರು ಮೂವರಿಗೆ, ಕಪ್ಪು ಅಂಗಿಯವರಿಗೆ ಹೊಡೆಯುವುದಕ್ಕೆ ಬದಲಾಗಿ ಬಿಳಿ ಅಂಗಿಯವರಿಗೆ ಪೆಟ್ಟು ಬಿದ್ದಿರಬಹುದು. ಇಂಥ ಪ್ರಮಾದಗಳು ಹೊಸದೇನೂ ಅಲ್ಲ. ಈ ರೀತಿಯ ಚಳುವಳಿಯನ್ನು ಆರಂಭ ಮಾಡಿದರೆ ಚಳುವಳಿಗೆ ಸಂಬಂಧಪಡದವರಿಗೂ ಪೆಟ್ಟು ಬೀಳುತ್ತದೆ, ಸಂಬಂಧಪಡದವರ ಸ್ವತ್ತುಗಳು ನಷ್ಟವಾಗುತ್ತವೆ ಎಂದು ಗೊತ್ತಿದ್ದೂ ಚಳುವಳಿಯನ್ನು ಆರಂಭ ಮಾಡಬೇಕಾದರೆ ಕ್ರಿಮಿನರ್ ಆ ಪ್ರಕಾರ ನ್ಯಾಚುರಲ್ ಆ ಎಂದು ತಿಳಿದುಕೊಂಡು ಆರಂಭ ಮಾಡಿದರೆ ಅದು ಗಿರ್ಫ್ ಆಗುತ್ತದೆ.

Sri V. SRINIVASA SHETTY.—Am I to understand that the police were wrong in Hassan and right in Bangalore?

ಶ್ರೀ ಕೆ. ನಾರ್ಯಣನಾರಾಯಣ ಅಡಿಗ.—ಹಾಸನದಲ್ಲಿ ಕೆಲವು ವಿದ್ಯಾರ್ಥಿಗಳ ಎರಡು ಗುಂಪುಗಳಲ್ಲಿ ಒಂದು ತಂಡಕ್ಕೆ ಏನೊಂದು ತಂಡವರು ಹೊಡೆದರು; ಪೋಲೀಸಿನವರು ಅಲ್ಲಿ ಏಕೆ ಹೋಗಲಿಲ್ಲ ಎಂದು ಹೇಳಿದರು. ಅವರು ಕೇಳುವುದು ಸರಿ. ಲಾ ಅಂಡ್ ಆರ್ಡರ್ ಸಿಚುಯೇಷನ್ ಅವರಿಗೆ ತಿಳಿಯಬೇಕು. ಶ್ರೀನಿವಾಸ ಶೆಟ್ಟರ ಹುಡುಗರನ್ನು ಹಾಸನದ ಹುಡುಗರು ಹೊಡೆದರು ಎಂದರೆ ಕಂಪ್ಲೇಂಟ್ ಕೊಡಬೇಕೇ ಅಥವಾ ಪೋಲೀಸಿನವರು ತಾವಾಗಿಯೇ ಹೋಗಿ ಮಧ್ಯೆ ಪ್ರವೇಶಿಸಬೇಕೇ? ಪೋಲೀಸಿನವರೇ ಹೋಗಿ ಮಧ್ಯೆ ಪ್ರವೇಶಿಸಬೇಕು ಎನ್ನುವುದನ್ನು ಹೇಳಿ ಪ್ರದಾದರೆ ಬೆಂಗಳೂರು ಗಲಭೆಯಲ್ಲಿ ಪೋಲೀಸಿನವರು ಅದನ್ನು ಹತೋಟಿಗೆ ತರಲು ಹೋದದ್ದು ತಪ್ಪೇ? ಪ್ರಿವೆಂಟಿವ್ ಆಕ್ಷನ್ ತೆಗೆದುಕೊಳ್ಳಬೇಕಾದಾಗ, ಹುಡುಗರು ಎಲ್ಲಿ ಗಲಭೆ ಪುರು ಮಾಡುತ್ತಾರೆಂದು ಊಹಿಸಿ ಅಲ್ಲಿಗೆ ಬಂದರೆ, ಏಕೆ ಬಂದರು ಎಂದು ಮಾನ್ಯ ನರಸಿಂಹನ್ ಅವರು ಕೇಳಿದರು. ಈ ರೀತಿ ಟೀಕೆ ಮಾಡುವುದು ಸುಗಮವಾದ ಆಡಳಿತಕ್ಕೆ ಸಹಕಾರಿಯಾಗುವುದಿಲ್ಲ ಎನ್ನುವಂಥ ಮಾತನ್ನು ನಾನು ಹೇಳಬಯಸುತ್ತೇನೆ.

ಏಳು ಕೋಟಿ ರೂಪಾಯಿ ಪೋಲೀಸ್‌ನವರಿಗೆ ಖರ್ಚು ಮಾಡುತ್ತಿದ್ದಾರೆ ಎಂದು ಟೀಕೆಯಲ್ಲಿ ಹೇಳಿದರು. ಅವರಿಗೆ 7 ಕೋಟಿ ರೂಪಾಯಿ ಖರ್ಚು ಮಾಡುವುದು ಕಡಮೆ, ಇನ್ನೂ ಹೆಚ್ಚು ಮಾಡಬೇಕು ಎಂದು ನಾನು ಹೇಳುತ್ತೇನೆ. ಲಾರಿ ತೆಗೆದುಕೊಂಡು ಹೊಸೆಯಲಕ್ಕೆ ಅಲ್ಲ, ಶಾಂತಿ ಕಾಪಾಡುವುದಕ್ಕೆ ಹಣ ಖರ್ಚು ಮಾಡಬೇಕಾಗುತ್ತದೆ. ಟ್ರಾಫಿಕ್ ಡಿಪಾರ್ಟ್‌ಮೆಂಟಿನಲ್ಲಿ ಹಿಂದೆ ಎಷ್ಟು ಜನ ಕಾನ್‌ಸ್ಟೇಬಲ್‌ಗಳಿದ್ದರು, ಇವೊತ್ತು ಎಷ್ಟು ಜನರಿದ್ದಾರೆ ಎನ್ನುವುದನ್ನು ನೋಡಬೇಕು. 25 ವರ್ಷಗಳ ಹಿಂದೆ ಹಿದ್ದುಪಾಟಾಗಿತ್ತು. ಅದರ ಪ್ರಕಾರ ಹೇಗೆ ಟ್ರಾಫಿಕ್ ಕಂಟ್ರೋಲ್ ಮಾಡುವುದು? ಜನರನ್ನು ಹೊಡೆಯುವುದಕ್ಕೆ ಪೋಲೀಸಿನವರನ್ನು ನೇಮಕಮಾಡಿಲ್ಲ, ಜನರ ಸೇವಕರಾಗಿ ಅವರಿದ್ದಾರೆ. ನಿನ್ನೆ ಶಾಸಕರ ಭವನದ ಬಳಿ ಒಬ್ಬ ಡಾಕ್ಟರು ಬಂದು ಅವರ ಕಾರನ್ನು ಬೇಗ ಹಾಕಿ ಭವನದ ಮುಂದೆ ನಿಲ್ಲಿಸಿ ಭವನಕ್ಕೆ ಹೋಗಿದ್ದಾಗ ರಾತ್ರಿ ಹತ್ತೂವರೆ ಗಂಟೆಯಲ್ಲಿ ಯಾರೋ ತೆಗೆದುಕೊಂಡುಹೋಗಿದ್ದರು. ಪೋಲೀಸಿನವರಿಲ್ಲದಿದ್ದರೆ ಹೇಗೆ ಅವನ್ನು ಪತ್ತೆಮಾಡುವುದು? ಕಾರಿಗೆ ರಕ್ಷಣೆ ಬೇಕು. ಕಾರು ಕಳ್ಳರು, ಬೈಸಿಕಲ್ ಕಳ್ಳರು ಬೇಕಾದಷ್ಟಿದ್ದಾರೆ, ಅವರು ಒಳ್ಳೆಯ ಡ್ರೆಸ್ ಹಾಕಿಕೊಂಡು ನಾಗರೀಕರಂತೆ ಕಾಣಿಸಿಕೊಳ್ಳುತ್ತಾರೆ. ಅವರು ಮಾಡುವ ಕಳ್ಳತನ ಮುಂತಾದ್ದನ್ನು ಪತ್ತೆಮಾಡಲು ಪೋಲೀಸರ ಸಹಾಯ ಬೇಕು. ಅದಕ್ಕಾಗಿ ಸರಕಾರ ಪೋಲೀಸನು ಇಲಾಖೆಗೆ 7 ಕೋಟಿ ರೂಪಾಯಿಗಳನ್ನು ಕೇಳಿರುವುದಕ್ಕೆ ಶ್ರೀ ನರಸಿಂಹನ್‌ವರು ಟೀಕೆಮಾಡಿದ್ದಾರೆ. ಆ ಹಣ ಕಡಮೆ, ಇನ್ನೂ ಹೆಚ್ಚುಬೇಕು. ಸಾರ್ವಜನಿಕರ ಸೇವೆ ಮಾಡುವುದೇ ಪೋಲೀಸರ ಕರ್ತವ್ಯ. ಸೇವಕರಾಗಿದ್ದೆವೆ ಎಂಬ ಭಯವನೆ ಪೋಲೀಸಿನವರಲ್ಲಿ ಬರುವಂತ ವ್ಯವಸ್ಥೆಮಾಡಬೇಕು.

ಇನ್ನೊಂದು ವಿಚಾರ ಹೇಳುತ್ತೇನೆ. ಏನೆಂದರೆ, ನಮ್ಮ ರಾಜ್ಯದಲ್ಲಿ ನ್ಯಾಯಾಂಗ ಹಾಗೂ ಕಾರ್ಯಾಂಗ ಪಿಂಗಡಣೆಯಾಗಿದೆ, ಬೇರೆಬೇರೆಯಾಗಿವೆ. ಹಾಗಿರುವಾಗ ಪ್ರಜಾಪ್ರಭುತ್ವ ಉಳಿಯಬೇಕಾದರೆ ರೂಲ್ ಆಫ್ ಲಾ ಚೆನ್ನಾಗಿರಬೇಕು. ನ್ಯಾಯಾಸ್ಥಾನಗಳು ಜನರ ಕಲ್ಯಾಣಕ್ಕಾಗಿ ಇದೆ. ಯಾರಿಗಾದರೂ ದೊರೆಯಬೇಕಾದ ಪ್ರಮೋಷನ್ ದೊರೆಯದಿದ್ದರೆ

ಯಾವುದಾದರೂ ಹಕ್ಕುಭಾಧ್ಯತೆಗೆ ಲೋಪ ಬಂದಿದ್ದರೆ ಜನರು ನ್ಯಾಯಾಸ್ಥಾನಕ್ಕೆ ಹೋಗುತ್ತಾರೆ. ಹಾಗಿರುವಾಗ ನ್ಯಾಯಾಸ್ಥಾನಗಳನ್ನು ರಕ್ಷಣೆಮಾಡುವುದು ಅತಿ ಮುಖ್ಯವಾದುದು. ಹಿಂದೆ ಸರಕಾರದ ಕೈ ನ್ಯಾಯಾಂಗದಲ್ಲಿತ್ತು. ಈಗ ನ್ಯಾಯಾಂಗವನ್ನು ಪ್ರತ್ಯೇಕ ಮಾಡಿರುವಾಗ ಅಡ್ಮಿನಿಸ್ಟ್ರೇಷನ್ ಆಫ್ ಜಸ್ಟಿಸ್ ಹೇಗೆ ಇದೆ ಎಂಬುದನ್ನು ನೋಡಬೇಕು. ಈಗ ರಾಜ್ಯದಲ್ಲಿ ಹಲವು ನ್ಯಾಯಾಲಯಗಳಿವೆ, ಹಿಂದೆ ಆನ್ಸತ್ರೆ ಬೇಕು ಎಂದು ಕೇಳುತ್ತಿದ್ದಂತೆ ಇಂದು ನ್ಯಾಯಾಲಯ ಬೇಕೆಂದು ಕೇಳುವವರಿದ್ದಾರೆ. ಹೊಸದಾಗಿ ಕೋರ್ಟುಗಳು ಎಷ್ಟೋ ಆಗಿವೆ, ಆದರೆ ಅವನ್ನು ನಡೆಸುವುದಕ್ಕೆ ಸರಿಯಾದ ಕಟ್ಟಡಗಳಿಲ್ಲ, ಬೆಂಗಳೂರಿನಲ್ಲಂತೂ ಮಾತ್ರವಲ್ಲ, ಅನೇಕ ಕಡೆ ಈ ಅಭಾವವಿದೆ, ಒಂದು ಕಡೆ ನಿಸನ್ ಹಟ್ ನಲ್ಲಿ ಸಿವಿಲ್ ಕೋರ್ಟು ನಡೆಯುತ್ತಿದೆ. ಮುನ್ಸೀಫರಿಗೆ ಕೂಡಲು ರೂಮಿಲ್ಲ, ವಕೀಲರು ಕಕ್ಷಿಗಾರರು ಕುಳಿತುಕೊಳ್ಳಲು ಸ್ಥಳವಿಲ್ಲ, ಕುರ್ಚಿಗಳು ಸಾಲದೆ ಮುರುಕಲು ಕುರ್ಚಿಗಳನ್ನು ಹಾಕಿರುತ್ತಾರೆ, ಈ ರೀತಿ ಅವ್ಯವಸ್ಥೆಯಿದೆ, ಹೀಗಿರಬಾರದು. ಕಳೆದ ಸಾರಿ ಆಯವ್ಯಯವನ್ನು ಮಂಡನೆಮಾಡಿದಾಗ ಇದೇ ವಿಷಯವನ್ನು ಪ್ರಸ್ತಾಪಮಾಡಿದ್ದೆ. ಅರ್ಧ ನಡವರು ಬೆಂಗಳೂರು ನಗರದಲ್ಲಿರುವ ಕೋರ್ಟುಗಳಿಗೆ ಹೋಗಿ ನೋಡಿಕೊಂಡುಬರುವ ಸಾಹಸವಮಾಡಿದರು. ಆದರೆ ಸಿವಿಲ್ ಕೋರ್ಟುಗಳಿಗೆ ಸರಿಯಾದ ಕಟ್ಟಡಗಳನ್ನೊದಗಿಸಲು ಈ ದಿವಸ ಕೂಡ ಬಜೆಟ್ಟಿನಲ್ಲಿ ಸಾಕಷ್ಟು ಹಣ ಒದಗಿಸಿಲ್ಲ. ಕ್ರಿಮಿನಲ್ ಕೋರ್ಟುಗಳಿಗೆ 10 ಸಾವಿರ ರೂಪಾಯಿಗಳನ್ನು ಒಂದು ಕಡೆ ಬೆಂಗಳೂರಿಗೆ ಸಂಬಂಧಪಟ್ಟಂತೆ ಕಾಣಿಸಿದ್ದಾರೆ. ಇಷ್ಟೇ ವಿಶೇಷವಾಗಿಟ್ಟಿರುವುದು, ಇಡೀ ರಾಜ್ಯದಲ್ಲಿರುವ ಕೋರ್ಟು ಕಛೇರಿ ಕಟ್ಟಡಗಳಿಗೆ ಕಟ್ಟಡದ ಸೌಕರ್ಯಕ್ಕಾಗಿ ಈ 10 ಸಾವಿರ ರೂಪಾಯಿ ಮಾತ್ರ ತೋರಿಸಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಬಂಟವಾಳ ತಾಲ್ಲೂಕಿನಲ್ಲಿ ಹೊಸದಾಗಿ ಒಂದು ಮುನ್ಸೀಫ್ ಕೋರ್ಟು ಆಯಿತು. ಸ್ವಂತ ಕಟ್ಟಡ ಅದಕ್ಕಿಲ್ಲ, ಇವತ್ತಿನವರೆಗೂ ಅದನ್ನು ಒಂದು ಪಂಚಾಯತಿ ಚಾವಡಿಯಲ್ಲಿ ನಡೆಸುತ್ತಿದ್ದರೆ. ಬೆಳತಂಗಡಿಯಲ್ಲೂ ಕೂಡ ಪಿ.ಡಬ್ಲ್ಯು ಆಫೀಸಿನ ಒಂದು ಸಣ್ಣ ಕೋಣೆಯಲ್ಲಿ ಕೋರ್ಟು ನಡೆಯುತ್ತಿದೆ. ಕಟ್ಟಡ ಸರಿಯಾದ್ದಿಲ್ಲದಿದ್ದರೆ ನ್ಯಾಯ ಹೇಗೆ ದೊರೆಯಲು ಸಾಧ್ಯ ? ಸತ್ಯ ಹೇಳಬೇಕೆಂಬ ಹಂಬಲ ಉತ್ಪನ್ನವಾಗುವುದಿಲ್ಲ. ಈ ದಿವಸ ನಮ್ಮ ಹೈಕೋರ್ಟನ್ನು ನೋಡಿ, ಅನ್ಯಾಯವಮಾಡಬಾರದು, ಸತ್ಯವೇ ಹೇಳಬೇಕು ಎಂದು ಪ್ರೇರಣೆಯಾಗುವಂತೆ ಅಂಥ ಭಾವನೆ ಬರಲು ಸಹಾಯಕವಾಗುವಂಥ ಕಟ್ಟಡ ಇದೆಯೇ ? ಅದಕ್ಕೆ ಸರಿಯಾದ ವಾತಾವರಣ ಕಲ್ಪಿಸಬೇಕು. ಆ ರೀತಿ ನಮ್ಮ ಹೈಕೋರ್ಟಿನ ಕಟ್ಟಡ ಇದೆಯೆ ? ಇದನ್ನು ಯೋಚನೆಮಾಡಬೇಕು. ಅನೇಕ ವರ್ಷಗಳಿಂದ ಒಳ್ಳೆಯ ನ್ಯಾಯಾಧೀಶರಿದ್ದ ಸ್ಥಳ ಅದು ಎಂದು ಶ್ರೀಮಾನ್ ಶಾಸ್ತ್ರಿಗಳು ಹೇಳಿದರು, ಇರಬಹುದು. ಇಂದು ರಾಜ್ಯ ದೊಡ್ಡದಾಗಿದೆ, ಎಷ್ಟೋ ಮಂದಿ ಕೋರ್ಟುಗಳಿಗೆ ಹೋಗುತ್ತಾರೆ, ಎಷ್ಟು ವಕೀಲರಿದ್ದಾರೆ, ಕೇಸುಗಳೆಷ್ಟು ಬರುತ್ತವೆ ಎಂಬುದನ್ನು ನೋಡಿ ಅದಕ್ಕೆ ತಕ್ಕಂತೆ ಕಟ್ಟಡ ಕಟ್ಟಿಸಿಕೊಡಬೇಕಾಗಿದೆ. ನಮ್ಮ ಹೈಕೋರ್ಟಿನಕಾಲನ್ನು ನೋಡಿದರೆ ಅದಕ್ಕಿಂತ ಭವ್ಯವಾದ ಕಟ್ಟಡ ಮಂಗಳೂರಿನ ಡಿಸ್ಟ್ರಿಕ್ಟ್ ಮುನ್ಸಿಪಲ್ ಸೆಷನ್ಸ್ ಜಡ್ಜ್ ಕೋರ್ಟಿಗಿದೆ. ಸಭಾಭವನ ಗಂಭೀರವಾಗಿದ್ದರೆ ಸತ್ಯ ಹೇಳಬೇಕೆಂಬ ಭಾವನೆ ಬರುತ್ತದೆ, ನ್ಯಾಯ ದೊರೆಯುತ್ತದೆಂಬ ಭಾವನೆ ಬರುತ್ತದೆ. ಆ ರೀತಿಯ ಪ್ರಚೋದನೆ ನಮ್ಮ ರಾಜ್ಯದಲ್ಲಿರುವ ಹೆಚ್ಚು ಕೋರ್ಟುಗಳಲ್ಲಿ ಆಗುವುದಿಲ್ಲ. ಹೈಕೋರ್ಟಿನ ಕಟ್ಟಡ ಬಹಳ ಬನ್ನಾಗಿದೆ ಎಂದು ಹೇಳುತ್ತಿಲ್ಲ, ಮತೊಂದು ಕಟ್ಟಡ ಹೈಕೋರ್ಟಿಗೆ ಕೊಡಬೇಕು. ಶ್ರೇಷ್ಠ ನ್ಯಾಯಾಸ್ಥಾನಕ್ಕೆ ರಜ್ಯಾಂಗ ಮತ್ತು ಕಾರ್ಯಾಂಗ ಬೇರೆಬೇರೆ ಇರುವಾಗ ಪ್ರತ್ಯೇಕವಾದ ಕಟ್ಟಡ ಅದಕ್ಕೆ ಒದಗಿಸಿಲ್ಲ, ಹೈಕೋರ್ಟಿನಲ್ಲಿರುವ ಕಟ್ಟಡದಲ್ಲಿ ಪಿ ಎಸ್. ಸಿ ಆಫೀಸಿದೆ. ಹೈಕೋರ್ಟಿಗೆ ಪ್ರತ್ಯೇಕವಾಗಿ ಒಂದು ಕಟ್ಟಡವನ್ನೇಕೆ ಸರಕಾರ ಕೊಟ್ಟಿಲ್ಲ ? ಹಿಂದೆ ನ್ಯಾಯಾಂಗ ಮತ್ತು ಕಾರ್ಯಾಂಗ ಜೊರೆ ಇಲ್ಲದಿರುವಾಗ ಬ್ರಿಟಿಷರ ಕಾಲದಲ್ಲಿ ಬೊಂಬಾಯಿ, ಕಲ್ಕತ್ತ ಮುಂತಾದ ಕಡೆಗಳಲ್ಲಿ ಎಂಥ ಕಟ್ಟಡಗಳನ್ನು ಹೈಕೋರ್ಟಿಗೆ ಕಟ್ಟಿದ್ದಾರೆಂಬುದನ್ನು ನೋಡಬಹುದು. ಸೆಕ್ರೆಟೇರಿಯೆಟ್ ಕಟ್ಟಡಕ್ಕಿಂತ ವೈಭವಯುತವಾದ ಉನ್ನತವಾದ ಕಟ್ಟಡವನ್ನು ಅಲ್ಲಿ ಕಟ್ಟಿದ್ದಾರೆ. ಅದೇ ಇಲ್ಲಿ ಸೆಕ್ರೆಟೇರಿಯೆಟ್ ವಿಧಾನಸೌಧದಲ್ಲಿದೆ, ಹೈಕೋರ್ಟು ಒಂದು ಸಣ್ಣ ಮನೆಹುಲ್ಲಿದೆ. ಇದು ಸರಿಯಲ್ಲ ಇಂದು ಪ್ರಜಾಪ್ರಭುತ್ವವಿರುವಾಗ ರೂಲ್ ಆಫ್ ರಾ ಸರಿಯಾಗಿರಬೇಕಾದರೆ ಕೋರ್ಟಿಗೆ ಸರಿಯಾದ ಕಟ್ಟಡವಿರಬೇಕಾದ್ದು ಅಗತ್ಯ.

3-15 P. M.

ಶ್ರೀ ಎಂ. ಪಿ. ಎಲ್. ಶಾಸ್ತ್ರಿ (ನಾಮ ನಿರ್ದೇಶ ಹೊಂದಿದವರು).—ಈಗ ಹೈಕೋರ್ಟಿರುವ ಜಾಗ ನಮ್ಮಾ 60 ವರ್ಷಗಳವರೆಗೆ ಮೈಸೂರು ರಾಜ್ಯದ ಪ್ರಭುತ್ವ ಸ್ಥಾನವಾಗಿತ್ತು.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಸೆಕ್ರೆಟೇರಿಯೆಟ್ ಅಲ್ಲಿ ಇಟ್ಟುಕೊಳ್ಳಬಹುದು, ಸೆಕ್ರೆಟೇರಿಯೆಟ್ಟಿಗೆ ಉತ್ತಮವಾದ ಸ್ಥಾನ ಕೊಟ್ಟುಕೊಂಡರು. ನಮ್ಮ ರಾಜ್ಯದಲ್ಲೂ ಕೂಡ ಶ್ರೇಷ್ಠ ನ್ಯಾಯಾಸ್ಥಾನಕ್ಕೆ ಒಂದು ಸುಂದರವಾದ ವಿಶಾಲವಾದ ಕಟ್ಟಡದ ಸೌಕರ್ಯ ಅವಶ್ಯವಾಗಿದೆ. ಹಣವೆಲ್ಲಾ ಇದಕ್ಕೇ ಮೀಸಲಾಗಿಟ್ಟಿಲ್ಲ ಎಂದು ಶ್ರೀಮಾನ್ ಶಾಸ್ತ್ರಿಗಳು ಹೇಳಬಹುದು. ಅದಕ್ಕೆ ನನ್ನ ಜವಾಬು ಇಷ್ಟೆ, ಹಣ ಇಲ್ಲ ಅಂತ ಅನುಪಯುಕ್ತವಾದ, ಅನವಶ್ಯಕವಾದ ಕೆಲಸವನ್ನು ಹಿಂದಕ್ಕೆ ತೆಗೆದುಕೊಳ್ಳಲಿಲ್ಲ. ಹಣ ಇಲ್ಲ ಅಂತ ಹೇಳುತ್ತೇವೆ, ಒಂದು ಕೋಟಿ ಇಪ್ಪತ್ತೇಳು ಲಕ್ಷ ರೂಪಾಯಿಗಳನ್ನು ನಮ್ಮ ಅಧಿಕಾರಿಗಳಿಗೆ ಮನೆ ಕಟ್ಟಲಿಕ್ಕೆ, ಮೋಟಾರು ಕಾರುಗಳನ್ನು ಕೊಂಡುಕೊಳ್ಳಲಿಕ್ಕೆ ಸಾಲ ಕೊಡಲಿಕ್ಕೆ ಇಟ್ಟಿದ್ದೇವೆ. ಇದೇ ರೀತಿ ಪ್ರತಿವರ್ಷ ಕೊಡುತ್ತಾ ಇದ್ದೇವೆ. ಕಮರ್ಷಿಯಲ್ ಟ್ಯಾಕ್ಸ್‌ನ ಆಫೀಸಿನ ಕಟ್ಟಡಕ್ಕೆ 15 ಲಕ್ಷ ರೂಪಾಯಿಗಳನ್ನು ಮೀಸರವಾಗಿಟ್ಟಿದ್ದೇವೆ. ಹೀಗಿರುವಾಗ ಈ ನ್ಯಾಯ ಖಾತೆಗೆ ಬೇಕಾದಷ್ಟು ಕ್ಯಾಪಿಟಲ್ ಎಕ್ಸ್‌ಪೆಂಡೀಚರ್ ಮಾಡುವ ಅವಶ್ಯಕತೆ ಇದೆ. ಇಷ್ಟೊಮ್ಮೆಗೆ ಮಾಡುವುದಕ್ಕೆ ಸಾಧ್ಯವಿಲ್ಲದೇ ಇದ್ದರೂ ಮೈಸೂರು ಹೈಕೋರ್ಟಿಗೆ ಒಂದು ಕಟ್ಟಡವನ್ನು ಮಾಡಿ ಕೊಡುತ್ತೇವೆ ಎಂಬ ಒಂದು ತೀರ್ಮಾನ ಮನಸ್ಸಾದರೂ ಮೈಸೂರು ಸರ್ಕಾರ ಮಾಡಬೇಕು. ಶ್ರೀಮಾನ್ ಶಾಸ್ತ್ರಿಗಳವರು ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಈಗ ಇರುವ ಹೈಕೋರ್ಟು ಕಟ್ಟಡದಲ್ಲಿ ಆಠಾರ ಕಚೇರಿ ಇತ್ತು ಎಂದು ಹೇಳಿದರು, ಅವರಿಗೆ ಹೈಕೋರ್ಟಿಗೆ ಹೋಗುವ ಅವಶ್ಯಕತೆ ಬರಲಿಲ್ಲ, ಅವರು ಹೋಗಿದ್ದರೆ ಗೊತ್ತಾಗುತ್ತಾ ಇತ್ತು, ಅಡ್ವೊಕೇಟ್ಸ್ ಹೈಕೋರ್ಟಿಗೆ ಹೋಗುವಾಗ, ಜಡ್ಜ್‌ಸ್ ಅವರ ಚೇಂಬರ್ಸ್‌ಗೆ ಹೋಗುವಾಗ ಎಂತಹ ವಾತಾವರಣ ಇದೆ ಎಂಬುದು. ಮುಖ್ಯ ದ್ವಾರಕ್ಕೆ ಹೋಗುವಾಗ ಅದು ಒಂದು ಗುಹೆಗೆ ಹೋಗುವ ಹಾಗೆ ಕಾಣುತ್ತದೆ.

ಶ್ರೀ ಎಂ. ಪಿ. ಎರ್. ಶಾಸ್ತ್ರಿ.—ನಾನು ಅವರಿಗೆ ಬೇಕಾಗುವಂತಹ ಭವ್ಯವಾದ, ಸುಂದರವಾದ, ಉತ್ತಮವಾದ ಕಟ್ಟಡವನ್ನು ಕಟ್ಟಿಸಿಕೊಡಬಾರದು ಎಂದು ಹೇಳಲಿಲ್ಲ. ಈಗ ಹೈಕೋರ್ಟು ಇರತಕ್ಕ ಸ್ಥಳ ಮೈಸೂರು ರಾಜ್ಯದ ಒಂದು ಪ್ರಭುತ್ವ ಸ್ಥಾನವಾಗಿತ್ತು ಅಂತ ಹೇಳಿ ಅವರ ಗಮನಕ್ಕೆ ತಂದು ಕೊಟ್ಟೆ. ಆದ್ದರಿಂದ ನಾನು ಹೈಕೋರ್ಟಿಗೆ ಬಾದ ಮಾಡುವುದಕ್ಕೆ ಹೋಗುವುದು, ಹೋಗದೆ ಇರುವುದು ಅಪ್ರಕೃತ ವಿಚಾರ.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಸ್ವತಃ ಅವರು ನೋಡಿದ್ದಾರೆ ಗೊತ್ತಾಗುತ್ತಾ ಇತ್ತು ಎಂದು ಹೇಳಿದೆ. ಅವರಿಗೆ ಅಲ್ಲಿಗೆ ಹೋಗುವ ಅವಶ್ಯಕತೆ ಇಲ್ಲ. ಆ ಸ್ಥಾನ ಏಕ್ರಮಾದಿತ್ಯನ ಆಸ್ಥಾನದಂತೆ ಉತ್ತಮವಾಗಿದ್ದಿರಬಹುದು ಇರಲಿ. ಕಟ್ಟಡ ಈಗ ಇದ್ದ ಹಾಗೆ ಇಲ್ಲದೆ ಇನ್ನೂ ಉತ್ತಮವಾಗಿ ಮಾಡಕೊಡಬೇಕು. ಹೈಕೋರ್ಟು ಸ್ವತಂತ್ರವಾಗಿರಬೇಕು ಎಂದು ಹೇಳುತ್ತಾ ಇರುವಾಗ, ಆ ಕಟ್ಟಡದಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ ಮತ್ತೊಂದು ಬದಿಯಲ್ಲಿ ಇರುವುದು ಸರಿಯಿಲ್ಲ. ಹೈಕೋರ್ಟಿಗೆ ಗೌರವವನ್ನು ಕೊಟ್ಟಹಾಗಾಗುವುದಿಲ್ಲ. ಬೇರೆ ಕಟ್ಟಡ ಕಟ್ಟಿಸುವುದಿಲ್ಲ ಎಂದರೆ ಅದನ್ನೇ ಉತ್ತಮಗೊಳಿಸಬಹುದು ; ಸುಂದರಗೊಳಿಸಬಹುದು, ಇನ್ನೂ ಹೆಚ್ಚಿನ ಅನುಕೂಲತೆಗಳನ್ನು ಅಲ್ಲರುವಂತಹ ನ್ಯಾಯಾಧೀಶರುಗಳಿಗೆ, ಅಲ್ಲಿಗೆ ಬರುವಂತಹ ಪ್ರಜೆಗಳಿಗೆ ಮಾಡಿ ಕೊಡಬಹುದು ಅನ್ನುವಂತಹ ವಿಚಾರವನ್ನು ಮಾನ್ಯ ಸಭಾಪತಿಯವರಿಗೆ ಹೇಳಬಯಸುತ್ತೇನೆ. ಮಲ್ಟಿಸ್ಟೋರೀಡ್ ಬಿಲ್ಡಿಂಗ್ ಕಟ್ಟಿಸಿಕೊಂಡಿದ್ದೇವೆ. ಹಿಂದೆ ವಿಧಾನ ಸೌಧ ಕಟ್ಟುವಾಗ ಇದನ್ನು ಯಾರು ಕಟ್ಟಿಸಿದರೋ ಅವರು ಹಣ್ಣು ಹೋಲು ಮಾಡಿದರು ಎಂದು ಹೇಳುತ್ತಾ ಇದ್ದರು, ಇಂದಿನ ಪರಿಸ್ಥಿತಿಯನ್ನು ನೋಡಿದರೆ ಅದು ಸರಿಯಿಲ್ಲ, ಇಂತಹ ಒಂದು ದೂರದರ್ಶಿತ್ವ ಅಗತ್ಯವಾಗಿತ್ತು ಎಂಬುದು ವೇದ್ಯವಾಗುತ್ತದೆ. ವಿಧಾನ ಸೌಧವನ್ನು ಕಟ್ಟದೇ ಇದ್ದಿದ್ದರೆ ಇವತ್ತಿನ ದಿವಸ ಸೆಕ್ರೆಟೇರಿಯಟ್ ಗಿಡದ ಬುಡದಲ್ಲಿ ನಡೆಯಬೇಕಾಗಿತ್ತು, ಅದೇ ರೀತಿ ಹೈಕೋರ್ಟಿಗೂ ಕೂಡ ಕಷ್ಟವಾಗುತ್ತಾ ಇತ್ತು, ಆದ್ದರಿಂದ ಮತ್ತೊಂದು ಕಟ್ಟಡವನ್ನು ಕಟ್ಟುವ ಅವಶ್ಯಕತೆ ಇದೆ, ಹಾಗಲ್ಲದೇ ಇದ್ದರೆ ಇರುವುದನ್ನೇ ಉತ್ತಮ ಕಟ್ಟಡವನ್ನಾಗಿ ಮಾಡಿ ಭವ್ಯವಾಗಿಡಬೇಕೆಂಬ ಮಾತನ್ನು ಈ ನಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಗಳೇ, ಮಂಗಳೂರಿನಲ್ಲಿ ಫರ್ಟಿಲೈಸರ್ ಪ್ಲಾಂಟ್ ಬರುತ್ತದೆ, ಅದಕ್ಕೆ ಹೆಚ್ಚು ನೀರಿನ ಪೂರೈಕೆಯಾಗಬೇಕಾಗುತ್ತದೆ, ಅದರ ಸಲುವಾಗಿ 72 ಲಕ್ಷ ರೂಪಾಯಿಗಳನ್ನು ಇವತ್ತಿನ ಬಡ್ಜೆಟ್‌ನಲ್ಲಿ ಹಾಕಿದ್ದಾರೆ. ಕುಡಿಯುವ ನೀರಿನ ಸಂಬಂಧವಾಗಿ ಮಾಡಬೇಕಾದ ಅನುಕೂಲತೆಯನ್ನು ಮಾಡಿ ಕೊಟ್ಟಿಲ್ಲ. ಬಾಯಾರಿಕೆಯಿಂದ ತೊಳಲುವ ಜನಕ್ಕೆ ಕುಡಿಯುವ ನೀರಿನ ಬಾವಿಯನ್ನು ತೆಗೆಸುವ ಪರಿಸ್ಥಿತಿ ಇಲ್ಲ, ಫರ್ಟಿಲೈಸರ್ ಪ್ಲಾಂಟ್ ಬರುವ ಮುನ್ನ ಈ ಏರ್ಪಾಡನ್ನು ಮಾಡಿದ್ದೇ ಆದರೆ ಸರ್ಕಾರದವರನ್ನು ಅಭಿನಂದಿಸಬೇಕಾದ ವಿಚಾರವಾದೀತು. ಫರ್ಟಿಲೈಸರ್ ಪ್ಲಾಂಟ್ ಶುರು ಮಾಡಿ ಕೆಲಸ ಮಾಡುವಾಗ ನೀರೇ ಇಲ್ಲ ಎಂದು ನೀರಿನ ಮೂಲ

ಹುಡುಕುವಂತಹ ಒಂದು ಪರಿಸ್ಥಿತಿಯನ್ನು ಉಂಟುಮಾಡದೇ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ. ಇನ್ನೊಂದು ವಿಚಾರವನ್ನು ಹೇಳಬಯಸುತ್ತೇನೆ. ಉಡುಪಿಯಲ್ಲಿ ವಾಟರ್ ಸಪ್ಲೈ ಸ್ಕೀಂನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ಅದಕ್ಕೆ 22 ಸಾವಿರ ರೂಪಾಯಿಗಳನ್ನು ನಗರ ಸಭೆಯವರು ಸಾರ್ವಜನಿಕರಿಂದ ಎತ್ತಿದ್ದಾರೆ, ಅದರಲ್ಲಿ ಹೆಚ್ಚು ಅಂಶ ವೆಚ್ಚವಾಗಿದೆ, ಇನ್ನು ಹಣ ಇಲ್ಲ, ಕೆಲಸ ನಿಲ್ಲಿಸುತ್ತೇವೆ ಎಂದು ಪಿ. ಡಬ್ಲ್ಯು.ಡಿ. ಅವರು ಹೇಳುತ್ತಾರೆ. ಪೈಪು ಲೈನು ಎಲ್ಲಾ ಹಾಕಿ ಆಯಿತು. ಸರ್ಕಾರದಿಂದ ಬರಬೇಕಾದ ಹಣ ಬರದೇ ಇದ್ದುದ್ದರಿಂದ ಕೆಲಸ ನಿಲ್ಲುವಂತಹ ಪರಿಸ್ಥಿತಿ ಒಂದಿದೆ. ಈ ರೀತಿ ಆಗುವುದಕ್ಕೆ ಬಿಡಬಾರದು. ಸರ್ಕಾರದವರು ಉಡುಪಿ ವಾಟರ್ ಸಪ್ಲೈಗೆ ಕೊಡಬೇಕಾದ ಹಣವನ್ನು ಪಿ. ಡಬ್ಲ್ಯು. ಡಿ. ಅವರಿಗೆ ಕೊಟ್ಟು ಕೆಲಸ ಮುಂದುವರಿಯುವಂತೆ ಮಾಡಬೇಕು. ಇನ್ನೊಂದು ವಿಚಾರ ಎಂದರೆ ಹಿಂದಿನ ಮೈಸೂರು ಪ್ರಾಂತ್ಯದಲ್ಲಿ ಪ್ರತಿಯೊಂದು ತಾಲ್ಲೂಕು ಹೆಡಕ್ವಾರ್ಟರ್‌ನಲ್ಲೂ ಶುದ್ಧವಾದ ಕುಡಿಯುವ ನೀರಿನ ವ್ಯವಸ್ಥೆ ಮಾಡಿದೆ. ಆ ಬಗ್ಗೆ ಬಹಳವಾಗಿ ಹಿಂದಿನ ಆಡಳಿತ ನಡೆಸಿದವರನ್ನು ಅಭಿನಂದಿಸಬೇಕಾಗಿದೆ. ನಮ್ಮ ಬ್ರಿಟಿಷ್ ಪ್ರಾಂತ್ಯದಿಂದ ಬಂದಿರತಕ್ಕ ಸ್ಥಳಗಳಲ್ಲಿ ಆ ರೀತಿ ವ್ಯವಸ್ಥೆಗೊಳಿಸಿರಲಿಲ್ಲ. ಇವತ್ತು ದಕ್ಷಿಣ ಕನ್ನಡ ಜಿಲ್ಲೆಯನ್ನು ತೆಗೆದುಕೊಂಡರೆ, ಹೆಚ್ಚಿನ ಜನಸಂಖ್ಯೆ ಇರತಕ್ಕ ಪಟ್ಟಣಗಳಲ್ಲೂ ಕೂಡ ನೀರಿನ ಪೂರೈಕೆ ಇಲ್ಲ. ಮಳೆ ನೀರು 120 ಇಂಚು ಬರುತ್ತದೆ; ಅದು ನಮ್ಮ ಜಿಲ್ಲೆಯಲ್ಲಿರುವ ಸಮುದ್ರಕ್ಕೆ ಹೋಗುತ್ತದೆ. ಸ್ಥಳದವರಿಗೆ ಕುಡಿಯುವ ನೀರಿನ ಸರಬರಾಯಿ ಇಲ್ಲ, ಜನ ಕಷ್ಟಪಡುತ್ತಾ ಇದ್ದಾರೆ. ಎಂದರೆ ಅವಕ್ಕೆ ಶೇಕಡ ಅರ್ಧದಷ್ಟು ಜನರೂ ಸಹಾಯ ಮಾಡಬೇಕೆಂದು ಹೇಳುತ್ತಾ ಇದ್ದರು. ಕುಂದಾಪುರ, ಕಾರ್ಕಳ, ಪುತ್ತೂರು ಮುಲ್ಕಿ, ಮೂಡಬಿದ್ರೆ ಪಟ್ಟಣಗಳಿಗೆ ನೀರಿನ ಸರಬರಾಯಿ ಮಾಡಲು ಹಿಂದಿನ ಕಾನೂನು ಪ್ರಕಾರ ಅವುಗಳು ಟೌನ್‌ಗಳಾದ್ದರಿಂದ ಸರ್ಕಾರದವರು ಶೇಕಡ 50 ರಷ್ಟು ಹಣ ಕೊಡಬೇಕಾಗಿದೆ. ಆದರೆ ನಮ್ಮ ದುರ್ದೈವದಿಂದ ಇತ್ತೀಚೆಗೆ ನ್ಯಾಷನರ್ ರೂರರ್ ವಾಟರ್ ಸಪ್ಲೈ ಸ್ಕೀಂನ ಯೋಜನೆಯ ಪ್ರಕಾರ 20 ಸಾವಿರ ಪ್ರಜಾ ಸಂಖ್ಯೆಗೂ ಕಡಿಮೆ ಇರತಕ್ಕ ಎಲ್ಲಾ ಪಟ್ಟಣಗಳಿಗೂ ಅದನ್ನು ಅನ್ವಯಿಸಬೇಕೆಂದು ಮಾಡಿ 10 ಪರ್ಸೆಂಟ್‌ನ್ನು ಪಂಚಾಯ್ತಿಯವರು ಅಥವಾ ಊರಿನವರು ಕೊಟ್ಟರೆ ಸಾಕು ಉಳಿದ 40 ಪರ್ಸೆಂಟ್‌ನ್ನು ರಾಜ್ಯ ಸರ್ಕಾರದವರು ಮತ್ತು 50 ಪರ್ಸೆಂಟ್‌ನ್ನು ಕೇಂದ್ರ ಸರ್ಕಾರದವರು ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. ಇದರ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳು, ಜನ ನಿಬಿಡವಾದ ಪಟ್ಟಣಗಳಾದ ಕುಂದಾಪುರ, ಪುತ್ತೂರು, ಕಾರ್ಕಳ, ಮುಲ್ಕಿ, ಮೂಡಬಿದ್ರೆ ಪಟ್ಟಣಗಳಿಗೆ ಕುಡಿಯುವ ನೀರಿನ ಸೌಕರ್ಯವನ್ನು ಮಾಡಿಕೊಡುವ ಒಂದು ಸೌಜನ್ಯವನ್ನು ಇವತ್ತು ಕೇಂದ್ರ ಸರ್ಕಾರದವರು ತೋರಿಸಿದ್ದಾರೆ. ಆ ಸ್ಕೀಮನ್ನು ನಮ್ಮ ಸರ್ಕಾರದವರು ಜಾರಿಗೆ ತರುವಂತಹ ಏರ್ಪಾಡು ಮಾಡಬೇಕು. ಈ ಬಗ್ಗೆ ಯಾರೂ ಕೂಡ ಅಭಿನಂದನೆ ಕೊಟ್ಟವರು ಇಲ್ಲ. ಟೀಕೆ ಮಾಡುವಂತಹದು ನಮ್ಮ ಕರ್ತವ್ಯ, ಅಭಿನಂದನೆ ಮಾಡುವಂತಹದು ಅಲ್ಲ ಎಂದು ನಮ್ಮ ಸ್ನೇಹಿತರು ಹೇಳಬಹುದು. ಇನ್ನೊಂದು ವಿಷಯ ತ್ರೀಮಾನ್ ನರಸಿಂಗ್‌ರಾವ್‌ರವರು ಈ ಆಯವ್ಯಯ ಪಟ್ಟಿಯಲ್ಲಿ ರತಕ್ಕ ಅಂಕಿ ಅಂಶಗಳನ್ನು ಇತರ ಕೆಲವು ರಾಜ್ಯಗಳ ಅಂಕಿಅಂಶಗಳೊಡನೆ ಹೋಲಿಸಿದರು. ಈ ಹೊತ್ತು ಆಂಧ್ರ, ಅಸ್ಸಾಂ, ಗುಜರಾತ್, ಕೇರಳ, ಮಧ್ಯಪ್ರದೇಶ, ಮದ್ರಾಸ್ ಮತ್ತು ಮಹಾರಾಷ್ಟ್ರ, ಪಂಜಾಬ್ ಇತ್ಯಾದಿ ರಾಜ್ಯಗಳ ಆಯವ್ಯಯ ಪಟ್ಟಿಯನ್ನು ಅಲ್ಲಿಯ ಜನ ಸಂಖ್ಯೆ, ಅಲ್ಲಿ ಬರತಕ್ಕ ರೆವಿನ್ಯೂ ಮತ್ತು ಅಲ್ಲಿನ ಎಕ್ಸ್‌ಪೆಂಡಿಚರ್ ಎಷ್ಟೆಷ್ಟಿದೆ ಎಂಬುದನ್ನು ನಮ್ಮ ರಾಜ್ಯದ ಆಯವ್ಯಯ ಪಟ್ಟಿಯೊಂದಿಗೆ ಹೋಲಿಕೆ ಮಾಡಿ ನೋಡಿದರೆ ನಾವು ನಮ್ಮ ಆಯವ್ಯಯ ಪಟ್ಟಿಯ ಬಗ್ಗೆ ಅಷ್ಟೇನೂ ವಿಷಾದಪಡಬೇಕಾಗಿಲ್ಲ. ನಾವಿನ್ನೂ ಹೆಮ್ಮೆ ಪಡಬಹುದಾಗಿದೆ. ಈ ದಿವಸ ಪ್ರತಿಯೊಂದು ರಾಜ್ಯಗಳ ರೆವಿನ್ಯೂ ಏನಿದೆ ಮತ್ತು ಅವುಗಳ ಎಕ್ಸ್‌ಪೆಂಡಿಚರ್ ಏನಿದೆ ಎಂಬುದನ್ನು ನೋಡುವುದಾದರೆ—ಆಂಧ್ರ ಪ್ರದೇಶದಲ್ಲಿ ಇರತಕ್ಕ ಪ್ರಜಾಸಂಖ್ಯೆ ಉತ್ಪನ್ನ ಮತ್ತು ಅದರ ಖರ್ಚನ್ನು ನೋಡಿದರೆ ಅಲ್ಲಿ ಪ್ರತಿಯೊಂದು ತಲೆಗೂ 55 ರೂಪಾಯಿನ ವರಮಾನವಿದ್ದರೆ ಪ್ರತಿಯೊಂದು ತಲೆಗೂ 56 ರೂಪಾಯಿಗಳನ್ನು ಖರ್ಚುಮಾಡುತ್ತಿದೆ. ಅದೇ ರೀತಿ ಅಸ್ಸಾಮಿನಲ್ಲಿ ಪ್ರತಿಯೊಂದು ತಲೆಯ ವರಮಾನ 75 ರೂಪಾಯಿಗಳಿದ್ದರೆ ಅಲ್ಲಿ ಪ್ರತಿಯೊಂದು ತಲೆಗೂ ಖರ್ಚಾಗುತ್ತಿರುವುದು 75 ರೂಪಾಯಿಗಳು. ಗುಜರಾತಿನಲ್ಲಿ ತಲಾ ಆದಾಯ 82 ರೂಪಾಯಿಗಳಿದ್ದರೆ, ತಲಾ ವೆಚ್ಚ 72 ರೂಪಾಯಿಗಳಿವೆ. ಕೇರಳದಲ್ಲಿ ತಲಾ ಆದಾಯ 77 ರೂಪಾಯಿಗಳಿದ್ದರೆ ಅಲ್ಲಿ ತಲಾ ವೆಚ್ಚ 84 ರೂಪಾಯಿಗಳು. ಅಂದರೆ ಅಲ್ಲಿ ಖೋತಾ ಬಜೆಟ್ ಎಂದು ಹೇಳಬಹುದು. ಮಧ್ಯಪ್ರದೇಶದಲ್ಲಿ ತಲಾ ಆದಾಯ 54 ರೂಪಾಯಿಗಳು—ತಲಾ ವೆಚ್ಚ ಖರ್ಚೂ ಕೂಡಾ ಅಷ್ಟೇ ಇದೆ. ಇನ್ನು ಮದ್ರಾಸಿನಲ್ಲಿ ತಲಾ ಆದಾಯ 73 ರೂಪಾಯಿಗಳು, ತಲಾ ವೆಚ್ಚ 72 ರೂಪಾಯಿಗಳು. ಅಂದರೆ ಅಲ್ಲಿ 74 ಲಕ್ಷ ರೂಪಾಯಿಗಳ ನರ್‌ಪ್ಲಸ್ ಬಜೆಟ್ ಆಯಿತು. ಇನ್ನು ಮಹಾರಾಷ್ಟ್ರದಲ್ಲಿ ತಲಾ

(ಶ್ರೀ ಕೆ. ಪೂರ್ಣನಾರಾಯಣ ಅಡಿಗ)

ವರಮಾನ 86 ರೂಪಾಯಿಗಳು. ಅಲ್ಲಿ ತರಾ ಒಂದಕ್ಕೆ ಮಾಡತಕ್ಕ ವೆಚ್ಚ 81 ರೂಪಾಯಿಗಳು. ನಮ್ಮ ಮೈಸೂರಿನಲ್ಲಿ ಹಾಲ ಮುಂಡಿಸಿರತಕ್ಕ ಬಡ್ಜೆಟನ್ನು ನಾವು ನೋಡಿದರೆ ಜನವೊಂದಕ್ಕೆ 83 ರೂಪಾಯಿಗಳ ಆದಾಯವಿದ್ದರೆ ಇಲ್ಲ ಜನವೊಂದಕ್ಕೆ 81 ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಇನ್ನು ಪಂಜಾಬನ್ನು ತೆಗೆದುಕೊಂಡರೆ ಅಲ್ಲ ಜನವೊಂದಕ್ಕೆ 37 ರೂಪಾಯಿಗಳ ಆದಾಯವಿದ್ದರೆ ಜನವೊಂದಕ್ಕೆ 34 ರೂಪಾಯಿಗಳನ್ನು ಖರ್ಚುಮಾಡುತಾ್ತರೆ. ಆ ಮಹಾರಾಷ್ಟ್ರ ಒಂದನ್ನು ಬಿಟ್ಟರೆ ನಾವು ಅಂದರೆ ನಮ್ಮ ರಾಜ್ಯ ಮೂರೋ ಅಥವಾ ನಾಲ್ಕನೆಯ ಸ್ಥಾನದಲ್ಲೋ ಇರುತ್ತದೆ. ನಮ್ಮ ರಾಜ್ಯದಲ್ಲ ಎಷ್ಟು ಜನ ಸಂಖ್ಯೆ ಇದೆ, ಇಲ್ಲನ ವರಮಾನವೆಷ್ಟು ಮತ್ತು ಇಲ್ಲಿಯ ಆದಾಯವೆಷ್ಟು ಎಂಬುದನ್ನು ಗಮನಿಸಿದಾಗ ನಾವೇನೂ ನಾಚಿಕೆಪಡಬೇಕಾಗಿಲ್ಲ. ನಮ್ಮದು ಒಂದು ವೇಳೆ ಖೋತಾ ಬಡ್ಜೆಟ್ಟೇ ಇದ್ದಾಗ್ಗೂ ಅದೇನೂ ಅಂಥಾ ಅವಮಾನವಲ್ಲ. ನಮ್ಮ ಅವಶ್ಯಕತೆಯೇನಿದೆಯೋ ಅದನ್ನು ಒದಗಿಸತಕ್ಕದ್ದು ಅಥವಾ ಅದನ್ನು ಪೂರೈಸುವುದಕ್ಕೆ ಹಣವನ್ನು ಎಲ್ಲಿಂದ ತರಬೇಕು ಎನ್ನುವುದು ಅನ್ನುವುದನ್ನು ನಾವು ಮುಖ್ಯವಾಗಿ ನೋಡಬೇಕು. ನಾನು ಡಿಫಿಸಿಟ್ ಬಡ್ಜೆಟ್ಟನ್ನು ಪ್ರೋಗ್ರೆಸೀವ್ ಬಡ್ಜೆಟ್ ಎಂದು ಕರೆಯುತ್ತೇನೆ. ಜನರಿಗೇನು ಅವಶ್ಯಕತೆ ಇದೆ ಅದನ್ನು ಒದಗಿಸಿ ಕೊಡಬೇಕಾದ್ದು ಜನರಿಗೆ ಹೆಚ್ಚು ಹೆಚ್ಚಿನ ಅನುಕೂಲಗಳನ್ನು ಕಲ್ಪಿಸಬೇಕಾದ್ದು ಸರ್ಕಾರದ ತರ್ಕವ್ಯ. ಅದಕ್ಕೆ ಹಣವನ್ನು ಹೆಚ್ಚು ಖರ್ಚುಮಾಡಲೇಬೇಕು. ಈ ದಿವಸ ನಮ್ಮ ಎಜ್.ಜಿ.ಓ.ಗಳಿಗೆ ಕೊಡತಕ್ಕ ತುಟ್ಟಿ ಭತ್ಯವನ್ನು ಒಟ್ಟಾಗಿ ನಗದು ಪಾವತಿಮಾಡಿದರೆ ನಮ್ಮ ಬಡ್ಜೆಟ್ ಖೋತಾ ಬಡ್ಜೆಟ್ಟಾಗುತ್ತೆಂದು ಕೆಲವರು ಹೇಳಬಹುದು. ಆದರೇನು ? ಅದಕ್ಕೆ ನಾವು ನಾಚಿಕೆಪಡ ಬೇಕಾಗಿಲ್ಲ. ಶ್ರೀಮಾನ್ ಎಂ. ಸಿ. ನರಸಿಂಹರವರು ಪರವಹಿಸಿ ಮಾತನಾಡತಕ್ಕ ಕೇರಳದಲ್ಲೇ ಕಂಡಾಬಟ್ಟೆ ಖೋತಾ ಬಡ್ಜೆಟ್ಟಾಗಿದೆ ಅನ್ನುವ ಒಂದು ವಿಚಾರವನ್ನು ನಾನು ಮಾನ್ಯ ಸಭಾಪತಿಗಳ ಮೂಲಕ ಈ ಮಾನ್ಯ ಸಭೆಯ ಗಮನಕ್ಕೆ ತರಬಯಸುತ್ತೇನೆ.

ಈಗ ನಾನು ಇನ್ನೊಂದು ವಿಚಾರವನ್ನು ಹೇಳಬೇಕಾಗಿದೆ. ನಮ್ಮ ರಾಜ್ಯವು ಕನ್ನಡ ಭಾಷೆಯು ರಾಜ್ಯವಾಗಿದೆ. ಆದುದರಿಂದ ಕನ್ನಡವನ್ನು ರಾಜ್ಯಭಾಷೆ ಮಾಡಬೇಕೆಂಬುದನ್ನು ನಾವೆಲ್ಲರೂ ಒಪ್ಪಿದ್ದೇವೆ. ಆದುದರಿಂದ ಈ ದಿವಸ ನಮ್ಮ ಕೈಗೆ ಬರತಕ್ಕ ಶಾಸನ ಸಭೆಯ ಕಾಗದ ಪತ್ರಗಳೆಲ್ಲಾ ಕನ್ನಡದಲ್ಲೂ ಬರುತ್ತಿವೆ. ಇಲ್ಲಿಯತನಕ ನಮ್ಮ ಅರ್ಥಮಂತ್ರಿಗಳು ಇಡುತ್ತಿದ್ದ ಬಡ್ಜೆಟ್ ಬರವಣಿಗೆಯಲ್ಲಾ ಕೇವಲ ಇಂಗ್ಲೀಷಿನಲ್ಲ ಮಾತ್ರ ಇರುತ್ತಿತ್ತು. ಈ ದಿವಸ ಅದನ್ನು ಇಂಗ್ಲೀಷಿನ ಕೆಳಭಾಗದಲ್ಲಿ ಕನ್ನಡದಲ್ಲೂ ನಮೂದಿಸಿಟ್ಟಿದ್ದಾರೆ. ಆದರೆ ಕೆಲವರು ಕನ್ನಡದ್ದನ್ನೇ ಪ್ರತ್ಯೇಕವಾಗಿ ಕೊಟ್ಟಿದ್ದರೆ ಚೆನ್ನಾಗಿತ್ತೆಂದು ಹೇಳುತ್ತಿದ್ದರು. ಇಲ್ಲ ಸರ್ಕಾರದವರು ಮೊದಲು ಇಂಗ್ಲೀಷಿನಲ್ಲಿ ಅಚ್ಚುಮಾಡಿದುದರ ಕೆಳಭಾಗದಲ್ಲಿ ಕನ್ನಡದಲ್ಲಿ ಅದನ್ನು ಅಚ್ಚುಮಾಡಿಸಿದ್ದಾರೆ. ಇದು ಬಹಳ ಅನುಕೂಲವಾಗಿದೆ. ನಮಗೆ ಮೊದಲು ಕನ್ನಡ ಶಬ್ದವನ್ನು ಯಾವ ಇಂಗ್ಲೀಷ್ ಶಬ್ದಕ್ಕೆ ಉಪಯೋಗಿಸಿಬ್ಬಾರೆಂಬುದನ್ನು ತಿಳಿಯಲು ಕಷ್ಟವಾಗುತ್ತಿತ್ತು. ಈಗ ಅಂಥ ಕಷ್ಟಕ್ಕೆ ಅವಕಾಶವಿಲ್ಲ. ಆದುದರಿಂದ ಸರ್ಕಾರದವರು ಈ ದಿವಸ ಮಾಡಿರತಕ್ಕದ್ದೇ ಸರಿಯಾಗಿರುವಂತೆ ನನಗೆ ಕಂಡು ಬರುತ್ತಿದೆ. ನಾವು ಬಜೆಯನ್ನು ಕಾಪಡ್ ಅಂತ ಹೇಳುತ್ತೇವೆ. ಯಾವ ಒಂದು ಪದವನ್ನೇ ಆಗಲ ನಾವು ಹತ್ತಾವರ್ತಿ ಬಾಯಲ್ಲಿ ಹೇಳುತಾ್ತ ಬಂದರೆ ಅದೇ ಅಭ್ಯಾಸವಾಗುತ್ತದೆ. ಬಿ.ಡಿ.ಟಿ. ಕಾಲೇಜ್ ಆಫ್ ಇಂಜಿನಿಯರಿಂಗ್ ಅನ್ನುವುದಕ್ಕೆ ಶಿಲ್ಪಕಾರ್ಯ ಮಹಾವಿದ್ಯಾಲಯ ಎಂಬುದಾಗಿ ಕನ್ನಡದಲ್ಲ ತರ್ಜುಮೆ ಮಾಡಿದ್ದಾರೆ. ಮೇಲನ ಇಂಗ್ಲೀಷ್ ಪದಗಳನ್ನು ನಾವು ನೋಡದೆ ಕನ್ನಡ ಪದಗಳನ್ನೇ ನೋಡಿದರೆ ನಮಗೆ ಅದು ಏನು ಎಂಬುದೇ ಅರ್ಥವಾಗುವುದಿಲ್ಲ. ಅದು ಯಾವ ಕಾರೇಜು ಎಂಬುದೂ ಗೊತಾ್ತಗುವುದಿಲ್ಲ. ಆದ್ದರಿಂದ ಸರ್ಕಾರದವರು ಮಾಡಿರತಕ್ಕದ್ದು ಸೂಕ್ತವೆಂದು ಹೇಳುತ್ತೇನೆ. ಸರ್ಕಾರದವರು ಇನ್ನು ನಮ್ಮ ರಾಜ್ಯದಲ್ಲಿ ಹೆಚ್ಚು ಹೆಚ್ಚು ಕನ್ನಡ ವನ್ನು ಜಾರಿಗೆ ತರಬೇಕೆಂದು, ಬಳಕೆಯಲ್ಲೂ ತರಬೇಕೆಂದು ನಿರ್ಧಾರ ಮಾಡಿದ್ದಾರೆ. ಮಾಡು ತ್ತಲೂ ಇದ್ದಾರೆ. ಹಾಗೂ ಬಡ್ಜೆಟ್ಟಿನಲ್ಲಿ ಅದಕ್ಕೆ ಹಣವನ್ನೂ ತೆಗೆದಿಟ್ಟಿದ್ದಾರೆ.

ಆದರೆ ಇನ್ನೊಂದು ವಿಚಾರದಲ್ಲಿ ಟೀಕೆಗಳು ಬಂದಿವೆ. ಸರ್ಕಾರದವರು ತುಂಬಾ ಸಾಲ ಮಾಡಿದ್ದಾರೆ ಅದನ್ನು ಕೊಡತಕ್ಕವರು ಯಾರು ಎಂದು ! ಆದನ್ನು ಎಲ್ಲಿಂದ ತಂದು ಕೊಡುವುದು ? ನಮ್ಮಲ್ಲರತಕ್ಕ ಆ ಸಾಲವಾದರೂ ಎಷ್ಟು ಎಂದರೆ 347 ಕೋಟಿ ರೂ.ಗಳು. ಈ ಬಡ್ಜೆಟ್ ಸಾಲು ಮುಗಿದ ಮೇಲೆ ಅದು 369 ಕೋಟಿಗೆ ಏರಬಹುದು. ಸರ್ಕಾರದವರು ಹೆಚ್ಚು ಹಣವನ್ನು ಸಾಲ ಮಾಡಿದ್ದರೆ ಅದಕ್ಕೆ ತಕ್ಕ ಸಂಪನ್ಮೂಲಗಳನ್ನೂ ಮಾಡಿದ್ದಾರೆ. ಸಾಲ ಮಾಡಿ ತಂದ ಹಣವನ್ನು ಅವರೇನು ಸಮುದ್ರಕ್ಕೆ ಚೆಲ್ಲಲಲ್ಲ. ಆ ಹಣವನ್ನು ವಿದ್ಯಾಭಿವೃದ್ಧಿ, ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು

ಕಟ್ಟುವುದಕ್ಕೆ, ಕೆರೆಕಟ್ಟೆಗಳನ್ನು ಮಾಡಿಸುವುದಕ್ಕೆ ಇನ್ನು ಶರಾವತಿ ಇಂಥ ದೊಡ್ಡ ದೊಡ್ಡ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಬಳಸಿದ್ದಾರೆ. ನಮ್ಮಲ್ಲಿ ಈ ದಿವಸ 435 ಕೋಟಿ ರೂಪಾಯಿಗಳ ಆಸ್ತಿಯಿದೆ. ಅಷ್ಟು ಆಸ್ತಿ ಇಲ್ಲದಿದ್ದರೆ ಯಾರು ಈ ಸರ್ಕಾರಕ್ಕೆ ಇಷ್ಟು ಸಾಲವನ್ನು ಕೊಡುತ್ತಿದ್ದರು? ಅಲ್ಲದೆ ಈ ದಿವಸ ಇಷ್ಟು ಸಾಲವನ್ನು ನಮ್ಮ ಸರ್ಕಾರಕ್ಕೆ ಕೊಟ್ಟಿರತಕ್ಕವರಾದರೂ ಯಾರು? ನಮಗಿರತಕ್ಕ ಆ 369 ಕೋಟಿ ಸಾಲದಲ್ಲಿ ಮೂರನೆಯ ಎರಡು ಭಾಗದಷ್ಟು ಸಾಲವನ್ನು ಆ ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. ಅಂದರೆ ಅಷ್ಟು ಸಾಲವನ್ನು ತಂದೆ ಮಗನಿಗೆ ಸಾಲಕೊಟ್ಟ ಹಾಗೆ ಇರುತ್ತದೆ. ಮಗ ಸಾಲವನ್ನು ಕೊಡದಿದ್ದರೆ ತಂದೆ ಮಗನ ಮೇಲೆ ದಾವಾ ಹಾಕುವುದಕ್ಕಾಗುವುದಿಲ್ಲ. ಈ ಸಾಲವನ್ನು ನಮ್ಮ ಸರ್ಕಾರ ಪ್ರತಿ ವರ್ಷವೂ ಮರುಪಾವತಿ ಮಾಡುತ್ತಿದೆ. ಹಾಗೆ ಮರುಪಾವತಿ ಮಾಡತಕ್ಕ ಶಕ್ತಿ ನಮ್ಮ ಸರ್ಕಾರಕ್ಕೆ ಇರುವುದರಿಂದಲೇ ನಮಗೆ ಅಷ್ಟು ಸಾಲ ಸಿಕ್ಕಿದೆ. ಇಲ್ಲದಿದ್ದರೆ ಯಾರೂ ಅಷ್ಟು ಸಾಲವನ್ನು ಕೊಡುತ್ತಿರಲಿಲ್ಲ. ನಮ್ಮಲ್ಲಿ ಸಂಪನ್ಮೂಲಗಳು ಅಷ್ಟು ಹೆಚ್ಚಾಗಿವೆ. ನಮ್ಮ ಆರ್ಥಿಕ ಪರಿಸ್ಥಿತಿಯೂ ಅಷ್ಟು ಹೆಚ್ಚಾಗಿದ್ದುದರಿಂದಲೇ ನಮಗೆ ಇಷ್ಟು ಸಾಲ ಸಿಕ್ಕಿತು. ಆದ್ದರಿಂದ ಇದರ ಬಗ್ಗೆ ಯಾರೂ ಅಷ್ಟು ಟೀಕೆ ಮಾಡಬೇಕಾಗಿಲ್ಲ. ಮಾನ್ಯ ಸಭಾಪತಿಗಳೇ, ನಮ್ಮ ಬಜೆಟ್ ಪರಿಸ್ಥಿತಿ ಭದ್ರವಾಗಿದೆ. ಆದುದರಿಂದ ಇದರ ಬಗ್ಗೆ ಟೀಕೆ ಮಾಡತಕ್ಕದ್ದು ಅನವಶ್ಯಕ.

ಇನ್ನು ನಮ್ಮ ಇಂಡಸ್ಟ್ರಿಗಳನ್ನು ಕುರಿತು ಕೆಲವು ಟೀಕೆಗಳನ್ನು ಮಾಡಿದ್ದಾರೆ. ನಮ್ಮ ಕೈಗಾರಿಕೆಗಳಿಂದೇನೂ ಪ್ರಯೋಜನವಾಗಲಿಲ್ಲ ಎಂದು ಶ್ರೀ ಶ್ರೀಕಂಠಯ್ಯನವರು ಟೀಕೆ ಮಾಡಿದ್ದಾರೆ ಸರ್ಕಾರದವರು ಇವುಗಳನ್ನು ನಡೆಸುವುದಕ್ಕಾಗುವುದಿಲ್ಲ ಅದನ್ನು ಕೈಬಿಟ್ಟುಬಿಡಿ ಎಂದು ಹೇಳಿದ್ದಾರೆ. ಸರ್ಕಾರದವರು ಈ ಕೈಗಾರಿಕೆಗಳನ್ನು ಆರಂಭಮಾಡುವುದರಲ್ಲಿ ಎರಡು ದೃಷ್ಟಿ ಇಟ್ಟುಕೊಂಡು ಅವುಗಳನ್ನು ನಡೆಸುವುದಕ್ಕೆ ಹೊರಟಿದ್ದಾರೆ. ಒಂದು ಆಯಾಯ ಪ್ರದೇಶಗಳಲ್ಲಾರತಕ್ಕ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು. ಇನ್ನೊಂದು ದೃಷ್ಟಿ ಅಂದರೆ, ಜನರಿಗೆ ಉದ್ಯೋಗಗಳನ್ನು ಒದಗಿಸುವುದು. ಅನೇಕ ಜನರ ಕುಟುಂಬಗಳನ್ನು ಸಂರಕ್ಷಣೆ ಮಾಡಲು ಅನುಕೂಲವಾಗುವಂತೆ ಜನರಿಗೆ ಕೂಲಿಯ ಕೆಲಸಗಳನ್ನು ಒದಗಿಸುವುದು. ಈ ದೃಷ್ಟಿಯಿಂದ ಹಣವನ್ನು ಕೂಡಿಸಿ ಆ ಕೈಗಾರಿಕೆಗಳನ್ನು ಪ್ರಾರಂಭಮಾಡಿದ್ದಾರೆ.

ಈಗ ಎಂ.ಎಸ್.ಕೆ. ಮಿಲ್ಸ್‌ಗೆ ಏಕೆ ಸಾಲ ಕೊಟ್ಟರು? ಅದನ್ನು ಈಗ ಮುಚ್ಚಿದರೆ ಸುಮಾರು ಎರಡೂವರೆಸಾವಿರ ಕುಟುಂಬವರ್ಗದವರು ನಿರ್ಗತಿಕರಾಗುತ್ತಾರೆ. ಅದೇ ರೀತಿಯಲ್ಲಿ ಕೆಲವು ಸಿರ್ಕ್ ಫಿಲೇಚರ್ಸ್ ಫ್ಯಾಕ್ಟರಿಗಳನ್ನು ಸರ್ಕಾರದವರು ನಡೆಸುತ್ತಿದ್ದಾರೆ. ಅದರ ಪರಿಸ್ಥಿತಿಯನ್ನು ಕುರಿತು ಮಾನ್ಯ ಶ್ರೀ ಶ್ರೀಕಂಠಯ್ಯನವರು ಹೇಳಿದರು. ಅದರಲ್ಲಿ ಒಟ್ಟು ಇರುವಂಥ ಬಂಡವಾಳ ಎಷ್ಟು, ಅದರಲ್ಲಿ ಒದಗಿದಂಥ ಲಾಭವನ್ನು ನೋಡಿದರೆ ಸ್ವಲ್ಪಮಟ್ಟಿಗೆ ಅವರ ಟೀಕೆ ತಪ್ಪು ಎಂಬುದಾಗಿ ಹೇಳಲಿಕ್ಕೆ ಸಾಧ್ಯವಿಲ್ಲ. ಆದರೆ ಅವರು ಹೇಳಿದ ಧಾಟಿಯೇ ಬೇರೆ. ಕೇವಲ ಲಾಭಮಾಡುವುದಕ್ಕೇ ಸರ್ಕಾರ ನಡೆಸುವ ಉದ್ಯಮಗಳು ಆಗಬಾರದು. ಈಗ ರೇಷ್ಮೆ ಕೈಗಾರಿಕೆಯಲ್ಲಿ ನಷ್ಟವಾಯಿತು ಎಂದು ಅದನ್ನು ಬಂದ್ ಮಾಡಲಿ ಎಂದು ಹೇಳಬಹುದು. ಆದರೆ ಅಲ್ಲಿ ಕೆಲಸಗಾರರ ಪರಿಸ್ಥಿತಿ ಏನು ಎಂಬುದನ್ನು ನೋಡಬೇಕು. ಇವತ್ತು ಸರ್ಕಾರ ಇನ್ನೊಂದು ಫ್ರೂಟ್ ಕ್ಯಾನಿಂಗ್ ಕಂಪೆನಿಯನ್ನು ಕೊಟ್ಟು ಅದಕ್ಕೆ ಯಾರಾದರೂ ಬಂಡವಾಳವನ್ನು ಹಾಕಿ ಅದನ್ನು ಮಾಡಿ ಎಂದರೆ ಅಲ್ಲಿಗೆ ಎಷ್ಟು ಜನರು ಕೆಲಸಕ್ಕೆ ಹೋಗುತ್ತಾರೆಂಬುದನ್ನು ನೋಡಬೇಕು. ಮಾನ್ಯ ಶ್ರೀ ನರಸಿಂಹನ್ ಅವರು ಆ ರೀತಿ ಆಗಬಾರದೆಂದು ಹೇಳಿದರು. ಈ ದೃಷ್ಟಿಯಿಂದ ಅನೇಕ ಉದ್ಯಮಗಳನ್ನು ಸರ್ಕಾರ ನಷ್ಟವಾದರೂ ನಡೆಸುತ್ತಿದ್ದಾರೆಂದು ನನಗೆ ಅನ್ನಿಸುತ್ತದೆ.

ಇನ್ನು ಕನಕಪುರ ರೇಷ್ಮೆ ಫಿಲೇಚರ್ ಪರಿಸ್ಥಿತಿಯನ್ನು ನೋಡಿದರೆ ಅಲ್ಲಿಯೂ ನಷ್ಟವಾಗಿದೆ. ಹೀಗೆ ಮೂರು ಕಾರ್ಖಾನೆಗಳಲ್ಲಿಯೂ ಕಳೆದ 10-15 ವರ್ಷಗಳಲ್ಲಿ ಸರ್ಕಾರಕ್ಕೆ ಒಂದು ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ. ಆದಕಾರಣ ಕೈಗಾರಿಕೆ ಇರಾಖೆಗಳಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ನಡೆಯುತ್ತಾ ಇಲ್ಲವೆಂದು ಕೆಲವು ಮಾನ್ಯ ಸದಸ್ಯರು ಮಾಡಿರತಕ್ಕ ಟೀಕೆ ತಪ್ಪು ಎಂದು ಹೇಳಿರತಕ್ಕದ್ದೆಲ್ಲಾ ಒಪ್ಪತಕ್ಕದ್ದು. ಇವತ್ತು ಕೈಗಾರಿಕೆಗಳಿಂದ ಸರ್ಕಾರಕ್ಕೆ ಎಷ್ಟು ಉತ್ಪತ್ತಿ ಬಂದಿದೆಯೆಂಬುದನ್ನು ನೋಡಿದರೆ ಟೀಕೆಗಳು ಸರಿಯೆಂದು ಹೇಳಬಹುದು. ಆದರೆ ಟೀಕೆ ಮಾಡಿದ ರೆಂದು ಇದೆಲ್ಲ ಉದ್ಯಮಗಳನ್ನು ಬಂದ್ ಮಾಡಿ ಅಲ್ಲಿನ ಕೆಲಸಗಾರರನ್ನೆಲ್ಲಾ ಮನೆಗೆ ಕಳುಹಿಸತಕ್ಕದ್ದು ಸರ್ಕಾರಕ್ಕೆ ಸೂಕ್ತವಲ್ಲ. ಕೈಗಾರಿಕೆಗಳನ್ನು ಅಭಿವೃದ್ಧಿಮಾಡಬೇಕೆಂಬ ದೃಷ್ಟಿಯಿಂದ, ಅವರ ಕುಟುಂಬಗಳಿಗೋಸ್ಕರ ಒಂದು ಔದ್ಯೋಗಿಕ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಕೆಲವು ಕೈಗಾರಿಕೆಗಳನ್ನು ಆರಂಭಮಾಡಿದ್ದಾರೆ. ಸರ್ಕಾರದವರು ಅವನ್ನು ನಡೆಸಲಿಕ್ಕೆ ಸಾಧ್ಯವಿಲ್ಲದೆ

(ಶ್ರೀ ಕೆ. ಸೂರ್ಯನಾರಾಯಣ ಅಡಿಗ)

ಬಿಟ್ಟುಕೊಟ್ಟರೆ ಇದೀ ನ್ಯಾಷನಲೈಜೇಷನ್ ಸರ್ಕಾರ ಬಿಟ್ಟುಕೊಟ್ಟಂತಾಗುತ್ತದೆಂಬ ಸಂದೇಹ ಈಗಾಗಲೇ ಕೆಲವರಿಗೆ ಇರಬಹುದು. ಇವತ್ತು ಸರ್ಕಾರ ನಡೆಸುತ್ತಿರುವ ಉದ್ದಿಮೆಗಳಲ್ಲಿ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ ಒಂದು, ಇನ್ನೊಂದು ಸೋಪ್ ಫ್ಯಾಕ್ಟರಿ. ಈ ಎರಡು ಕಂಪೆನಿಗಳಲ್ಲಿ 28 ಲಕ್ಷ ರೂಪಾಯಿಗಳ ಬಂಡವಾಳವಿದೆ. ಈಗ ಸೋಪ್ ಫ್ಯಾಕ್ಟರಿಯಿಂದ ಸೇಕಡ 15ರಷ್ಟು ಲಾಭ ಸಿಗುತ್ತದೆ. ಮೈಸೂರು ಇಂಪ್ಲಿಮೆಂಟ್ಸ್ ಫ್ಯಾಕ್ಟರಿ, ಹಾಸನ ಇದರಿಂದ ಕೇವಲ ಸೇಕಡ 6ರಷ್ಟು ಸರ್ಕಾರಕ್ಕೆ ಲಾಭ ಸಿಗುತ್ತದೆ. ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿಯಿಂದ ಸರ್ಕಾರಕ್ಕೆ ಸೇಕಡ 5ರಷ್ಟು, ಸ್ವಾನ್ ಸಿರ್ಕ್ ಫ್ಯಾಕ್ಟರಿಯಿಂದ ಸರ್ಕಾರಕ್ಕೆ ಸೇಕಡ 5ರಷ್ಟು ಲಾಭ ಸಿಗಲು ಆರಂಭವಾಗಿದೆ. ಗೌರ್ನಮೆಂಟ್ ಸೆಂಟ್ರಲ್ ವರ್ಕ್ ಷಾಪ್‌ನಲ್ಲಿ ಲಾಭ ಅಷ್ಟಾಗಿ ಇಲ್ಲ. ಮೈಸೂರು ಸಿರ್ಕ್ ವೀವಿಂಗ್ ಫ್ಯಾಕ್ಟರಿಯಲ್ಲಿ ಸೇಕಡ 6ರಷ್ಟು ಲಾಭವಿದೆ. ಗೌರ್ನಮೆಂಟ್ ಸಿರ್ಕ್ ಫಿರೇಚರ್, ಕೊಳ್ಳೇಗಾಲ ಮತ್ತು ಮೈಸೂರು ಸಿರ್ಕ್ ಫಿರೇಚರ್, ಕನಕಪುರ ಮುಂತಾದ ಫ್ಯಾಕ್ಟರಿಗಳಿಂದ ಸುಮಾರು 10 ವರ್ಷಗಳಲ್ಲಿ ಒಂದೂವರೆ ಕೋಟಿ ರೂಪಾಯಿಗಳಷ್ಟು ಸರ್ಕಾರಕ್ಕೆ ನಷ್ಟವಾಗಿದೆ. ಸರ್ಕಾರ ಕೇವಲ ಲಾಭದ ದೃಷ್ಟಿಯನ್ನು ಇದರಲ್ಲಿ ನೋಡಿದ್ದರೆ ಇವು ಈಗಾಗಲೇ ಬಂದ್ ಆಗಬೇಕಾಗಿತ್ತು. ಆದರೆ ಸರ್ಕಾರ ಕೆಲಸಗಾರರ ಗತಿ ಏನಾಗಬೇಕು ಎಂಬುದನ್ನು ಸರ್ಕಾರ ನೋಡಿ ಅವನ್ನು ಮುಂದಾಗಿ ನಡೆಸುತ್ತಿದ್ದಾರೆ. ಈ ಉದ್ದಿಮೆಗಳಿಗೆ ಸರ್ಕಾರ ಎಷ್ಟು ಕೋಟಿ ರೂಪಾಯಿಗಳನ್ನು ಬಂಡವಾಳ ರೂಪದಲ್ಲಿ ಹಾಕಿದ್ದರೂ ಕೂಡ ಇಷ್ಟು ವರ್ಷಗಳಿಂದ ಈ ಮೂರು ಕಾರ್ಖಾನೆಗಳಲ್ಲಿಯೂ ಸುಮಾರು ಒಂದೂವರೆ ಕೋಟಿ ರೂಪಾಯಿಗಳಷ್ಟು ನಷ್ಟವಾಗಿದ್ದರೂ ಸರ್ಕಾರ ಇದುವರೆಗೆ ಏನು ಮಾಡುತ್ತಿತ್ತು ಎಂಬುದಾಗಿ ಕೆಲವು ಮಾನ್ಯ ಸದಸ್ಯರು ಕೇಳಿದರು. ಅವರ ಆ ಒಂದು ಸವಾಲು ತಪ್ಪು ಎಂಬುದಾಗಿ ನಾನು ಹೇಳುವುದಕ್ಕೆ ಸಾಧ್ಯವಿಲ್ಲ. ಕೇವಲ ಕಮಿಟಿಗಳನ್ನು ನೇಮಕಮಾಡಿ ಇನ್‌ವೆಸ್ಟಿಗೇಟ್ ಮಾಡುವುದಲ್ಲ, ಹೆಚ್ಚಿನ ಅನುಭವವಿರುವವರನ್ನು ಅಲ್ಲಿಗೆ ನೇಮಕ ಮಾಡಬೇಕು. ಸರ್ಕಾರದವರು ರಾಷ್ಟ್ರೀಕರಣ ಮಾಡಿದಕೂಡಲೇ ಕಮಿಟಿಯವರಿಗೆ ಯಾವುದಾದರೂ ಕೆಲಸಗಳನ್ನು ವಹಿಸಿ ಅವರು ಅವರ ಆಡಳಿತದಲ್ಲಿ ಏನಾದರೂ ಇಂತಹ ವಿಷಯಗಳು ನಡೆದರೆ ಅದು ತಪ್ಪು ಎಂಬುದಾಗಿ ಹೇಳಿದರೆ ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಆ ಕಾರ್ಖಾನೆಗಳನ್ನು ನಡೆಸುವುದಕ್ಕಾಗಿ ಆ ಉದ್ದಿಮೆಗಳಲ್ಲಿ ಅನುಭವ ಇದ್ದವರನ್ನು ಇಟ್ಟರೆ ಅವು ಚೆನ್ನಾಗಿ ನಡೆಯುತ್ತವೆ.

3-45 P.M.

ಇವತ್ತು ಲೈಫ್ ಇನ್‌ಷೂರೆನ್ಸ್ ಕಾರ್ಪೊರೇಷನ್‌ನಲ್ಲಿ ಚೆನ್ನಾಗಿ ಕೆಲಸ ನಡೆಯುತ್ತಾ ಹಿಂದೆ ಯಾರ್ಯಾರನ್ನು ನೇಮಕ ಮಾಡಿದ್ದರೋ ಅಂತಹವರನ್ನು ಈಗಲೂ ತಗೆದುಕೊಂಡು ಸರ್ಕಾರ ನೇಮಕ ಮಾಡಿದೆ. ಇವತ್ತು ಎಂ.ಎಸ್.ಆರ್.ಟಿ.ಸಿ.ಯಲ್ಲಿ ಮೋಟಾರ್ ಕಂಪೆನಿ ನಡೆಸುವ ಅನುಭವವಿದ್ದವರು ಯಾರೂ ಇಲ್ಲ. ಅಲ್ಲಿದ್ದು ಅನುಭವ ಮಾಡಿಕೊಳ್ಳುವಷ್ಟರೊಳಗೆ ಅಲ್ಲಿನ ಅಧಿಕಾರಿಗಳನ್ನು ತೆಗೆದು ಬೇರೆ ಇಲಾಖೆಗಳಿಗೆ ಹಾಕುತ್ತಾರೆ. ಇಂತಹ ಮೂರು ಸಿರ್ಕ್ ಫಿರೇಚರ್‌ಗಳಲ್ಲಿ ಅದೇ ರೀತಿಯಲ್ಲಿಯೇ ಆಗುತ್ತಿದೆ. ಅದೇಕೋ ಗೊತ್ತಿಲ್ಲ. ಈ ಕಾರಣದಿಂದ ಮಾನ್ಯ ಸದಸ್ಯರು ಮಾಡುವಂಥ ಟೀಕೆಗಳನ್ನು ಗಮನಿಸಿ ಸರ್ಕಾರ ಅದರ ಕಾರ್ಯನೀತಿಯನ್ನು ಬದಲಾಯಿಸಬೇಕು. ಬೊಂಬಾಯಿ ಮುಂತಾವ ಕಡೆಗಳಲ್ಲಿ ಇಂತಹ ಫ್ಯಾಕ್ಟರಿಗಳನ್ನು ನಡೆಸುವಂತಹವರು ಒಳ್ಳೆಯ ತಜ್ಞರಾಗಿರುತ್ತಾರೆ. ಅಲ್ಲಿನ ಅಧಿಕಾರಿಗಳಿಗೆ ಸಾವಿರಾರು ರೂಪಾಯಿಗಳ ಸಂಬಳವಿರುತ್ತದೆ. ಇಲ್ಲಿರತಕ್ಕ ಐ.ಎ.ಎಸ್. ಆಫೀಸರುಗಳಿಗೆ ಎರಡು ಸಾವಿರ ರೂಪಾಯಿಗಳ ಮೇಲೆ ಕೊಡುವುದಿಲ್ಲ. ಅದಕ್ಕಿಂತ ಕಡಿಮೆ ಸಂಬಳವಿರುವವರನ್ನು ಇಲ್ಲಿಡುವುದೇ ಇಲ್ಲವೆಂದು ಹೇಳುತ್ತಾರೆ. ಆದರೂ ಸುಮಾರು ಒಂದೂವರೆ ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ. ಎಷ್ಟೋ ಜನ ಉದ್ಯಮಿಗಳು ಇಂತಹ ಕಾರ್ಖಾನೆಗಳನ್ನು ಬಹಳ ಚೆನ್ನಾಗಿ ನಡೆಸುತ್ತಿದ್ದಾರೆ. ಅವರಿಗೆ ಆ ಕೈಗಾರಿಕೆಗಳ ವಿಚಾರ ಚೆನ್ನಾಗಿ ಗೊತ್ತು ಆದ್ದರಿಂದ ಈಗ ಅವರು ಹೇಳುವಂಥ ಸಂಬಳ ಕೊಟ್ಟು ಕಾಂಟ್ರಾಕ್ಟ್ ಬೇಸಿಸ್‌ನಲ್ಲಿ ಈ ಕಾರ್ಖಾನೆಗಳನ್ನು ನಡೆಸುವುದಕ್ಕೆ ಸರ್ಕಾರದವರು ತಕ್ಕ ಅಧಿಕಾರಿಗಳನ್ನು ನೇಮಕ ಮಾಡುವ ಅವಶ್ಯಕತೆ ಇದೆ. ಮಾನ್ಯ ಶ್ರೀ ಕಾಂತಪ್ಪಶೆಟ್ಟಿಯವರು ಇಂತಹ ಕಾರ್ಖಾನೆಗಳಿಗೆ ಯಾರನ್ನಾದರೂ ನೇಮಕ ಮಾಡುವಾಗ ತಜ್ಞರಾದವರನ್ನೇ ನೇಮಕ ಮಾಡಬೇಕು, ಲೆಜಿಸ್ಲೇಟರ್ಸ್ ಆಗಿರುವವರನ್ನೂ ನೇಮಕ ಮಾಡಬೇಕು ಎಂಬುದಾಗಿ ಹೇಳಿದರು. ಆ ಕಮಿಟಿಗಳಲ್ಲಿ ಯಾರ್ಯಾರಿಗೆ ಕೆಲಸ ಮಾಡುವುದರಲ್ಲಿ ಅನುಭವ, ಅರ್ಹತೆ ಇದೆಯೋ ಅಂತಹವರನ್ನೇ ಹಾಕಬೇಕು. ಈ ಮಾತು ನಾನು ಹೇಳಿದ್ದರಿಂದ ಇಂತಹವರನ್ನೇ ಇಂತಹ ಕಮಿಟಿಗಳಿಗೆ ಹಾಕಿ ಎಂಬುದಾಗಿ ನಾನು

ಹೇಳುವುದಿಲ್ಲ. ಒಂದು ವಿಚಾರವನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಆಯಾ ಸ್ಥಳದಿಂದ ಆರಿಸಿ ಬಂದಿರುವವರನ್ನು ಸರ್ಕಾರ ಚೆನ್ನಾಗಿ ಗಮನಿಸಿ ತಜ್ಞರಾದವರನ್ನು ಆ ಕಮಿಟಿಯೊಳಗೆ ನೇಮಕ ಮಾಡಿದರೆ ಒಳ್ಳೆಯದು. ಸಲಹಾ ಕಮಿಟಿಗಳನ್ನು ನೇಮಕ ಮಾಡಿದರೆ ನಿಜವಾಗಿ ಕಾರ್ಖಾನೆಗಳು ಚೆನ್ನಾಗಿ ನಡೆಯುತ್ತವೆ. ಸರ್ಕಾರದವರು ಕೈಗಾರಿಕೆಗಳ ಬಗ್ಗೆ ಬಡ್ಜೆಟ್ಟಿನಲ್ಲಿ ರೆವಿನ್ಯೂ ಮತ್ತು ಎಕ್ಸ್‌ಪೆಂಡಿಚರ್—ಇವೆರಡನ್ನೂ ತೋರಿಸಿದ್ದಾರೆ. ರೆವಿನ್ಯೂಗಿಂತ ಎಕ್ಸ್‌ಪೆಂಡಿಚರ್ ಬಹಳ ಜಾಸ್ತಿಯಾಗಿ ತೋರಿಸಿದ್ದಾರೆ. ಹಾಗಿರುವಾಗ ಕೈಗಾರಿಕೆಗಳ ಶಾಖೆಗೆ ಸರ್ಕಾರದವರು ಹೆಚ್ಚು ಪೊಲಿಸಿಗನ್ನು ಒದಗಿಸಬೇಕು. ಸರ್ಕಾರದವರೇ ನೇರವಾಗಿ ಕೆಲವು ಕೈಗಾರಿಕೆಗಳನ್ನು ನಡೆಸಬೇಕು. ಇದರಿಂದಾಗಿ ರೈತರಿಗೆ ಪಾರ್ಟ್ ಟೈಂ ಕೆಲಸವೂ ದೊರಕಿದಂತಾಗುತ್ತದೆ. ಆದರೆ ಸರ್ಕಾರದವರು ಇದೇ ರೀತಿ ನಷ್ಟವನ್ನು ಇನ್ನೂ ಹಲವಾರು ವರ್ಷಗಳ ಕಾಲ ಸಹಿಸುವುದರಲ್ಲಿ ಅರ್ಥವಿಲ್ಲ. ನನಗೆ 5 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಕೊಡಲಿ, ನಾನೇ ಫ್ಯಾಕ್ಟರಿಯನ್ನು ನಡೆಸುತ್ತೇನೆ. ಹೀಗೆ ಯಾರಾದರೂ ಬಹುಶಃ ತಜ್ಞರು ಒಂದು ಇಂತಹ ಕಾರ್ಖಾನೆಗಳನ್ನು ನಡೆಸಿದರೆ ಲಾಭ ನಿಜವಾಗಿ ಆದೀತು ಎಂದು ನಾನು ಹೇಳುತ್ತೇನೆ.

ಹಲವು ವರ್ಷಗಳಿಂದ ಒಂದೇ ರೀತಿ ನಡೆದುಕೊಂಡು ಬಂದರೆ ಅದು ಮಾಮೂಲು ಆಗುತ್ತದೆ. ಅನೇಕ ವರ್ಷಗಳಿಂದ ಅದರಲ್ಲಿ ನಷ್ಟವುಂಟಾಗಿದೆ. ಆದ್ದರಿಂದ ಅದು ಆ ರೀತಿ ನಡೆಯುವುದಕ್ಕೆ ಬಿಡುವಂಥಾದ್ದು ನ್ಯಾಯವಲ್ಲ. ತೆರಿಗೆಯನ್ನು ಹಾಕಲಿಕ್ಕೆ ಅನುಕೂಲವಿಲ್ಲ ಎಂದು ಅರ್ಥಸಚಿವರು ಹೇಳಿದ್ದಾರೆ. ಎಂ.ಎಸ್.ಆರ್.ಟಿ.ಸಿ. ರೆವಿನ್ಯೂ ಸರ್ಕಾರಿ ಉದ್ಯಮಗಳು ಇವುಗಳಿಂದ ಸಂಪನ್ಮೂಲಗಳನ್ನು ಹೆಚ್ಚಿಸಬೇಕು. ಎಂ.ಎಸ್.ಆರ್.ಟಿ.ಸಿ.ಯಲ್ಲಿ ರಾಂಗ್ ರೂಟ್‌ಗಳನ್ನು ರಾಷ್ಟ್ರೀಕರಣ ಮಾಡಿ ಸರ್ಕಾರದವರು ಇಟ್ಟುಕೊಂಡು ಸಣ್ಣ ಸಣ್ಣ ರೂಟುಗಳನ್ನು ಖಾಸಗಿಯವರಿಗೆ ಬಿಡುವುದು ಒಳ್ಳೆಯದು. ರಾಂಗ್ ರೂಟಿನಲ್ಲಿ ಸರ್ಕಾರಕ್ಕೆ ಲಾಭ ಬರುತ್ತದೆ. ಆಂಧ್ರ, ಕೇರಳ, ಮದ್ರಾಸು ಈ ಪ್ರದೇಶಗಳಲ್ಲಿ ರಾಂಗ್ ರೂಟುಗಳನ್ನು ಸರ್ಕಾರದವರೇ ಇಟ್ಟುಕೊಂಡು ಸಣ್ಣ ಸಣ್ಣ ರೂಟುಗಳನ್ನು ಖಾಸಗಿಯವರಿಗೆ ಬಿಟ್ಟುಕೊಟ್ಟಿದ್ದಾರೆ. ಅದೇ ರೀತಿ ನಮ್ಮಲ್ಲಿಯೂ ಸಹ ಸಣ್ಣ ಸಣ್ಣ ರೂಟುಗಳನ್ನು ಖಾಸಗೀಯವರಿಗೆ ಬಿಟ್ಟುಕೊಟ್ಟು ರಾಂಗರ್ ರೂಟುಗಳನ್ನು ಸರ್ಕಾರದವರೇ ಇಟ್ಟುಕೊಂಡು ಲಾಭವನ್ನು ಬೆಳೆಸುವ ಮನಸ್ಸು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆ ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಎಂ.ಎಸ್.ಆರ್.ಟಿ.ಸಿ.ಯವರು ಬಸ್ ಟ್ರಾನ್ಸ್‌ಪೋರ್ಟ್ ಸಾರಿಗೆಯನ್ನು ರಾಷ್ಟ್ರೀಕರಣ ಮಾಡುವುದನ್ನು ನಿಲ್ಲಿಸಿ ಗುಡ್ಸ್ ಟ್ರಾನ್ಸ್‌ಪೋರ್ಟ್ ರಾಷ್ಟ್ರೀಕರಣ ಮಾಡಿದರೆ ಒಳ್ಳೆಯ ಹೆಸರು ಬರುತ್ತದೆ ಎಂದು ವಿರೋಧ ಪಕ್ಷದವರು ಸಲಹೆ ಮಾಡಿದ್ದು ನಿಜವಾಗಿ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕು ಎಂದು ಸಲಹೆ ಮಾಡಿದ್ದಲ್ಲ. ಬಸ್ ಟ್ರಾನ್ಸ್‌ಪೋರ್ಟ್ ಅಥವಾ ಪ್ಯಾಸೆಂಜರ್ಸ್ ಟ್ರಾನ್ಸ್‌ಪೋರ್ಟನ್ನು ಉತ್ತಮಪಡಿಸಿ ಲೀಕೇಜನ್ನು ಪ್ಲಗ್‌ಮಾಡಿ ಸರಿಯಾದ ರೀತಿಯಲ್ಲಿ ನಡೆಸುವುದಾದರೆ ಸರ್ಕಾರದ ಜೊಕ್ಕಸಕ್ಕೆ ಹೆಚ್ಚಿನ ರಿಟರ್ನ್ ಬರುತ್ತದೆ. ಆದರೆ ಹೊಸ ಪ್ರಯೋಗ ಎಂದು ಗುಡ್ಸ್ ಟ್ರಾನ್ಸ್‌ಪೋರ್ಟ್ ರಾಷ್ಟ್ರೀಕರಣ ಮಾಡುವುದು ನ್ಯಾಯವಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನೊಂದು ವಿಷಯವೇನೆಂದರೆ, ಸಬ್‌ವೇ ಆಗುತ್ತದೆ ಎನ್ನುವ ಮಾತು ಇದೆ. ಅದು ಆಯವ್ಯಯ ಪಟ್ಟಿಯಲ್ಲಿ ಬರುವ ವಿಚಾರವಲ್ಲ. ಇದು ಕಾರ್ಪೊರೇಷನ್ ಬಡ್ಜೆಟ್ಟಿನಲ್ಲಿ ಬಂದಿರಬಹುದು ಎಂದು ಕಾಣುತ್ತದೆ. ಬೆಂಗಳೂರಿನಲ್ಲಿ ಜನ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಆದ್ದರಿಂದ ಸಬ್‌ವೇ ಮಾಡಿದರೆ ನೆಲದ ಅಡಿಯಲ್ಲಿ ಹೋಗುವುದಕ್ಕೆ ಅನುಕೂಲವಾಗುತ್ತದೆ. ಜನ ಸಂಚಾರಕ್ಕೆ ತೊಂದರೆಯಾಗುವುದಿಲ್ಲ. ಅಂಥಾದ್ದು ಎಲ್ಲಾ ಕಡೆಗಳಲ್ಲೂ ಬೆಂಗಳೂರಿನಲ್ಲಿ ಮಾಡುವಂಥಾದ್ದು ಅವಶ್ಯಕವಿದೆ. ಆ ರೀತಿ ಮಾಡುತ್ತಾರೆ ಎನ್ನುವಂಥಾದ್ದು ಒಂದು ಮಾತು ಹಿಂದಕ್ಕೆ ಪತ್ರಿಕೆಯಲ್ಲಿ ಓದಿದ್ದೇನೆ. ಅದನ್ನು ಅದಷ್ಟು ತೀವ್ರವಾಗಿ ಮಾಡುವಂತೆ ಸರ್ಕಾರ ಬೆಂಗಳೂರು ಕಾರ್ಪೊರೇಷನ್ನಿಗೆ ಸಲಹೆ ಕೊಡುವುದು ಅವಶ್ಯಕ ಇದೆ ಎಂದು ನಾನು ಈ ಸಂದರ್ಭದಲ್ಲಿ ಮಾನ್ಯ ಸಭಾಪತಿಗಳಲ್ಲಿ ಹೇಳಬಯಸುತ್ತೇನೆ. 1968-69ನೇ ಸಾಲಿಗೆ ಆಯವ್ಯಯ ಮಂಡನೆ ಮಾಡಿರುವಂಥಾದ್ದನ್ನು ಸ್ವಾಗತಿಸಿ ನಮ್ಮ ರಾಜ್ಯದ ಅಭಿವೃದ್ಧಿಗೆ ಅವಶ್ಯವಾದಂತಹ ಬಹುಮುಖ್ಯವಾದಂತಹ ಅಭಿವೃದ್ಧಿ ಹೊಂದುವಂತಹ ಬಡ್ಜೆಟ್ಟನ್ನು ಸರ್ಕಾರ ನಮ್ಮ ಮುಂದೆ ಮಂಡಿಸಿದ ಬಗ್ಗೆ ಸರ್ಕಾರವನ್ನು ಅಭಿನಂದಿಸಿ ಬಡ್ಜೆಟ್ಟಿನಲ್ಲಿ ಹೇಳಿದಂತೆ ನಾವೆಲ್ಲರೂ ಸರ್ಕಾರಕ್ಕೆ ಸರಿಯಾದ ಸಹಕಾರವನ್ನು ಕೊಟ್ಟು ಕೊಡತಕ್ಕಂಥ ತೆರಿಗೆಯನ್ನು ಸರಿಯಾಗಿ ಕೊಟ್ಟು ಸರ್ಕಾರಕ್ಕೆ ತಿಳಿಸತಕ್ಕ ವಿಚಾರವನ್ನು ಸರಿಯಾಗಿ ತಿಳಿಸಿ ಸಹಕರಿಸಿದರೆ ಇನ್ನು ಹೆಚ್ಚಿನ ಅಭಿವೃದ್ಧಿಯನ್ನು ಸಾಧಿಸಲಿಕ್ಕೆ ಸಾಧ್ಯ ಇದೆ. ಸರ್ಕಾರಕ್ಕೆ ನಷ್ಟವಾಗುವಂತಹ ಸಂದರ್ಭದಲ್ಲಿ ನಷ್ಟ ಆಗಲಿಕ್ಕೆ ಬಿಡದೆ ನಾವು ಸರ್ಕಾರಕ್ಕೆ ಸಲಹೆಗಳನ್ನು ಕೊಟ್ಟು ರಾಜ್ಯದ ಅಭಿವೃದ್ಧಿಗೆ ಸಹಕರಿಸಬೇಕು ಎನ್ನುವಂತಹ ಮಾತನ್ನು ಸಮರ್ಥಿಸಿ ಈ ಆಯವ್ಯಯ ಮಂಡನೆಗೆ ನನ್ನ ಬೆಂಬಲವನ್ನು ಕೊಡುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ (ಆರೋಗ್ಯ ಮತ್ತು ವಸತಿ ಶಂಖಗಳ ಮಂತ್ರಿಗಳು).—ಸ್ವಾಮಿ, ಮಾನ್ಯ ಸದಸ್ಯರಾದ ಶ್ರೀ ವೈ. ಎಸ್. ಪಾಟೀಲರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಅದಕ್ಕೆ ಏನಾದರೂ ಕೊಟ್ಟರೆ ಈ ಸಭೆಯಲ್ಲಿ ಬಂದಿರತಕ್ಕ ಅಭಿಪ್ರಾಯ ಬದಲಾವಣೆಯಾಗುತ್ತದೆ. ಅದಕ್ಕಾಗಿ ತಮ್ಮ ಅಪ್ಪಣೆಯನ್ನು ಕೇಳುತ್ತಿದ್ದೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ವೈ. ಎಸ್. ಪಾಟೀಲರು ಒಬ್ಬ ಡಾಕ್ಟರಿಗೆ ಅವರ ರಾಜೀನಾಮೆಯನ್ನು ಕೊಟ್ಟಿದ್ದನ್ನು ಒಪ್ಪಿಕೊಂಡಿದ್ದು ಆ ಮೇರೆ ಅವರು ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಕೊಟ್ಟು, ಸರ್ಕಾರದಿಂದ ಅವರಿಗೆ 35 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಈ ವಿಚಾರವನ್ನು ನಾನು ಎರಡು ನಿಮಿಷಗಳಲ್ಲಿ ಹೇಳುತ್ತೇನೆ. ಪ್ರಾಂತ ಸೈನ್ಯಾಂಗಡಣೆ ಆದಮೇಲೆ ಕೆಲವು ವೈದ್ಯರನ್ನು ಎರಡನೆಯ ದರ್ಜೆಯ ಅಧಿಕಾರಿಗಳು ಎಂದು ನಮ್ಮಲ್ಲಿ ಪರಿಗಣಿಸಿದ್ದೇವೆ. ಅವರು ಹೈಕೋರ್ಟಿನಲ್ಲಿ 54 ಜನ ಒಂದು ರಿಟ್ ಪಟಿಷನ್ ಹಾಕಿದರು. ಈ ಪೈಕಿ 55-ನೆಯವರು ಒಬ್ಬರು ನಮಗೆ ಕ್ಲಾಸ್ 2 ಫಸ್ಟ್ ಗ್ರೇಡ್ ಅಸಿಸ್ಟೆಂಟ್ ಸರ್ಜನ್ ಎಂದು ಕನಿಸಿಡರ್ ಮಾಡಿಲ್ಲ ಎಂದು ರಾಜೀನಾಮೆ ಕೊಟ್ಟರು. ಹೈಕೋರ್ಟಿನಲ್ಲಿ ನಡೆದ ವ್ಯವಹಾರದಲ್ಲಿ 54 ಜನರನ್ನೂ ಕೂಡ ಗ್ರೇಡ್ 1 ಅಸಿಸ್ಟೆಂಟ್ ಸರ್ಜನ್ಸ್ ಎಂದು ಪರಿಗಣಿಸಬೇಕು ಎಂದು ತೀರ್ಮಾನವಾಯಿತು. ಅವರು ಸರ್ವೀಸ್ ಮೇಲೆ ಇದ್ದರೆ ಅವರಿಗೆ 1956 ರಿಂದ ಯಾವ ಸ್ಥಾನವನ್ನು ಕೊಡಬೇಕಾಗಿತ್ತೋ ಆ ಸ್ಥಾನವನ್ನು ಕೊಟ್ಟಿದೆ. ಈ ಮಧ್ಯೆ 1961 ನೇ ಇಸವಿಯಲ್ಲಿ ಒಬ್ಬರು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಅವರು ತಮ್ಮ ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಒಂದು ಅರ್ಜಿಯನ್ನು ಹಾಕಿದರು. ನಮ್ಮಲ್ಲಿ ವೈದ್ಯರ ಅಭಾವ ಇರುವುದರಿಂದ ಆ ನಡುಮಧ್ಯೆ ರಾಜೀನಾಮೆ ಕೊಟ್ಟಿರುವವರು ರಾಜೀನಾಮೆ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಒಪ್ಪಿಕೊಂಡಿದ್ದೇವೆ. ಆ ರೀತಿ ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಂಡ ಅನೇಕ ನಿದರ್ಶನಗಳಿವೆ. ಎಲ್.ಎಂ.ಪಿ. ಕಂಡೆನ್ಸ್ಡ್ ಕೋರ್ಸ್ ಓದುವುದಕ್ಕೆ ಕೆಲವರು ರಾಜೀನಾಮೆಯನ್ನು ಕೊಟ್ಟರು. ಆಮೇರೆ ಅವರ ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ನಾನು ಅವಕಾಶವನ್ನು ಕೊಟ್ಟಿದ್ದೇನೆ. ಆ ರೀತಿ ಅವಕಾಶ ಮಾಡಿಕೊಟ್ಟ ಅಜ್ಜೆಯಲ್ಲಿ the earlier period intervening between 31st August 1961 and the date of assumption of charge will be treated as such leave as was at his credit on the date of acceptance of his resignation. The Director of Health Services has been requested to take action accordingly. ಎಂದು ಹೇಳಿದೆ. ಅದು ಇಲ್ಲದೇ ಇದ್ದರೆ ಲೀವ್ ವಿತ್‌ಔಟ್ ಅಲೋಯನ್ಸ್ ಮಾಡಬೇಕು. ಅವರ ಕ್ರೆಡಿಟ್ ನಲ್ಲಿ ಲೀವ್ ಇಲ್ಲದೇ ಇದ್ದರೆ ಆ ಪೀರಿಯಡ್ ಅನ್ನು ಲೀವ್ ವಿತ್‌ಔಟ್ ಅಲೋಯನ್ಸ್ ಎಂದು ಮಾಡಬೇಕೆಂದು ಮಾಡಿದೆ. ಅವರಿಗೆ ಪುನಃ ಪೋಸ್ಟ್ ಕೊಟ್ಟಿದೆ. ಅವರು ಪುನಃ ಕೆಲಸದಲ್ಲಿ 1965 ರಿಂದ 1967 ರವರೆಗೆ ಇದ್ದಾರೆ. ಅವರಿಗೆ ಲೀವ್ ಇದ್ದರೆ, ಎಷ್ಟು ಲೀವ್ ಇದೆ ಎಂಬುದನ್ನು ನೋಡಿಕೊಂಡು ಆ ಪೀರಿಯಡ್‌ನಲ್ಲಿ ಅವರಿಗೆ ಎಷ್ಟು ಸಂಬಳವನ್ನು ಕೊಡಬೇಕೆಂಬುದನ್ನು ನಿರ್ಧಾರ ಮಾಡಬೇಕಾಗುತ್ತದೆ. ಅವರಿಗೆ ಲೀವ್ ಇದ್ದಂತಹ ಅವಧಿಯಲ್ಲಿ ಮಾತ್ರ ಅವರಿಗೆ ಸಂಬಳವನ್ನು ಕೊಡುತ್ತೇವೆ. ಬೇರೆ ಅವಧಿಯಲ್ಲಿ ಅವರು ನಮ್ಮಲ್ಲಿ ಕೆಲಸ ಮಾಡದೆ ಇದ್ದಂತಹ ಅವಧಿಯಲ್ಲಿ ಅವರಿಗೆ ಸಂಬಳ ಸಾರಿಗೆಯನ್ನು ಕೊಡುವುದಿಲ್ಲ. ಇದು ಸರ್ಕಾರಿ ಆರ್ಡರಿನಲ್ಲಿ ನ್ಪಷ್ಟವಾಗಿದೆ.

ಇವ್ನೊಂದು ವಿಷಯ ಏನೆಂದರೆ 1956 ರಿಂದ 1961 ರವರೆಗೆ ಅವರನ್ನು ಒಂದನೇ ಗ್ರೇಡ್ ಅಸಿಸ್ಟೆಂಟ್ ಸರ್ಜನ್ಸ್ ಎಂದು ಪರಿಗಣಿಸಿ ಅವರಿಗೆ ಕೊಡಬೇಕಾದಂತಹ ಏನು ವ್ಯತ್ಯಾಸದ ಸಂಬಳ ಇದೆ ಅದನ್ನು ಬಹುಶಃ ಕೊಡಬೇಕಾಗಿ ಬರಬಹುದು. ಅದನ್ನು ಪರಿಶೀಲನೆ ಮಾಡುತ್ತೇವೆ. ಅಲ್ಲದೆ ಅವರು ರಾಜೀನಾಮೆಯನ್ನು ವಾಪಸ್ ತೆಗೆದುಕೊಳ್ಳಲಿ ಅಥವಾ ತೆಗೆದುಕೊಳ್ಳದೇ ಇರಲಿ, ಅವರು ರಾಜೀನಾಮೆಯನ್ನು ಕೊಡುವುದಕ್ಕಿಂತ ಮುಂಚೆ ಅಂದರೆ 1961 ಕ್ಕೆ ಮುಂಚೆ ನಾವು ಅವರಿಗೆ ಏನು ಸಂಬಳ ಸಾರಿಗೆಯನ್ನು ಕೊಡಬೇಕಾಗಿತ್ತೋ ಅದನ್ನು ಕಡ್ಡಾಯವಾಗಿ ಕೊಡಬೇಕಾಯಿತು. ಪುನಃ ಅವರನ್ನು ಕೆಲಸಕ್ಕೆ ತೆಗೆದುಕೊಂಡಮೇಲೆ ಅವರನ್ನು ಮೊದಲನೇ ಗ್ರೇಡ್ ಅಸಿಸ್ಟೆಂಟ್ ಸರ್ಜನ್ ಎಂದು ಮಾಡಿದ್ದೇವೆ. ನ್ಯಾಯವಾಗಿ ಅವರಿಗೆ ಸಲ್ಲಬೇಕಾದಂಥ ಸವಲತ್ತುಗಳನ್ನು ಕೊಟ್ಟಿದ್ದೇವೆ. ಅವರ ಜೊತೆಯವರಾದ ಸುಮಾರು 54 ಜನ ಹೈಕೋರ್ಟಿಗೆ ಹೋಗಿ ವ್ಯಾಜ್ಯ ಮಾಡಿ ಪಡೆದುಕೊಂಡಿದ್ದಾರೆ. ಈ ಮಧ್ಯೆ ರಾಜೀನಾಮೆ ಕೊಟ್ಟು ಪುನಃ ಕೆಲಸಕ್ಕೆ ಬರುವ ಅವಧಿಯಲ್ಲಿ ಅವರಿಗೆ ಹಕ್ಕಿನ ರಜಾ ಇದ್ದರೆ ಕೊಡುತ್ತೇನೆ. ಅಷ್ಟೊಂದು ದಿನ ಇರಲಾರದೆಂದು ಕಾಣುತ್ತದೆ. ರಜಾ ಹೆಚ್ಚು ಅವರಿಗೆ ಇಲ್ಲದಿದ್ದರೆ L.W.A. ಎಂದು ಪರಿಗಣಿಸುತ್ತೇವೆ. ಇದಕ್ಕಿಂತ ಹೆಚ್ಚಿನ ಸೌಲಭ್ಯ ಕೊಟ್ಟಿಲ್ಲ. ಬೇರೆಯವರಿಗೆ ಎಷ್ಟು ಲಭ್ಯವಾಗಿದೆಯೋ ಅಷ್ಟೇ ಸೌಲಭ್ಯ

ಇವರಿಗೂ ಆಗಿದೆ. ಇಷ್ಟು ಹೇಳುವುದಕ್ಕೆ ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MR. CHAIRMAN.—The House will rise and meet after half an hour.

The House rose at Four of the Clock to re-assemble at Thirty Minutes past Four of the Clock.

The House re-assembled at Thirty Minutes past Four of the Clock.

[MR. DEPUTY CHAIRMAN in the Chair]

BUDGET ESTIMATES FOR 1968-69-

(General Discussion)

(Debate Continued)

† ಶ್ರೀ ಕೆ. ನುಬ್ಬರಾವ್ (ಸ್ಥಾನೀಯ ಪ್ರಾಧಿಕಾರೀ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ರಾಜ್ಯಪಾಲರ ಭಾಷಣ ಪ್ರಾರಂಭವಾದಾಗಿನಿಂದ ಇದುವರೆಗೆ ಒಂದೇ ಸಮನಾಗಿ ದೇಶದಲ್ಲಿ ಪ್ರಗತಿ ಪರವಾದಂಥ ಮತ್ತು ಆಗಬೇಕಾದಂಥ ಕೆಲಸಕಾರ್ಯಗಳ ಬಗ್ಗೆ ಧೀರ್ಘವಾದಂಥ ಚರ್ಚೆಗಳು ಈ ಮನೆಯಲ್ಲಿ ನಡೆದಿವೆ. ಅಲ್ಲದೆ ಆಯವ್ಯಯ ಭಾಷಣದ ಬಗ್ಗೆ ಧೀರ್ಘವಾದಂಥ ಭಾಷಣಗಳಾಗಿವೆ. ಒಂದು ವೇಳೆ ನಾನು ಮಾತನಾಡುವಾಗ ಪುನರಾವರ್ತನೆಯಾಗಬಹುದು. ಹತ್ತಾರು ಜನ ಮಾನ್ಯ ಸದಸ್ಯರುಗಳು ಮಾತನಾಡಿದಮೇಲೆ ಹೊಸಬರು ಮಾತನಾಡುವುದಕ್ಕೆ ಅಡ್ಡಿಅಡಚಣೆಗಳಾಗುವುದು ಸ್ವಾಭಾವಿಕ. ಇತರರು ಹೇಳದೇ ಇರತಕ್ಕಂಥ ವಿಚಾರಗಳನ್ನು ನಾನು ಹೇಳಬೇಕಾಗುತ್ತದೆ. ಅದ್ದರಿಂದ ಹೊಸ ವಿಷಯಗಳ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ.

ಮುಖ್ಯವಾಗಿ ನಮ್ಮ ದೇಶದ ಪ್ರಗತಿಗೆ ಅತ್ಯಾವಶ್ಯಕವಾಗಿ ಆಗಬೇಕಾದಂಥ, ಪ್ರಾಮುಖ್ಯವಾಗಿ ಆಗಬೇಕಾದಂಥ ಕೆಲಸಕಾರ್ಯಗಳಲ್ಲಿ ವಿದ್ಯೆಗೆ ಅಗ್ರಮಾನ್ಯಸ್ಥಾನವಾಗಿ ಕೊಡಬೇಕಾಗಿದೆ. ಎರಡನೆಯ ಸ್ಥಾನವೆಂದರೆ ಆರ್ಥಿಕ ಪರಿಸ್ಥಿತಿ. ಆರ್ಥಿಕ ಪರಿಸ್ಥಿತಿ ಚೆನ್ನಾಗಿದ್ದರೆ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಸೌಲಭ್ಯವನ್ನು ಕೊಡಬಹುದೆಂದು ಹೇಳಬಹುದು. ಅಥವಾ ಜನರಿಗೆ ತಿಳಿವಳಿಕೆ ಚೆನ್ನಾಗಿ ಬಂದು ತಮ್ಮ ಕೆಲಸ ಕಾರ್ಯಗಳನ್ನು ಚೆನ್ನಾಗಿ ಮಾಡಿ ಹೆಚ್ಚು ಸಂಪಾದನೆಯನ್ನು ಮಾಡಿದರೆ ಆರ್ಥಿಕ ಪ್ರಗತಿ ತನ್ನಷ್ಟಕ್ಕೆ ತಾನೇ ಜಾಸ್ತಿಯಾಗುತ್ತದೆಂದು ಹೇಳಬಹುದು. ಈ ದೃಷ್ಟಿಯಿಂದ ಮೊದಲಿಗೆ ನಾನು ವಿದ್ಯಾಭ್ಯಾಸದ ವಿಷಯವಾಗಿ ಕೆಲವು ಸಲಹೆಗಳನ್ನು ಮಾನ್ಯ ಮಂತ್ರಿಗಳಾದ ಶ್ರೀಮಾನ್ ಶಂಕರಗೌಡರ ಅವಗಾಹನೆಗೆ ತರುವುದಕ್ಕೆ ಬಯಸುತ್ತೇನೆ. ವಿದ್ಯಾಭ್ಯಾಸಕ್ಕೋಸ್ಕರ ಹೇರಳವಾದಂಥ ಹಣವನ್ನು ನಮ್ಮ ಸರ್ಕಾರದವರು ಖರ್ಚುಮಾಡುತ್ತಿದ್ದಾರೆ ಎನ್ನುವ ವಿಚಾರದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಅದೇ ರೀತಿ ವಿದ್ಯಾಭ್ಯಾಸಕ್ಕೆ ಸರ್ಕಾರದವರು ಒದಗಿಸಿರುವ ಸೌಕರ್ಯಗಳನ್ನು ಮತ್ತು ಅನುಕೂಲಗಳನ್ನು ಕಂಡಿನ ಹತ್ತು ವರ್ಷಗಳಿಗೆ ಹೋಲಿಸಿ ನೋಡಿದರೆ ಹಲವು ಪಟ್ಟು ಶಾಲೆಗಳು ಜಾಸ್ತಿಯಾಗಿವೆ. ಎಲ್ಲಾ ಕಡೆಗಳಲ್ಲೂ ಪ್ರಾಥಮಿಕ ಮಾಧ್ಯಮಿಕ ಶಾಲೆಗಳು ವಿಪರೀತವಾಗಿ ಹೆಚ್ಚಿವೆ. ಈ ವಿಚಾರದಲ್ಲಿ ನಿಜಕ್ಕೂ ನಮ್ಮ ವಿದ್ಯಾ ಮಂತ್ರಿಗಳು ಮತ್ತು ಆರ್ಥಿಕ ಮಂತ್ರಿಗಳು ನನ್ನ ಅಭಿನಂದನೆಗೆ ಪಾತ್ರರಾಗುತ್ತಾರೆ. ವಿದ್ಯಾಭ್ಯಾಸದ ಒಂದು ವಿಸ್ತೀರ್ಣ ಮತ್ತು ಪ್ರಗತಿಯನ್ನು ತೆಗೆದುಕೊಳ್ಳುವ ಪಕ್ಷಕ್ಕೆ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದೇವೆ. ಕೇವಲ ಸ್ಕೂರ್‌ಗಳ ಸಂಖ್ಯೆ ಜಾಸ್ತಿಯಾಗಿದೆಯೆಂದು ನಾವು ತೃಪ್ತಿಪಟ್ಟುಕೊಂಡರೆ ಫಲವಿಲ್ಲ, ಈ ಬಗ್ಗೆ ಒಂದು ಗಾಧೆ ಹೇಳಬೇಕೆಂದರೆ, ತೋಟ ಶೃಂಗಾರ ಒಳಗೆ ನೋಡಿದರೆ ಸೊಪ್ಪು ಎಂಬಂತಾಗಿದೆ. ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಗುಣದ ಬಗ್ಗೆ ಎಷ್ಟು ಪ್ರಗತಿಯಾಗಿತ್ತೋ ಅಷ್ಟೊಂದು ಆಗುತ್ತಿಲ್ಲವೆಂದು ಮಾನ್ಯ ವಿದ್ಯಾ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಈ ಬಗ್ಗೆ ತೀವ್ರವಾದಂಥ ಸುಧಾರಣೆಗಳನ್ನು ಮಾನ್ಯ ವಿದ್ಯಾ ಮಂತ್ರಿಗಳು ತರಬೇಕಾಗಿದೆ. ಇಲ್ಲದಿದ್ದರೆ ವಿದ್ಯಾಭ್ಯಾಸಕ್ಕಾಗಿ ಇಷ್ಟೊಂದು

(ಶ್ರೀ ಕೆ. ಸುಬ್ಬರಾವ್)

ಹಣವನ್ನು ಖರ್ಚುಮಾಡುವುದು ನಿಜಕ್ಕೂ ಸಾರ್ಥಕವಾಗುವುದಿಲ್ಲ. ಈ ಬಗ್ಗೆ ಒಂದೇ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾವ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಒದುತ್ತಿರುವ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಏನು ಒಂದು ಒಳ್ಳೆಯದಾಗಲೀ ಅಥವಾ ಕೆಟ್ಟದ್ದಾಗಲೀ ಒತ್ತಲ್ಪಡುತ್ತದೋ ಅದೇ ಮುಂದೆ ಅವರ ಜೀವನದಲ್ಲಿ ಮುಂದುವರೆಯುತ್ತದೆಂಬುದು ಎಲ್ಲರೂ ಒಪ್ಪತಕ್ಕ ಮಾತು. ಮಕ್ಕಳ ಚಿಕ್ಕ ವಯಸ್ಸಿನಲ್ಲಿ ಅವರ ಮನಸ್ಸಿನ ಮೇಲೆ ಒಳ್ಳೆಯ ವಿಚಾರಗಳನ್ನು ಮೇಣದಂತೆ ಮುದ್ರೆ ಒತ್ತಬಹುದು. ಇದಕ್ಕೆ ಒಂದು ನಿದರ್ಶನ ಹೇಳಬಯಸುತ್ತೇನೆ: ಮಹಾತ್ಮ ಗಾಂಧಿಯವರು ತಮ್ಮ ಆತ್ಮ ಚರಿತ್ರೆಯಲ್ಲಿ ಈ ರೀತಿ ಬರೆದಿದ್ದಾರೆ; ನಾನು ಚಿಕ್ಕ ಹುಡುಗನಾಗಿದ್ದಾಗ ಹರಿಶ್ಚಂದ್ರ ನಾಟಕವನ್ನು ನೋಡಲು ಹೋಗಿದ್ದೆ, ಆ ನಾಟಕದಲ್ಲಿ ಹರಿಶ್ಚಂದ್ರನು ಸತ್ಯ ಕ್ಕೋಸ್ಕರವಾಗಿ ಏನು ಕಷ್ಟಪಟ್ಟ ಎಂಬ ಬಗ್ಗೆ ನನ್ನ ಮನಸ್ಸಿನ ಮೇಲೆ ಅಚ್ಚಳಿಯದೆ ಉಳಿದಿದೆ. ಮುಂದೆ ನಾನು ದೊಡ್ಡವನಾದ ಮೇಲೂ ಸಹ ಸತ್ಯಕ್ಕೋಸ್ಕರ ಬಹಳ ಹೊಡೆದಾಡಿದೆ, ಈ ಹರಿಶ್ಚಂದ್ರ ನಾಟಕ ನೋಡಿದ್ದರಿಂದ ನನ್ನ ಮನಸ್ಸಿನ ಮೇಲೆ ಅಚ್ಚಳಿಯದ ಪರಿಣಾಮ ಉಂಟಾಯಿತೆಂದು ಹೇಳಿದ್ದಾರೆ. ಮುಂದೆ ಇನ್ನೊಂದು ಉದಾಹರಣೆಯನ್ನು ಕೊಡುತ್ತಾರೆ: ನಾನು ಶ್ರವಣನ ಪಿತೃಭಕ್ತಿ ನಾಟಕವನ್ನು ನೋಡಿದೆ. ಆ ನಾಟಕದಲ್ಲಿ ಶ್ರವಣನು ತನ್ನ ತಂದೆ ತಾಯಿಗಳ ಸೇವೆಯನ್ನು ಯಾವ ರೀತಿ ಮಾಡಿದ ಎಂಬ ಬಗ್ಗೆ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ ಎಂದು ಹೇಳಿದ್ದಾರೆ. ಇದರ ಅರ್ಥವೇನೆಂದರೆ, ಚಿಕ್ಕ ವಯಸ್ಸಿನಲ್ಲಿ ಮಕ್ಕಳ ಮೇಲೆ ಯಾವ ವಿಧಾನದ ಶಿಕ್ಷಣವಿರುತ್ತದೋ ಅದೇ ಮುಂದೆ ಎಂದೆಂದಿಗೂ ಪ್ರಯೋಜನಕಾರಿಯಾಗುತ್ತದೆ, ಇಲ್ಲವೆ ವಿನಾಶಕಾರಿಯಾಗುತ್ತದೆಂದು ಹೇಳಬಹುದು. ಈಗ ಒಂದು ವಿಷಯಗಳನ್ನು ತೆಗೆದುಕೊಳ್ಳೋಣ, ಈಗ ಪ್ರತಿಯೊಂದು ಹಳ್ಳಿ ಹಳ್ಳಿಗೂ ಪ್ರಾಥಮಿಕ ಶಾಲೆಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಈ ಶಾಲೆಗಳಲ್ಲಿ ಕೆಲಸ ಮಾಡತಕ್ಕಂಥ ಉಪಾಧ್ಯಾಯರುಗಳು ಮಕ್ಕಳಿಗೆ ಕೊಡುತ್ತಿರುವ ವಿದ್ಯಾಭ್ಯಾಸದ ಕ್ರಮದಲ್ಲಿ ಬಹಳ ದೋಷಗಳಿವೆ ಎನ್ನುವುದನ್ನು ನಾನು ನಮ್ರತೆಯಿಂದ ಮಾನ್ಯ ವಿದ್ಯಾಮಂತ್ರಿಗಳಿಗೆ ತಿಳಿಸುತ್ತೇನೆ. ಅನೇಕ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳು ಮಕ್ಕಳಿಗೆ ಒಳ್ಳೆಯ ಅಭಿಮಾನದಿಂದ ಪಾಠವನ್ನು ಹೇಳುವುದು ಕಡಿಮೆಯಾಗಿದೆ. ಎಲ್ಲೋ ವಾಸ ಮಾಡುತ್ತಿರುತ್ತಾರೆ, ಯಾವಾಗಲೋ ಬಂದು ಸ್ಕೂಲ್‌ಗಳನ್ನು ತೆಗೆದು ಪಾಠ ಹೇಳುತ್ತಿದ್ದಾರೆ. ಕೆಲವು ಸಲ ಸ್ಕೂಲಿನ ಕದ ತೆಗೆಯುತ್ತಾರೋ ಇಲ್ಲವೋ ಎಂಬುದು ಸಹ ತಿಳಿಯುವುದಿಲ್ಲ. ಬೇರೆ ಕಡೆ ಕೆಲಸ ಸಿಗದವರು ಈ ಕೆಲಸಕ್ಕೆ ಬರುವುದು ಮತ್ತು ಡಿಗ್ರಿ ಕೋರ್ಸಿನಲ್ಲಿ ಒಂದು ಪಾರ್ಟ್ ಹೋಗಿದ್ದರೆ ಅದನ್ನು ಮಾಡಿ ಕೊಳ್ಳುವವರೆಗೆ ಇರಲಿ ಎಂದು ಉಪಾಧ್ಯಾಯರ ಕೆಲಸಕ್ಕೆ ಬರುವುದು, ಮತ್ತೆ ಬೇರೆ ಕಡೆ ಒಳ್ಳೆಯ ಕೆಲಸ ಸಿಕ್ಕಿದಾಗ ಇದನ್ನು ಬಿಟ್ಟು ಹೋಗುವುದು, ಈ ಕಾರಣಗಳಿಂದ ಅಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳು ಮಕ್ಕಳಿಗೆ ಸರಿಯಾಗಿ ಪಾಠ ಮಾಡುತ್ತಿಲ್ಲವೆಂದು ಹೇಳಬಹುದು. ಯಾವ ಇರಾಖೆಯಲ್ಲೂ ಕೆಲಸ ಸಿಕ್ಕದಿದ್ದಾಗ ವಿದ್ಯಾಭ್ಯಾಸದ ಇರಾಖೆಗೆ ಬಂದು ಸೇರುತ್ತಾರೆ; ಬೇಡವಾದಾಗ ಬಿಟ್ಟು ಹೋಗುತ್ತಾರೆ. ಬೇರೆ ದಾರಿ ಹುಡುಕುವವರೆಗೆ ಈ ಕೆಲಸದಲ್ಲಿ ಇರುತ್ತಾರೆ. ಇದರ ಪರಿಣಾಮ ವೇನಾಗುತ್ತದೆಂದರೆ ಈ ರೀತಿ ಬಂದು ಸೇರುವವರಿಗೆ ಮಕ್ಕಳಿಗೆ ಪಾಠ ಹೇಳುವ ವಿಚಾರದಲ್ಲಿ ಆಸಕ್ತಿಯಿರುವುದಿಲ್ಲ, ಶ್ರದ್ಧೆಯಿರುವುದಿಲ್ಲ. ಈ ವಿಚಾರದಲ್ಲಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಒಂದು ಅಂಶವನ್ನು ಪ್ರಸ್ತಾಪ ಮಾಡಿದ್ದಾರೆ. ಏನೆಂದರೆ ಉಪಾಧ್ಯಾಯರಾಗಿ ಬರತಕ್ಕಂಥವರಿಗೆ ಎರಡು ವರ್ಷವಾದರೂ ಶಿಕ್ಷಣ ಕೊಡಬೇಕು, ಆ ರೀತಿ ಶಿಕ್ಷಣ ಕೊಟ್ಟನಂತರ ಅವರು ಪ್ರಾಥಮಿಕ ಶಾಲೆಯ ಉಪಾಧ್ಯಾಯರಾಗಲು ಅರ್ಹರಾಗುತ್ತಾರೆಂದು. ಇದು ಒಳ್ಳೆಯ ಸಂತೋಷ ವಿಚಾರ. ಎರಡು ವರ್ಷ ಶಿಕ್ಷಣ ಪಡೆದ ಮೇಲೆ ತಾನು ಉಪಾಧ್ಯಾಯನಾಗಿ ಕೆಲಸಮಾಡಬೇಕೆಂಬ ಆಸಕ್ತಿ ಆತನಲ್ಲಿ ಬರುತ್ತದೆ. ಎರಡನೆಯದು—ಇನ್ನು ಅನೇಕ ಕಡೆಗಳಲ್ಲಿ ಶಾಲೆಗಳಲ್ಲರತಕ್ಕ ಕೊರತೆ ಏನೆಂದರೆ ಮಕ್ಕಳಿಗೆ ಸರಿಯಾಗಿ ಸಕಾಲದಲ್ಲಿ, ಶಿಸ್ತಿನಿಂದ, ಮತ್ತು ಕಾಲಕ್ಕೆ ಸರಿಯಾಗಿ ಅಭ್ಯಾಸಮಾಡುವ ಮಾರ್ಗವಿಲ್ಲ. ಇದರಲ್ಲಿ ಬಹಳ ಸುಧಾರಣೆಯಾದರೆ, ನಮ್ಮ ಪ್ರಮುಖವಾದ ವಿದ್ಯಾಭ್ಯಾಸಕ್ಕೆ ಬಹಳ ಅನುಕೂಲವಾಗುತ್ತದೆ. ಇನ್ನು ಮಾಧ್ಯಮಿಕ ಮತ್ತು ಹೈಸ್ಕೂಲು ತರಗತಿಗಳಲ್ಲರತಕ್ಕ ಪ್ರಾಮುಖ್ಯವಾದಂತಹ ದೋಷಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈಗ ಕೆಲವು ಶಾಲೆಗಳಲ್ಲಿ ನೂರಕ್ಕೆ ನೂರು ಜನ ತೇರ್ಗಡೆಯಾಗಲಿಲ್ಲ ಎನ್ನತಕ್ಕಂತಹ ಉದಾಹರಣೆಗಳು ಸಿಗುತ್ತದೆ. ಉದಾಹರಣೆಗೆ ನನ್ನಲ್ಲಿ ಒಬ್ಬ ವಿದ್ಯಾರ್ಥಿ ಬಂದ. ಆಗ ನಾನು ಹೈಸ್ಕೂಲಿನಲ್ಲಿ ಫ್ರೀಶಿಪ್ ಸಮಿತಿಗೆ ಸದಸ್ಯನಾಗಿದ್ದೆ. ನಾನು ಹೆಡ್‌ಮಾಸ್ಟರವರಿಗೆ ಹೇಳಿಕೊಂಡೆ. 'ಸ್ವಾಮಿ ಬಡವ, ಏನಾದರೂ ಸಹಾಯ ಮಾಡಿ ಎಂದು. ಆದರೆ ಆ ಹೆಡ್‌ಮಾಸ್ಟರ್ ಹೇಳಿದರು 'ಅವನು ಹೊಚ್ಚೆಗೆ ಬಡವನಾಗಿರಬಹುದು, ಆದರೆ ಅವನ ಸ್ಟಾಂಡರ್ಡ್ ಏನಿದೆ ಎಂಬುದನ್ನು ನೋಡಿ. ನಿಜವಾಗಿ ಮೊದಲನೆಯ

ತರಗತಿಯಷ್ಟೂ ಒಬ್ಬನ ಸ್ಟ್ಯಾಂಡರ್ಡ್ ಇಲ್ಲ. ನಾನು ಆ ಹುಡುಗನನ್ನು ಏನಪ್ಪಾ ಹೀಗೆ ಹೇಳುತ್ತಾರೆ ಎಂದು ಕೇಳಿದರೆ, ನನಗೆ ಏನೂ ಗೊತ್ತಿಲ್ಲ ಸಾರ್, ನನ್ನ ತಂದೆಯವರು ಹೆಡ್‌ಮಾಸ್ಟರಿಗೆ ಏನೋ ಕೊಟ್ಟು ಬಿಟ್ಟು ಒಂದು ಸರ್ಟಿಫಿಕೇಟ್ ಕೊಟ್ಟು ಬಿಟ್ಟರು ಎಂದು ಹೇಳಿದ. ಈ ರೀತಿ ತಾವು ಮಾಡತಕ್ಕ ಕರ್ತವ್ಯವನ್ನು ಎಷ್ಟು ಮಟ್ಟಿಗೆ ಮಾಡುತ್ತಾರೆ, ಅದರಿಂದ ಮಕ್ಕಳಿಗೆ ಹಾಗೂ ಮುಂದಿನ ಭವಿಷ್ಯಕ್ಕೆ ಎಷ್ಟು ಅನ್ಯಾಯವಾಗುತ್ತದೆ ಎಂಬುದು ಅವರ ಮನಸ್ಸಿಗೆ ಬರದಿದ್ದುದು ದುರ್ದೈವದ ಸಂಗತಿ.

ಇನ್ನೊಂದು ವಿಷಯ. ಇವರು ಶಾಲೆಗಳಲ್ಲಿ ಪಾಠ ಹೇಳುತ್ತಾರೋ ಅಥವಾ ಮನೆಯಲ್ಲಿ ಪಾಠ ಹೇಳುತ್ತಿದ್ದಾರೋ ಎಂಬ ವಿಚಾರ. ಯಾವ ಹೈಸ್ಕೂಲು ಉಪಾಧ್ಯಾಯರಾದರೂ 30–40 ವಿದ್ಯಾರ್ಥಿಗಳಿಗೆ ಪಾಠವನ್ನು ಬೆಳಿಗ್ಯೆಯಿಂದ ಸಾಯಂಕಾಲದವರೆಗೂ ಹೇಳುತ್ತಿದ್ದಾರೆ. ಈ ರೀತಿ ಪಾಠ ಹೇಳುವಾಗ ಅವರಿಗೆ ಶಾಲೆಗಳಿಗೆ ಬಂದು ಪಾಠ ಹೇಳುವುದಕ್ಕೆ ಶಕ್ತಿಯಾದರೂ ಎಲ್ಲಿರುತ್ತದೆ? ಮತ್ತು ಇದರಿಂದ ಏನಾಗಿದೆ ಎಂದರೆ ಉಪಾಧ್ಯಾಯರೊಳಗೆ ವೈರತ್ವ ಉಂಟಾಗಿದೆ. ನನ್ನ ಹತ್ತಿರ ಅವನು ಪಾಠಕ್ಕೆ ಬರುವುದಿಲ್ಲ, ಅವನನ್ನು ಪಾಸ್ ಮಾಡಿಸಬಾರದು, ಮತ್ತು ಇನ್ನೊಬ್ಬ ಅವನು ನನ್ನ ಹತ್ತಿರಕ್ಕೆ ಪಾಠಕ್ಕೆ ಬರುತ್ತಾನೆ, ಅವನನ್ನು ಏನಾದರೂ ಮಾಡಿ ಪಾಸ್ ಮಾಡಿಸಿ ಬೇಕು ಎಂಬ ಅಭಿಪ್ರಾಯಗಳು ಬಂದು ಪಂಗಡಗಳು ಉಂಟಾಗುತ್ತವೆ. ಈ ರೀತಿ ಗಂಡ ಹೆಂಡಿರ ಜಗಳದಲ್ಲಿ ಕೂನು ಬಡವಾಯ್ತು ಎಂಬ ಗಾದೆಯ ಹಾಗೆ, ಇವರ ಭೇದಭಾವಗಳಿಂದ ಮಕ್ಕಳ ಭವಿಷ್ಯವೇ ಹಾಳಾಗುತ್ತದೆ. ಇರಾಖೆಯ ಅಪ್ಪಣೆ ಪಡೆದು ಎರಡು ವಿದ್ಯಾರ್ಥಿಗಳಿಗೆ ಮಾತ್ರ ಪಾಠ ಹೇಳುವುದಕ್ಕೆ ಅನುಮತಿ ಕೊಡಬಹುದು ಎಂದು ಇದೆ. ಇಂದು ಅವರು ಇಬ್ಬರಲ್ಲ 20 ಜನಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಇರುವ ನಿಯಮವನ್ನು ಬಹಳ ಕಠಿಣವಾದ ರೀತಿಯಲ್ಲಿ ಜಾರಿ ಮಾಡಬೇಕು. ಈ ರೀತಿ ಮಾಡದಿದ್ದರೆ ಮಕ್ಕಳ ಪರಿಸ್ಥಿತಿಯು ಏನಾಗುತ್ತದೆಂಬುದನ್ನು ನಾವು ಮನಗಾಣಬೇಕು. ಹಳ್ಳಿಯ ಬಾಲಕರಿಗೆ ಸಿಗುವಂತಹ ಶಿಕ್ಷಣ ಸರಿಯಾಗಿ ದೊರೆಯದಿದ್ದರೆ, ಆ ಬಾಲಕರು ಮುಂದಕ್ಕೆ ಬರುವುದು ಬಹಳ ಕಷ್ಟವಾಗುತ್ತದೆ. ಪ್ರಥಮ ದರ್ಜೆಯಿಂದ ಸರಿಯಾದ ಶಿಕ್ಷಣ ಸಿಗದಿದ್ದರೆ, ಅವರ ಮನೆಯಲ್ಲ ತಂದೆತಾಯಂದಿರೂ ಅವಿದ್ಯಾವಂತರಾಗಿರುವುದರಿಂದ, ಮನೆಯಲ್ಲೂ ಶಿಕ್ಷಣ ಸಿಗುವುದು ಕಡಿಮೆ. ಏನಿದ್ದರೂ ಅವರು ಉಪಾಧ್ಯಾಯರನ್ನೇ ಅವಲಂಬಿ ಮಾಡಬೇಕಾಗುತ್ತದೆ. ಉಪಾಧ್ಯಾಯರು ಏನು ಬೋರ್ಡಿನಲ್ಲಿ ಬರೆಯುತ್ತಾರೋ, ಅದನ್ನೇ ಅವರು ತಿಳಿದುಕೊಂಡಿರಬೇಕಾಗುತ್ತದೆ. ಈ ರೀತಿಯಿಂದ ವಿದ್ಯಾಭ್ಯಾಸವಾದರೆ, ಅವುಗಳು ಮುಂದೆ ಬರುವಾಗ ಬಹಳ ಕಷ್ಟವಾಗುತ್ತದೆ. ಅದರಿಂದಾಗಿ ಕೊನೆಗೆ 100ಕ್ಕೆ 100 ಜನರೂ ಅನುತ್ತೀರ್ಣರಾಗುವ ಸಂದರ್ಭವಿರುತ್ತದೆ.

4–45 P.M.

ಇವತ್ತು ಉಪಾಧ್ಯಾಯರುಗಳಿಗೆ ಕೊಡತಕ್ಕ ಸಂಬಳ ಎಲ್ಲವನ್ನೂ ತೆಗೆದುಕೊಂಡರೆ ಸಾಧಾರಣ 3½ ಕೋಟಿ ರೂಪಾಯಿಗಳಾಗುತ್ತದೆ. ಇಷ್ಟು ಹಣವನ್ನು ನಾವು ಖರ್ಚು ಮಾಡುತ್ತಿರುವಾಗ ಅದಕ್ಕೆ ಸರಿಯಾಗಿ ಪ್ರತಿಫಲ ಬರದಿದ್ದರೆ, ಅದರಿಂದ ಪ್ರಯೋಜನ ಏನು? ಇದರ ಜೊತೆಯಲ್ಲಿ ಮತ್ತೊಂದು ದೋಷವಿದೆ. ಕೆಲವು ಶಾಲೆಗಳಲ್ಲಿ ಈ ಉಪಾಧ್ಯಾಯರುಗಳು ಹತ್ತಾರು ವರ್ಷ ಅಲ್ಲೇ ಇದ್ದು ಊರಿನ ರಾಜಕೀಯದಲ್ಲಿ ಪ್ರವೇಶ ಮಾಡುತ್ತಾರೆ. ಅವರಿಗೆ ಬೇರೆ ಏನು ಕೆಲಸವೂ ಇಲ್ಲ. ದೇಶದ ರಾಜಕೀಯದಲ್ಲಿ ಅರ್ಜಿ ಬರೆಯುವುದಕ್ಕೆ ಕೈಹಾಕುತ್ತಾರೆ. ಇದರಿಂದ ಊರಿನಲ್ಲೂ ಕೂಡ ಒಂದು ವೈಶಮ್ಯ ಉಂಟಾಗುವ ಪರಿಸ್ಥಿತಿ ಉಂಟಾಗುತ್ತದೆ. ಗುರುವು ಹಾಗೆ ಇದ್ದರೆ, ಇವರ ಹತ್ತಿರ ಕಲಯುತ್ತಿರುವ ಮಕ್ಕಳು ಕೂಡ ಗುರುವಿನಂತೆ ಶಿಷ್ಯರು ಎನ್ನುವಂತೆ ಮಕ್ಕಳೂ ಆ ರೀತಿ ಅಭ್ಯಾಸ ಮಾಡುವುದಕ್ಕೆ ಶುರು ಮಾಡುತ್ತಾರೆ. ಮಕ್ಕಳಲ್ಲಿಯೂ ಒಂದು ವೈಶಮ್ಯ ಬೆಳೆಯುವುದಕ್ಕೆ ನಾಂದಿಯಾಗುತ್ತದೆ. ಇವನ್ನೆಲ್ಲಾ ಮಾನ್ಯ ಮಂತ್ರಿಗಳು ಗಮನಿಸ ಬೇಕು. ಹಿಂದೆ ಯಾರು ಉಪಾಧ್ಯಾಯರಾಗಲಿ, ಒಂದು ಸ್ಥಳದಲ್ಲಿ 5 ವರ್ಷ ಇದ್ದಿದ್ದರೆ, ಅವರನ್ನು ಬೇರೆ ಸ್ಥಳಕ್ಕೆ ವರ್ಗಮಾಡಬಹುದು ಎಂಬ ನಿಯಮ ಇತ್ತು. ಈಗ ಆ ನಿಯಮ ಇದೆಯೋ ಇಲ್ಲವೊ ಎಂದು ಗೊತ್ತಿಲ್ಲ. ಇಲ್ಲದಿದ್ದರೆ ಅದನ್ನು ಮಾಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಕೇಳಿ ಕೊಳ್ಳುತ್ತೇನೆ. ಒಂದು ಊರಿಂದ ಇನ್ನೊಂದು ಊರಿಗೆ ಹೋದರೆ, ಏನೋ ನನ್ನ ಮೇಲೆ ಅರ್ಜಿ ಕಳಿಸುತ್ತಾರೆ, ನನ್ನ ಹುದ್ದೆಗೆ ತೊಂದರೆಯಾಗಬಹುದು ಎಂಬ ಒಂದು ಭಯವಿರುತ್ತದೆ; ಮತ್ತು ನಾವು ಮಾಡಿದ ಕೋಟ್ಯಾಂತರ ರೂಪಾಯಿಗಳಿಗೆ ಪ್ರತಿಫಲ ಬರುತ್ತದೆ. ಮೊನ್ನೆಯ ದಿನ ಒಂದು ಬಸ್ಸಿನಲ್ಲಿ ಹೇಳುತ್ತಿದ್ದರು, ಇಲ್ಲಿ ಬೇಕಾದಷ್ಟು ಖರ್ಚು ಮಾಡುತ್ತಿದ್ದಾರೆ, ಹೇಗೆಂದರೆ, ಒಂದು

(ಶ್ರೀ ಕೆ. ನುಚ್ಚಿರಾಪ್)

ಹನುಮನ್ನು ಚೆನ್ನಾಗಿ ಸಾಕಿ ಬಿಟ್ಟು ಕೊನೆಗೆ ಅದು ಬರಡು ಆದರೆ, ಹಾಲೇ ಕೊಡದಿದ್ದರೆ ಹೇಗೆ ಆಗುತ್ತದೋ ಹಾಗೆ ಆಗುತ್ತದೆ ಇಲ್ಲ ಎಂದು ಹೇಳುತ್ತಿದ್ದರು. ಈ ಆಯವ್ಯಯ ಅಂದಾಜಿಗೆ ನಮ್ಮ ಸಚಿವರನ್ನು ಅಭಿನಂದಿಸುವವರೂ ಇದ್ದಾರೆ, ಟೀಕೆ ಟಿಪ್ಪಣಿಗಳನ್ನು ಮಾಡುವವರೂ ಇದ್ದಾರೆ. ಆದರೆ ನಾನು ಬಯ್ಯುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ನಾನು ಏನಾದರೂ ಒಂದು ಸಲಹೆ ಕೊಟ್ಟರೂ ಅದನ್ನು ಖಂಡಿತವಾಗಿಯೂ ಕಾರ್ಯಗತ ಮಾಡತಕ್ಕ ಶಕ್ತಿ ಅವರಿಗೆ ಇದೆ, ಸಾಮರ್ಥ್ಯ ಇದೆ. ಮನಸ್ಸು ಇದೆ, ಹಾಗೂ ದಕ್ಷತೆ ಇದೆ, ಧೈರ್ಯ ಇದೆ. ಮಾನ್ಯ ಮಂತ್ರಿಯವರು ತನ್ನ ಅವಧಿಯೊಳಗೆ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳಲ್ಲಿರತಕ್ಕ ದೋಷಗಳನ್ನು ನಿವಾರಣೆ ಮಾಡಿ ಮುಂದಿನ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ಬರುವುದಾದರೆ, ನಿಜವಾಗಿಯೂ ದೇಶದ ಕೃತಜ್ಞತೆಗೆ ಮತ್ತು ಮುಂದಿನ ಜನಾಂಗದ ಕೃತಜ್ಞತೆಗೆ ಪಾತ್ರರಾಗುತ್ತಾರೆ ಎಂಬುದರಲ್ಲಿ ಏನೂ ಸಂಶಯವಿಲ್ಲ. ಮುಂದಕ್ಕೆ ಸರಿಯಾದ ಶಿಕ್ಷಣ ಬಾರದಿದ್ದರೆ, ಅದು ಮಕ್ಕಳಿಗೆ ತೊಂದರೆ ಯಾಗುತ್ತದೆ. ಹಿಂದೆ ಪಠ್ಯಪುಸ್ತಕಗಳಲ್ಲಿ ಕೂಡ ಅನೇಕ ನೀತಿಯುತವಾದ ಬುದ್ಧಿದಾಯಕವಾದ ಕತೆಗಳನ್ನು ಮತ್ತು ಮಹಾ ಪುರುಷರ ಚರಿತ್ರೆಗಳನ್ನು ಕೊಡುತ್ತಿದ್ದರು. ಹಾಗಿದ್ದರೆ ಆದರಿಂದ ಮಕ್ಕಳು ತಮ್ಮ ಭವಿಷ್ಯವನ್ನು ಯಾವುದೋ ಒಬ್ಬ ಮಹಾ ಪುರುಷನನ್ನು ಆಧಾರ ವಾಗಿಟ್ಟುಕೊಂಡು ಮುಂದಿನ ಜೀವನವನ್ನು ರೂಪಿಸಿಕೊಳ್ಳುತ್ತಾರೆ, ಅಂಥ ಒಂದು ಮನೋಭಾವ ಅವರಲ್ಲಿ ಉಂಟಾಗುತ್ತದೆ. ಇಲ್ಲದಿದ್ದರೆ ಯಾರೋ, ಏನೋ ಕೇಳಿದರು, ಎಂಬ ಒಂದು ಭಾವನೆ ಬರುತ್ತದೆ. ಇದರಿಂದರೇ ಮೊನ್ನೆ ಮೊನ್ನೆ ತ್ರಿಭಾಷಾ ಸೂತ್ರವಾದಂತಹ ಪದ್ಧತಿ ಯಿಂದ ಮಕ್ಕಳ ಮನಸ್ಸಿಗೆ ನೋವು ಉಂಟಾಗಲು ಕಾರಣವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಒಂದು ವಿಷಯವನ್ನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಮೂರು ಭಾಷೆಗಳನ್ನು ತೆಗೆದುಕೊಳ್ಳುವುದು ನಮ್ಮ ಹುಡುಗರಿಗೆ ಬಹಳ ಕಷ್ಟ, ಇದರಿಂದ ಎರಡು ಭಾಷೆಗಳೇ ಇದ್ದರೆ ಸಾಕು ಎನ್ನುವ ವಾದವನ್ನೂ ನಾವು ಕೇಳುತ್ತೇವೆ. ಬಹುಶಃ ನಮ್ಮ ಹುಡುಗರು ವಿದ್ಯೆಗಾಗಿ ಕಷ್ಟಪಡತಕ್ಕದ್ದು ಅವರ ಕರ್ತವ್ಯವಾಗಿದೆ. ವಿದ್ಯೆಗಾಗಿ ಯುವಕರು ನಿದ್ದೆ ಬಿಟ್ಟು ಹಗಲೂ ರಾತ್ರಿ ಕಷ್ಟಪಟ್ಟು ಓದಿ ವಿದ್ಯಾಭ್ಯಾಸ ಮಾಡುತ್ತಿರುತ್ತಾರೆ. ಇಂಥಹ ವಿವಾದಗಳನ್ನು ಮಾಡುವುದರಿಂದ ಯಾರಿಗೂ ಸುಖವೂ ಇಲ್ಲ. ಈಗ ಏನಾಗಿದೆ ಎಂದರೆ, ಎಲ್ಲರೂ ಅನುಕರಣ ಮಾಡುವ ಶಕ್ತಿ ಪಡೆದಿದ್ದಾರೆಯೇ ಹೊರತು ವಿವೇಚನೆ ಮಾಡುವ ಗೋಜಿಗೇ ಹೋಗುತ್ತಿಲ್ಲ. ಸಾಮಾನ್ಯವಾಗಿ ಯಾರಾದರೂ ದೆಹಲಿಯಿಂದ ಬರುವ ಅಧಿಕಾರಿಗಳನ್ನು ಇಲ್ಲಿಗೆ ಒಂದು ಸಾರಿ ಬಂದಾಗ ಕೇಳಿ ನೋಡಿ, ಅವರು ಏನು ಹೇಳುತಾರೆ; ಅವರ ಮಕ್ಕಳೆಲ್ಲಾ ಅಲ್ಲಿರುವ ಬಂಗಾಳಿಯನ್ನೋ ಇಲ್ಲವೇ ಹಿಂದಿಯನ್ನೋ ಬಹಳ ಸುಲಭವಾಗಿ ಕಲಿತುಕೊಂಡುಬಿಡುತ್ತಾರೆ. ಹುಡುಗರು ಆಟಪಾಟಗಳನ್ನಾಡುವಾಗ ತಮಿಳು ಇಲ್ಲವೇ ತೆಲುಗು ಹೀಗೆ ನಾನಾ ಭಾಷೆಗಳನ್ನ ಬಹಳ ಸುಭವಾಗಿ ಕಲಿಯುತ್ತಿರುತ್ತಾರೆ ಎಂದು ಹೇಳುತ್ತಾರೆ. ಮಕ್ಕಳಿಗೆ ಯಾವ ಭಾಷೆಯಾದರೂ ಅದರೊಂದಿಕೆ ಹೊಂದಾಣಿಕೆ ಮಾಡಿಕೊಳ್ಳುವ ಶಕ್ತಿ ಅವರಿಗಿದೆ. ಮಕ್ಕಳಿಗೆ ಸರಿಯಾದ ಮಾರ್ಗದರ್ಶನ ನೀಡುವ ಶಕ್ತಿ ಇರಬೇಕು. ಯಾವ ಯಾರಿಗೆ ಯಾವ ರೀತಿಯಾದ ಶಿಕ್ಷಣವನ್ನು ಒದಗಿಸಿಕೊಡಬೇಕು ಎನ್ನುವುದು ಎಲ್ಲರ ಪರಿಸ್ಥ ಕರ್ತವ್ಯ. ಇಂದು ನಾವು ನೋಡಬಹುದು ಕೆಲವು ಕಾಲೇಜುಗಳಲ್ಲಿ ಅಲ್ಲರುವ ಉಪಾಧ್ಯಾಯರು ಸರಿಯಾಗಿ ಮಾರ್ಗದರ್ಶನ ಮಕ್ಕಳಿಗೆ ಕೊಡದೇ ಹೋದರೆ ಅವರ ಶಿಕ್ಷಣ ಹಾಳಾಗಿ ಹೋಗುತ್ತದೆ. ಕೆಲವು ವೇಳೆ ವಿದ್ಯಾರ್ಥಿಗಳು ಅಲ್ಲರುವ ರೆಕ್ಟರರುಗಳ ಧೋರಣವನ್ನು ಸರಿಯಾಗಿ ಅನುಸರಿಸದೇ ಹೋದರೆ ಅವರಿಗೆ ತೊಂದರೆಯಾಗುತ್ತದೆ. ಎಷ್ಟೋ ಜನ ಹುಡುಗರು ಇಂತಹ ರೆಕ್ಟರುಗಳನ್ನು ಕೇಳಿ ಅನುಕೂಲಮಾಡಿಕೊಳ್ಳುತ್ತಾರೆ, ಕೆಲವರಿಗೆ ಆಗುವುದಿಲ್ಲ. ಅದು ಅವರವರ ಬುದ್ಧಿಶಕ್ತಿಗನುಸಾರ ಹೋಗುತ್ತದೆ. ಸರಿಯಾದ ದಾರಿಯಲ್ಲಿ ಹುಡುಗರನ್ನು ಕರೆದುಕೊಂಡು ಹೋದರೆ ಅವರುಗಳು ಚೆನ್ನಾಗಿ ಓದಿ ಮುಂದೆ ಬರುತ್ತಾರೆ. ಇಲ್ಲದೇ ಇದ್ದರೆ ಇಲ್ಲ. ಇಂದು ಯಾರೋ ಒಬ್ಬರು ಎಲ್ಲೋ ಒಂದು ಕಡೆ ತ್ರಿಭಾಷಾ ಸೂತ್ರ ಬೇಡ ಎಂದರು ಅದಕ್ಕಾಗಿ ಇಲ್ಲದ ಗಲಭೆಗಳಾದವು. ಹೀಗೆ ಗಲಭೆಗಳಲ್ಲಿ ಹೋಗುತ್ತಿದ್ದ ವಿದ್ಯಾರ್ಥಿ ಗಳನ್ನು ನಾನು ಒಂದು ಸಾರಿ ಅವರೊಂದಿಗೆ ಚರ್ಚೆ ಮಾಡಿದಾಗ ಅವರು ಹೇಳಿದರು, ಬೆಂಗಳೂರು ಕಾಲೇಜುಗಳಲ್ಲಿ ಹಿಂದಿ ಬೇಡ ಎಂದು ಹೇಳಿದ್ದಾರೆ, ಅದಕ್ಕಾಗಿ ಹಿಂದಿ ವಿರೋಧ ಚಳುವಳಿ ಮಾಡುವುದಕ್ಕಾಗಿ ಈ ರೀತಿ ಮಾಡುತ್ತಿದ್ದೇವೆ ಎಂದು ಹುಡುಗರು ಹೇಳಿದರು. ಈ ಸಂದರ್ಭದಲ್ಲಿ ನನಗೆ ಒಂದು ಕಥೆ ರಾಮಾಯಣದಲ್ಲಿರುವುದು ಜ್ಞಾಪಕಕ್ಕೆ ಬರುತ್ತದೆ. ಅದು ರಾಮಾಯಣದ ಸುಂದರ ಕಾಂಡದಲ್ಲಿ ಬರುತ್ತದೆ. ಹನುಮಂತ ಸೀತೆಯನ್ನು ಅಶೋಕವನದಲ್ಲಿ ನೋಡಿಕೊಂಡು ಶ್ರೀರಾಮನನ್ನು ನೋಡುವುದಕ್ಕಾಗಿ ವಾಪಸು ಬರುತ್ತಿದ್ದ. ಅವನು ಬರುವಾಗ ಅವನಿಗೆ ಸಂಭ್ರಮವಾದ

ಸ್ವಾಗತವನ್ನು ಕೊಡಬೇಕೆಂದು ಅವರ ಮಿತ್ರರಾದ ಜಾಂಬವಂತ ಇನ್ನಿತರವಾನರರು ಒಂದು ಉಪವನದಲ್ಲಿ ಅವನಿಗೆ ಒಂದು ಊಟದ ಏರ್ಪಾಡನ್ನು ಮಾಡಿದ್ದರು. ಆಗ ಒಬ್ಬ ವಾನರ ತನ್ನ ಕೈಲಿ ಬೋರೆ ಹಣ್ಣು ಎಂದರೆ ನಾವು ಎಲಚಿಹಣ್ಣು ಎಂದು ಹೇಳುತ್ತೇವೆ. ಇಂತಹ ಒಂದು ಹಣ್ಣನ್ನು ಕೈಯಲ್ಲಿಟ್ಟುಕೊಂಡು ಹಸುಕಿದಾಗ ಅದು ಒಂದು ಅಡಿಯಷ್ಟು ಎತ್ತರಕ್ಕೆ ಮೇಲೆ ಹಾರಿ ತಂತೆ. ಇದನ್ನು ನೋಡಿ ಪಕ್ಕದಲ್ಲಿದ್ದ ಇನ್ನೊಂದು ವಾನರ ಇವನು ಒಂದು ಅಡಿಯಷ್ಟು ಮೇಲೆ ಹಾರಿಸಿದ, ನಾನೇಕೆ ಇದನ್ನು ಎರಡು ಅಡಿಯಷ್ಟು ಎತ್ತರಕ್ಕೆ ಹಾರಿಸಬಾರದು ಎಂದು ಅದು ಎರಡು ಅಡಿಯಷ್ಟು ಮೇಲಕ್ಕೆ ಹೋಗುವಂತೆ ಮಾಡಿತು. ಹೀಗೆ ಅಲ್ಲಿದ್ದವರೆರ್ಲಾ ಸೇರಿಕೊಂಡು ಎತ್ತರವಾಗಿ ನೆಗೆಯುವುದಕ್ಕೆ ಹೋದಾಗ ಊಟಕ್ಕಾಗಿ ಮಾಡಿದ ಅನ್ನವೆರ್ಲಾ ಹಾಳಾಗಿ ಹೋಯಿತು. ಹೀಗೆ ನಮ್ಮ ಹುಡುಗರು ಇಂದು ಮಾಡುತ್ತಿರುವ ಹಿಂದಿ ಚಳುವಳಿಯಾಗಿದೆ. ಯಾರೋ ಉತ್ತರ ಪ್ರದೇಶದಲ್ಲಿ ಇಂಗ್ಲಿಷು ಬೇಡ ಎಂದು ಹೇಳಿದರಂತೆ ಅದರಂತೆ ನಾವು ಇಲ್ಲಿ ಹಿಂದಿ ಬೇಡ ಎಂದು ಹೇಳುತ್ತೇವೆ ಮದ್ರಾಸಿನವರು ಹಿಂದಿ ಬೇಡ ಎಂದು ಮೂರು ರೈಲುಗಳನ್ನು ಸುಟ್ಟರು ನಾವು ಇಲ್ಲಿ ಎರಡು ರೈಲುಗಳನ್ನು ಸುಡುತ್ತೇವೆ ಎಂದು ಗೊಂದಲಗಳನ್ನು ಎಬ್ಬಿಸುವುದು ಸರಿಯಾದ ಮಾರ್ಗವಲ್ಲ. ಇದರಿಂದಾಗಿ ನಮ್ಮ ದೇಶವೆರ್ಲಾ ಹಾಳಾಗುತ್ತಿದೆ. ಬಾಲ್‌ಕೆ ಬಂದರ್ ಏಕ್ ಸಮಾನ್ ಹೈ ಎಂದು ಹೇಳುವಂತೆ ಯಾರೋ ಮಾಡಿರುವುದನ್ನು ಇಲ್ಲೂ ಅನುಕರಣ ಮಾಡಬೇಕೆಂದು ಎಂದು ಹುಡುಗರು ಮಾಡುತ್ತಿರುವುದು ಸರಿಯಾದ ತಿಳುವಳಿಕೆ ಇಲ್ಲದೆ ಮಾಡುತ್ತಿರುವ ಚಳುವಳಿಯೇ ವಿನಾ ಬೇರೇನಲ್ಲ. ಇದಕ್ಕೆ ಕಾರಣ ಇವರಿಗೆರ್ಲಾ ಸರಿಯಾದ ಶಿಕ್ಷಣ ಇಲ್ಲದಿರುವುದೇ ಆಗಿದೆ. ಹುಡುಗರು ಕಾಲೇಜುಗಳಿಗೆ ಬರುತ್ತಿರುವಾಗ ಅವರಿಗೆ ಇದು ತಪ್ಪು ಎಂದು ಸರಿಯಾದ ತಿಳುವಳಿಗೆ ಇಪ್ಪೊತ್ತಿನ ದಿನ ಯಾರೂ ಸರಿಯಾಗಿ ಕೊಡಲಿಲ್ಲ. It is the privilege of children to be mischievous.

† ಶ್ರೀ ಎಲ್. ಎಸ್. ವೆಂಕಾಜಿರಾವ್ (ನಾಮು ನಿರ್ದೇಶ ಪೊಂದಿದವರು).—ಮಾನ್ಯ ಸಭಾಪತಿಗಳೇ, ಬಹಳ ಜನ ಇನ್ನೂ ಮಾತನಾಡುವವರು ಇರುವುದರಿಂದ ನಾನು ಕೈಲಾದಮಟ್ಟಿಗೂ ಹದಿನೈದು ನಿಮಿಷದಲ್ಲೇ ನನ್ನ ಭಾಷಣವನ್ನು ಮುಗಿಸುತ್ತೇನೆ. ಕೈಗಾರಿಕೆಯ ವಿಚಾರದಲ್ಲಿ ಮಾನ್ಯ ಫೈನಾನ್ಸ್ ಮಿನಿಸ್ಟರು ಸ್ಪೀಂಲೈನ್ ಮಾಡುವುದಕ್ಕೆ ಏರ್ಪಾಡು ಮಾಡಿದ್ದೇವೆ. 9—10 ಪರ್ಸೆಂಟ್ ರಿಟರ್ನ್ ನಿರೀಕ್ಷೆ ಮಾಡುತ್ತೇವೆ ಎಂದು ಹೇಳಿದ್ದಾರೆ. 1970–71ರ ಒಳಗೆ 9–10 ಪರ್ಸೆಂಟ್ ಎಲ್ಲಾ ಇಂಡಸ್ಟ್ರೀಸ್ ನಿಂದಲೂ ರಿಟರ್ನ್ ಬರುತ್ತದೆ ಎಂದು ಮಾನ್ಯ ಫೈನಾನ್ಸ್ ಮಿನಿಸ್ಟರು ತಿಳಿದುಕೊಂಡಿದ್ದರೆ ಅದು ಸರಿಯಲ್ಲ ಎಂದು ಬಹಳ ವಿನಯಪೂರ್ವಕವಾಗಿ ಹೇಳಬೇಕಾಗುತ್ತದೆ. ಕಾರಣ ಇಷ್ಟೆ, ಈಗ ಎಕ್ಸ್‌ಪ್ಯಾನ್‌ಷನ್‌ಗಿಲ್ಲಿರತಕ್ಕ ಇಂಡಸ್ಟ್ರೀಸ್ ಅಂದರೆ ಎನ್. ಜಿ. ಇ. ಎಫ್.' ಪೋರ್ಸಿಲೀನ್ ಫ್ಯಾಕ್ಟರಿ, ಸ್ಯಾಂಡರ್ ಆಯಿಲ್ ಫ್ಯಾಕ್ಟರಿ ಇತ್ಯಾದಿಗಳು ಏನಿವೆ ಅವುಗಳ ಪ್ರೊಡಕ್ಷನ್ ಕಂಪ್ಲೀಟ್ ಆಗಬೇಕಾದರೆ 69-70 ರಲ್ಲಿ ಆಗುತ್ತದೆ. ಆದ್ದರಿಂದ 70-71ರ ಹೊತ್ತಿಗೆ 9 ರಿಂದ 10 ಪರ್ಸೆಂಟ್ ರಿಟರ್ನ್ಸ್ ನೀರಿಕ್ಷೆ ಮಾಡುವುದು-ಸರಿಯಲ್ಲ ಎಂದು ಹೇಳಬೇಕಾಗುತ್ತದೆ. ರೆಂಕೋ ವಿಷಯದಲ್ಲಿ ಕೆಲವು ಆಕ್ಷೇಪಣಾರ್ಹವಾದ ಮಾತುಗಳನ್ನು ನಮ್ಮ ಸ್ನೇಹಿತರು ಆಡಿದರು, ರೆಂಕೋ ಕಾರ್ಖಾನೆ 4–5 ವರ್ಷದಿಂದ 40 ಪರ್ಸೆಂಟ್ ಗ್ಯಾನ್ ಪ್ರಾಫಿಟ್ ಮಾಡುತ್ತಾ ಇತ್ತು, ಈಗ ಲಾಸ್ ಆಗುವುದಕ್ಕೆ ಕಾರಣ ಗವರ್ನಮೆಂಟ್ ಆಫ್ ಇಂಡಿಯಾದವರ ಲೈಸೆನ್ಸಿಂಗ್ ಪಾಲಿಸಿ. 11 ಜನ ರೆಂಕೊದಲ್ಲಿ ಮಾಡುತ್ತಾ ಇರುವ ಮೋಟರ್ಸ್‌ನ್ನು ಮಾಡುವುದಕ್ಕೆ ಲೈಸೆನ್ಸ್‌ನ್ನು ಪಡೆದುಕೊಂಡಿದ್ದಾರೆ. ಮೊದಲು 80 ಸಾವಿರದಿಂದ 1 ಲಕ್ಷದವರೆಗೂ ಮೋಟರ್ಸ್ ಮಾಡುತ್ತೇವೆ ಎಂದು ಪರ್ಮಿಷನ್ ತೆಗೆದುಕೊಳ್ಳುತ್ತಾರೆ, ಅದು ಸಾಧಾರಣ ಒಂದು ಲಕ್ಷ ಹೋಗಿ 5 ಲಕ್ಷ ಆಗುತ್ತದೆ. ಓವರ್ ಪ್ರೊಡಕ್ಷನ್ ಆಗುತ್ತದೆ. ಈಗ ರೆಸಿಷನ್ ಬಿಟ್ಟ್ ಅಪ್ ಆಗಿದೆ. ಆದ್ದರಿಂದ ಪ್ರೊಸೈಸ್‌ನಲ್ಲಿ ಸ್ಲಂಪ್ ಆಗಿದೆ. ಪ್ರೈವೇಟ್ ಮ್ಯಾನೇಜ್‌ಮೆಂಟಿನವರು ಏನು ಮಾಡುತ್ತಾರೆ? ಯಾವುದಾದರೂ ಲಾಭ ಬರುತಕ್ಕ ಇಂಡಸ್ಟ್ರೀ ಇದ್ದರೆ ಅದನ್ನು ಲುಕ್ರಾನಾಗತಕ್ಕ ಇಂಡಸ್ಟ್ರೀಗೆ ಟ್ಯಾಗ್' ಆನ್ ಮಾಡುತ್ತಾರೆ. ಭಾರತ್ ಕಾಮರ್ಸ್ ಅಂತ ಹೇಳಿ ನಂಜನಗೂಡಿನಲ್ಲಿ ಒಂದು ಮಿಲ್‌ನ್ನು ಹಾಕಿದ್ದರು, ಅದರಲ್ಲಿ ಬಹಳ ಲಾಭ ಬರುತ್ತಾ ಇತ್ತು, ಬೇರೆ ಇನ್ನೊಂದು ಕಡೆ ನಷ್ಟವಾಗುತ್ತಾ ಇತ್ತು, ಅಂತಹ ಸಂದರ್ಭದಲ್ಲಿ ಇನ್‌ಕಂ ಟ್ಯಾಕ್ಸ್ ಕೊಡುವಾಗ ಅದನ್ನು ತೋರಿಸಿ ರಿಬೇಟ್ ಪಡೆಯಲು ಅನುಕೂಲ ಇದೆ. ಸರ್ಕಾರದ ಮ್ಯಾನೇಜ್‌ಮೆಂಟಿನಲ್ಲಿ ಹಾಗೆ ಮಾಡಲಿಕ್ಕೆ ಆಗುವುದಿಲ್ಲ. ಶ್ರೀಮಾನ್ ಪಾಟೀಲ್‌ರವರು ಸರ್ಕಾರದ ಮಾನ್ಯೇಜ್‌ಮೆಂಟ್ ಸರಿಯಾಗಿಲ್ಲ ಎಂದು ಹೇಳುತ್ತಾ ಇದ್ದರು. ಗವರ್ನಮೆಂಟ್ ಆಫ್ ಇಂಡಿಯಾದ ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್‌ಗೆ ಹೋಲಿಸಿದರೆ ನಮ್ಮ ಮೈಸೂರು ದೇಶದ ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್ ಬಹಳ ಚೆನ್ನಾಗಿ ಕೆಲಸ ಮಾಡುತ್ತಾ ಇವೆ ಎಂದು ಹೇಳಬಹುದು. 67 ರಿಂದ ಅವು ಎಕ್ಸ್‌ಪ್ಯಾನ್‌ಷನ್ ಸ್ಕೀಂನಲ್ಲಿರುವುದರಿಂದ ಕ್ಯಾಪಿಟಲ್ ಜಾಸ್ತಿ ಹಾಕಬೇಕಾಗಿದೆ, ಯಾವಾಗ ಕ್ಯಾಪಿಟಲ್ ಜಾಸ್ತಿ ಹಾಕುತ್ತಾರೋ ಆಗ ಆ ಇಂಡಸ್ಟ್ರಿಯ ಪ್ರೊಡಕ್ಷನ್ ಮೇಲೆ ಯೀಲ್ಡ್ ಕಡಿಮೆ ಬರುತ್ತದೆ. ಆದ್ದರಿಂದ ಆಗಲೇ ಹೇಳಿದ ಹಾಗೆ ಇನ್ನು ಎರಡು ಮೂರು ವರ್ಷದಲ್ಲಿ ನಮ್ಮ ಸ್ಯಾನ್ ಷಿಯರ್ ರಿಟರ್ನ್ 9–10 ಪರ್ಸೆಂಟ್ ಬರುತ್ತದೆ ಅಂತ ಅನ್ನುವುದು ಸರಿಯಲ್ಲ ಎಂದು ಹೇಳುತ್ತೇನೆ.

ಈಗ ಆ ಎಂ. ಎಸ್. ಕೆ. ಮಿಲ್ಸ್‌ನ್ನು ಖಾಸಗೀ ಮ್ಯಾನೇಜ್‌ಮೆಂಟಿಗೆ ಕೊಟ್ಟಿದ್ದಾರೆ. ಆದರೆ ಈ ಕೆಲಸವನ್ನು ಸರ್ಕಾರದವರು 2–3 ವರ್ಷಗಳಿಗೆ ಮೊದಲೇ ಮಾಡಬೇಕಾಗಿತ್ತು. ಅದನ್ನು ಈಗ ಕೇನರೀವಾರ್ ರಾಜ್‌ಕುಮಾರ್ ಎನ್ನತಕ್ಕವರಿಗೆ ಕೊಟ್ಟಿದ್ದಾರೆ. ಇವರು ಮೊದಲು 1956 ರಲ್ಲಿ ವಹಿಸಿಕೊಂಡರು. ಆ ಹಿಂದೆ ಅವರು ಫೈನಾನ್‌ಷಿಯಲ್ ಕಾರ್ಪೊರೇಷನ್ನಿನಲ್ಲಿ 20–25 ಲಕ್ಷ ಸಾಲ ಮಾಡಿಕೊಂಡಿದ್ದರು. ಆ ಸಾಲವನ್ನೆಲ್ಲ ತೀರಿಸಿ ಆ ವಿಕ್ರಮ ಮಿಲ್ಸನ್ನು ತೆಗೆದುಕೊಂಡ ಮೇಲೆ, ಅಲ್ಲಿ ಈಗ ಡಿವಿಡೆಂಡನ್ನು ಹಂಚತಕ್ಕ ಸ್ಥಿತಿಗೆ ಬಂದಿದ್ದಾರೆ. ಅದನ್ನು ಒಳ್ಳೆಯ ಸ್ಥಿತಿಗೆ ತಂದಿದ್ದಾರೆ. ಹಾಗೆ ಅದನ್ನು ಒಳ್ಳೆಯ ಸ್ಥಿತಿಗೆ ತಂದ ನಂತರ ಅದನ್ನು ಮತ್ತೆ ವಹಿಸಿಕೊಟ್ಟರು. ಆನಂತರ ಡೆಲ್ಲೀಲ ಆಯೋಧ್ಯ ಮಿಲ್ಸ್ ಎಂದು ಒಂದು ಮಿಲ್ಲಿತ್ತು. ಅದನ್ನು ಕೇಂದ್ರ ಸರ್ಕಾರ 18 (ಎ) ಸೆಕ್ಷನ್ ಪ್ರಕಾರ ತನ್ನ ಮ್ಯಾನೇಜ್‌ಮೆಂಟಿಗೆ ವಹಿಸಿಕೊಂಡಿತು. ಅದನ್ನು ಮತ್ತೆ ಇವರು 1960—61 ರಲ್ಲಿ ತಮ್ಮ ವಶಕ್ಕೆ ತೆಗೆದುಕೊಂಡು ನಡೆಸಿದರು. ಈಗ ಅದರಲ್ಲಿ ಲಾಭ ಬಂದಿದೆ. ಅದಕ್ಕಿದ್ದ ಸಾಲವನ್ನೆಲ್ಲಾ ತೀರಿಸಿದ್ದಾರೆ. ಈ ದಿವಸ ಸೇಕಡ 6 ರಿಂದ 18 ವರೆಗೂ ಡಿವಿಡೆಂಡನ್ನು ಹಂಚುತ್ತಿದ್ದಾರೆ. ಹಾಗೇ ಆ ಕೃಷ್ಣರಾಜೇಂದ್ರ ಮಿಲ್ಸ್‌ನ್ನು 1961–62 ರಲ್ಲಿ ಅದು ಇವರ ಕೈಗೆ ಬಂದ ಮೇಲೆ ಅಲ್ಲಿ ಪ್ರೊಡಕ್ಷನ್ ಜಾಸ್ತಿಯಾಯಿತು. ಅಲ್ಲಿ ಒಂದೂವರೆ ಕೋಟಿಯಿಂದ

(ಶ್ರೀ ಎಸ್. ಎನ್. ವೆಂಕಾಜಿರಾವ್)

ಮೂರು ಕೋಟಿ ರೂಪಾಯಿಗಳ ಉತ್ಪನ್ನ ಈಗ ನಡೆಯುತ್ತಿದೆ, ಲಾಭ ಬರುತ್ತಿದೆ. ಆದರೆ ಹೀಗೆ ಪ್ರೈವೇಟ್ ಮ್ಯಾನೇಜ್‌ಮೆಂಟನಲ್ಲಿದ್ದರೆ ಕೈಗಾರಿಕೆಗಳು ಚೆನ್ನಾಗಿ ನಡೆಯುತ್ತವೆ ಎಂದು ಹೇಳುವುದನ್ನು ನಾನೂ ಒಪ್ಪುತ್ತೇನೆ. ಆದರೆ ಆ ಖಾನಗೀ ಆಡಳಿತದಿಂದ ಅವನ್ನು ಸರ್ಕಾರ ವಹಿಸಿ ಕೊಂಡರೆ ಅವುಗಳಲ್ಲಿ ನಷ್ಟವಾಗುತ್ತದೆ ಎಂಬುದನ್ನು ನಾನು ಒಪ್ಪುವುದಿಲ್ಲ. ಆ ಅಪವಾದನೆಯನ್ನು ನಾನು ಒಪ್ಪುವುದಿಲ್ಲ. ಕಷ್ಟ ಬಂದರೆ ಎಲ್ಲರಿಗೂ ಬರುತ್ತದೆ. ಅದು ಒಬ್ಬರಿಗೆ ಮಾತ್ರ ಬರುವುದಿಲ್ಲ ಆದರೆ ಡಾ॥ ಬಂದೀಗೌಡರು ಟಾಟಾ ಫಿನ್ಲೆ ಕಂಪೆನಿಯನ್ನು ಜಾಯಿಂಟ್‌ಸ್ಟಾಕ್ ಕಂಪೆನಿಯನ್ನಾಗಿ ಮಾಡಿದ್ದರಿಂದ ಅಲ್ಲಿ 10 ಪರ್ಸೆಂಟ್ ಡಿವಿಡೆಂಡ್ ಕೊಡುವುದಕ್ಕೆ ಅವಕಾಶವಾಯಿತು ಎಂದು ಹೇಳಿದರು ಅದು ಸರ್ಕಾರದವರ ಆಡಳಿತದಲ್ಲಿದ್ದರೆ ಹಾಗೆ ಡಿವಿಡೆಂಡನ್ನು ಕೊಡುವುದಕ್ಕಾಗುತ್ತಿರಲಿಲ್ಲ ಎಂದರು. ಆಗ ಎಲ್ಲ ಕಡೆಯಲ್ಲೂ ಜನರರ್ ರಿಸೆಷನ್ ಇತ್ತು. ಅದೇ ಟಾಟಾ ಫಿನ್ಲೆ ಕಂಪೆನಿಯಲ್ಲಿ ಆ ಹಿಂದೆ ಒಂದೂವರೆ ಕೋಟಿ ರೂಪಾಯಿ ನಷ್ಟವಾಗಿತ್ತು, ಈಗ ಆ ಜನರರ್ ರಿಸೆಷನ್ ಮುಗಿದು ಲಾಭದಲ್ಲಿ ಕೆಲಸ ಮಾಡುತ್ತಿದೆ. ಹಿಂದೆ 1933-34 ರಲ್ಲಿ ಧಾನ್ಯಗಳ ಬೆಲೆ ಬಿದ್ದಿದ್ದಾಗ ರೈತರೆಲ್ಲಾ ಎಷ್ಟೋ ಕಷ್ಟನಷ್ಟಗಳನ್ನು ಅನುಭವಿಸಿದರು. ಆಗ ಜನರ ಕೈಲಿ ದುಡ್ಡೇ ಇರುತ್ತಿರಲಿಲ್ಲ. ಆಗ ಓವರ್ ಪ್ರೊಡಕ್ಷನ್ ಇತ್ತು. ಮೈಸೂರು ದೇಶ ಒಂದರಲ್ಲೇ ಅಲ್ಲ ಹಾಗೆ ಆಗ ಎಲ್ಲ ಕಡೆಯಲ್ಲೂ ಇತ್ತು.

ಇನ್ನು ನಮ್ಮ ಪೇಪರ್ ಮಿಲ್ಸಿಗೆ ಬಂದರೆ, ಅದನ್ನು ಎಕ್ಸ್‌ಪ್ಯಾನ್‌ಷನ್ ಮಾಡಲಾಗಿದೆ ಪ್ರೊಡಕ್ಷನ್ ಕೂಡ ಜಾಸ್ತಿಯಾಗಿದೆ. ಹಾಗೆ ಪೇಪರ್ ಮಿಲ್ಲುಗಳ ಸಂಖ್ಯೆಯೂ ಬೆಳೆದಿದೆ. ಇದರಲ್ಲಿ ಕೆಲವು ಲಾಭದಲ್ಲಿ ಕೆಲಸ ಮಾಡುತ್ತಿವೆ. ಇನ್ನು ಕೆಲವು ನಷ್ಟದಲ್ಲಿ ಕೆಲಸಮಾಡುತ್ತಿವೆ. ನಮ್ಮ ದಕ್ಷಿಣ ಇಂಡಿಯಾದಲ್ಲಿ ಸೇತ್‌ಷಾಹ ಎಂಬ ಒಂದು ಪೇಪರ್ ಮಿಲ್ಲಿದೆ. ಆದರೆ ಇಲ್ಲಿ ಏನು ಉತ್ಪಾದನೆ ಯಾಗುತ್ತಿದೆ ಎಂಬುದನ್ನು ನೋಡಿಕೊಂಡು ಮಾಲಿನ ಬೆಲೆಯನ್ನು ನಿಗದಿ ಮಾಡುತ್ತಿಲ್ಲ. ಹೀಗೆ ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಅವಕಾಶ ಕೊಡುತ್ತಿಲ್ಲ. ಈ ದಿವಸ ಕೇಂದ್ರದವರು ಅಲ್ಲಿ ಓರ್ವಾಗೆ ಅವರ ಮ್ಯಾನೇಜ್‌ಮೆಂಟಿನಲ್ಲಿರತಕ್ಕ ಒಂದು ಪೇಪರ್ ಮಿಲ್ಲಿಗೆ ಅದರ ಉತ್ಪತ್ತಿ ಕಡಮೆ ಇರುವುದರಿಂದ ನಷ್ಟಕ್ಕೆ ಹೆಚ್ಚಿಗೆ ಡಿಮ್ಯಾಂಡ್ ಇರುವುದರಿಂದ ಅಲ್ಲಿ ಆದು 15-20 ಪರ್ಸೆಂಟ್ ಡಿವಿಡೆಂಡನ್ನು ಕೊಡುತ್ತಿದೆ. ಅದರಿಂದ ನಮ್ಮ ಸೌತ್ ಇಂಡಿಯಾ ಪೇಪರ್ ಮಿಲ್ಸಿಗೆ ಬಹಳ ಧಕ್ಕೆ ಬಂತು. ಅವೇ ರೀತಿ ಮದ್ರಾಸ್ ಮತ್ತು ಮಹಾರಾಷ್ಟ್ರದವರು ಪೇಪರ್ ಬೆಲೆಯನ್ನು ನಿಗದಿ ಮಾಡಬೇಕೆಂದು ಕೇಂದ್ರದವರಲ್ಲಿ ಒತ್ತಾಯ ಮಾಡುತ್ತಿದ್ದಾರೆ. ಆದರೆ ಅವರ ವಾದಕ್ಕೆ ಮನ್ನಣೆ ದೊರೆತಂತೆ ಕಾಣುವುದಿಲ್ಲ. ಅವರು ಒಂದುವೇಳೆ ಪೇಪರ್ ಬೆಲೆಯನ್ನು ನಿಗದಿ ಮಾಡದಿದ್ದರೆ ಈ ಕೈಗಾರಿಕೆ ಇಲ್ಲಿ ನತ್ತಂತೆಯೇ. ಆದರೆ ಈ ವಿಚಾರದಲ್ಲಿ ನಮ್ಮ ಸರ್ಕಾರದವರು ಯಾವ ರೀತಿ ರೆಪ್ರೆಸೆಂಟ್ ಮಾಡಿಕೊಂಡಿದ್ದಾರೋ ಅದು ನನಗೆ ತಿಳಿಯಲಿಲ್ಲ. ಹೀಗೆ ಒಂದು ಕೈಗಾರಿಕೆಯ ಅಭಿವೃದ್ಧಿಯ ಬಗ್ಗೆ ಅನೇಕ ವಿಚಾರಗಳು ಇರುತ್ತವೆ. ಅವುಗಳನ್ನು ಸರಿಯಾಗಿ ಗಣನೆಗೆ ತೆಗೆದು ಕೊಳ್ಳದೆ ಅವುಗಳನ್ನು ದೂಷಣೆ ಮಾಡುವುದು ಸರಿಯಲ್ಲ. ಕೆಲವು ದಿನಗಳ ಹಿಂದೆ ನಮ್ಮ ಪೋರ್ಸಿಲೀನ್ ಫ್ಯಾಕ್ಟರಿಯನ್ನು ಒಂದು ಜಾಯಿಂಟ್‌ಸ್ಟಾಕ್ ಕಂಪೆನಿಯನ್ನಾಗಿ ಮಾಡಿದ್ದಾರೆ. ಅದರ ಬಗ್ಗೆ ನಮ್ಮ ಶಾಸನ ಸಭೆಗಳಲ್ಲಿ ಟೀಕೆ ಬಹಳವಾಗಿದೆ. ಇದನ್ನು ನೋಡಿ ಅವರು ನೀವು ನಮ್ಮನ್ನು ಬಹಳ ಅಂಡರ್‌ರೇಟ್ ಮಾಡುತ್ತಿದ್ದೀರೆಂದು ಹೇಳುತ್ತಿದ್ದಾರೆ.

ಶ್ರೀ ಜೆ. ಬಿ. ಮರ್ಯಾರಾಧ್ಯ.—ನಾವು ಇಲ್ಲಿ ಅವರನ್ನು ಟೀಕೆ ಮಾಡುವುದರಿಂದ ಅವರು ಅಲ್ಲಿ ಅಂಡರ್‌ರೇಟ್ ಮಾಡುತ್ತೇವೆಂದು ಹೇಳುವುದು ಸರಿಯಲ್ಲ.

ಶ್ರೀ ಎಸ್. ಎನ್. ವೆಂಕಾಜೀರಾವ್.—ನಮ್ಮ ಪೇಪರ್ ಮಿಲ್‌ಗಳು ಯಾವ ರೀತಿ ಪ್ರಗತಿ ಆಗುತ್ತಿವೆ ಎಂಬುದನ್ನು ಗಮನಿಸದೆ ಮಾತನಾಡಬಾರದು. ಅವು ನಡೆಯತಕ್ಕ ರೀತಿ ನೀತಿ ಅಲ್ಲಿನ ಆಡಳಿತ, ಅಲ್ಲಿರತಕ್ಕ ವಾತಾವರಣ ಇವನ್ನೆಲ್ಲಾ ನೋಡಬೇಕು. ಹಿಂದೆ ನಮ್ಮ ನರ್ ಪಜರ್ ಅವರು ದಿವಾನರಾಗಿದ್ದ ಕಾಲದಲ್ಲಿ ಪಬ್ಲಿಕ್ ಲೋನನ್ನು ಫ್ಲೋಟ್ ಮಾಡುವುದಕ್ಕೆ ಪ್ರಾರಂಭಿಸಿದರೆ ಆಗ ನಿರೀಕ್ಷಿಸಿದ್ದ ಕಾಲಕ್ಕೆ ಮೊದಲೇ ಹಣ ಬಂದು ತುಂಬುತ್ತಿತ್ತು. 1937-38 ರಿಂದ 1943-44 ರವರೆಗೂ ಹಾಗೇ ಇತ್ತು. ಆ ಕಾಲದಲ್ಲಿ ಮಾನ್ಯ ಮರ್ಯಾರಾಧ್ಯರು ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಆಗಿದ್ದರು. ಆ ಕಾಲದಲ್ಲಿ ಅಪೇಕ್ಷಿಸಿದ್ದುದಕ್ಕಿಂತ ಹೆಚ್ಚಾಗಿ subscribe ಆಗುತ್ತಿತ್ತು. ಆದುದರಿಂದ ತಾವು ಹೋಲಿಸಿ ನೋಡಿ ಆಗಿನ ವಾತಾವರಣ ಏನಿತ್ತು ಎಂಬುದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಟೀಕೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಸ್ಮಾರ್‌ಸ್ಕೇಲ್ ಸೇವಿಂಗ್ಸಿನ ವಿಚಾರಕ್ಕೆ ಬಂದರೆ, ಇದನ್ನು ಗ್ರಾಮಾಂತರ ಪ್ರದೇಶಕ್ಕೆ ಹರಡಬೇಕು. ಅಲ್ಲಿ ಈ ದಿವಸ ಜಾಸ್ತಿ ದುಡ್ಡಿದೆ. ಮಂಡ್ಯಾದಲ್ಲಿ ಆ ಅಸಿಟೇಟ್ ಫ್ಯಾಕ್ಟರಿ ಹಿಂದೆಯೂ ಇತ್ತು, ಈಗಲೂ ಇದೆ. ನಮ್ಮ ಇಡೀ ಮೈಸೂರು ರಾಜ್ಯಕ್ಕೆ ಇರುವುದು ಇದೊಂದೇ. ನಾವು ಇನ್ನು ಮುಂದೆ ಕೈಗಾರಿಕೆಗಳನ್ನು ಒಂದೇ ಸ್ಥಳದಲ್ಲಿ ಕೇಂದ್ರೀಕೃತ ಮಾಡದೆ ಅದನ್ನು ಗ್ರಾಮಾಂತರ ಪ್ರದೇಶಗಳಿಗೆ ಹರಡಬೇಕು. ಆಗಲೇ ನಮ್ಮ ಕೈಗಾರಿಕೆಗಳು ಯಶಸ್ವಿಯಾಗುವುದು. ಇನ್ನುಮುಂದೆ ಬೆಂಗಳೂರಿನಲ್ಲಿ ಕೈಗಾರಿಕೆಗಳನ್ನು ಕೇಂದ್ರೀಕೃತ ಮಾಡಬಾರದು. ನಮ್ಮ ರಾಜ್ಯದಲ್ಲಿರತಕ್ಕ ಕೈಗಾರಿಕೆಗಳಲ್ಲಿ ಶೇಕಡ 50 ರಷ್ಟು ಕೈಗಾರಿಕೆಗಳು ಈ ದಿವಸ ಬೆಂಗಳೂರಲ್ಲಿವೆ. ಇದನ್ನು ಇನ್ನೂ ಮರೆತು ನಡೆದರೆ ಮುಂದೆ ತೊಂದರೆ ಆಗಬಹುದು. ನಮ್ಮ ಮೈಸೂರು ಜಿಲ್ಲೆಯಲ್ಲಿ ಕ್ಯಾಪಿಟಲ್ ವರ್ಕ್ಸ್ 1970-71ರ ವೇಳೆಗೆ ಇನ್ನೂ ಬಹಳ ಮುಂದುವರಿಯುತ್ತವೆ. ಕನ್ನಂಬಾಡಿಯ ಕೆಳಗೆ ಕಬ್ಬನ್ನು ಬೆಳೆಯುವುದು ಇನ್ನೂ ಹೆಚ್ಚುತ್ತದೆ. ಆಗ ನಮ್ಮ ಮಂಡ್ಯಾ ಸಕ್ಕರೆ ಕಾರ್ಖಾನೆಗೆ ಹೆಚ್ಚಿನ ಲಾಭ ಬರುವುದಕ್ಕೆ ಸಾಕಷ್ಟು ಅವಕಾಶವಿದೆ. ಇಲ್ಲಿಯವರೆಗೆ ಆಗಿರತಕ್ಕ ನಷ್ಟವನ್ನು ಒಂದೆರಡು ವರ್ಷಗಳಲ್ಲಿ ಭರ್ತಿಮಾಡಬಹುದು. ಆದುದರಿಂದ ನಮ್ಮ ಕೈಗಾರಿಕೆಗಳಲ್ಲಿ ಲಾಭ ಬರುವುದೇ ಇಲ್ಲ ಎಂದು ಹೇಳುವುದು ಸರಿಯಲ್ಲ. ಆಯಾ ಕಾಲದಲ್ಲಿ ಇರತಕ್ಕ ರಿಸೆಷನ್ನನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಂಡು ಮಾತನಾಡಬೇಕು. ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದೊಡನೆ ವ್ಯವಹಾರ ಮಾಡಿ ಉತ್ಪತ್ತಿ ಮತ್ತು ಆದರ ಪೆಟ್ಟಗಳನ್ನು ಗಮನಕ್ಕೆ ತಗೆದುಕೊಂಡು ಬೆಲೆಯನ್ನು ನಿಗದಿ ಮಾಡಬೇಕು. ಆಗ ಪ್ರೊಸಸ್ ಸ್ಟೇಬಿಲೈಜಾಗುತ್ತವೆ. ಹಾಗೆ ಮಾಡಬೇಕೆಂದು ನಾನು ಹೇಳುತ್ತೇನೆ.

ನಮ್ಮಲ್ಲಿ ಈ ದಿವಸ ಅನೇಕ ಹೊಸ ಕೈಗಾರಿಕೆಗಳು ಸ್ಥಾಪನೆಯಾಗಿವೆ. ನಮ್ಮಲ್ಲಿ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬೇರೆ ಇದೆ. ಈ ಕಾರ್ಪೊರೇಷನ್ನಿನವರು ಆ ಹೊಸ ಕೈಗಾರಿಕೆಗಳನ್ನು ಅಂಡರ್‌ರೇಟ್ ಮಾಡುತ್ತಿರುವುದರಿಂದ ಹೊಸಬರು ಯಾರೂ ಮುಂದೆ ಬರುತ್ತಿಲ್ಲ. ಇಲ್ಲಿ ರಿಸೆಷನ್ ಇರತಕ್ಕ ಕಾಲದಲ್ಲಿ ಕೈಗಾರಿಕೆಗಳಿಗೆ ಒಂದು ರಕ್ಷಣೆ ಕೊಡಲು ನಮ್ಮ ಸರ್ಕಾರದವರು ಕೈಗಾರಿಕೆಗಳ ಸೆಕ್ಯೂರಿಟಿ ಲೋನ್ ಎಂದು ಒಂದು ಸಾಲವನ್ನು ಪ್ಲೋಟ್ ಮಾಡುವುದಕ್ಕೆ ಏರ್ಪಾಡನ್ನು ಮಾಡಿದ್ದಾರೆ. ಆದರೆ ಈಗ ಈ ಕಾರ್ಯವನ್ನು ರಿಜರ್ವ್ ಬ್ಯಾಂಕಿನವರು ವಹಿಸಿಕೊಂಡಿದ್ದಾರೆ. ಹಿಂದೆ ಕೆಲವು ಕೈಗಾರಿಕಾ ಷೇರುಗಳ ಬೆಲೆ ಪಾತಾಳಕ್ಕೆ ಬಿದ್ದಿತ್ತು. ಈಗ ಅದಕ್ಕೆ ಸ್ವಲ್ಪ ಹೆಚ್ಚಿನ ಕಳೆ ಬರುತ್ತಿದೆ. ಹೋದ ವರ್ಷ ಜೋಬ್ಯಾಕೋ ಕಂಪೆನಿಯ ಷೇರುಗಳ ಬೆಲೆ ಬಹಳ ಇಳಿಮುಖವಾಗಿತ್ತು, ಈ ವರ್ಷ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನವರು ಸಾಲ ಕೊಡಲು ಮುಂದೆ ಬಂದುದರಿಂದ ಈ ವರ್ಷ ಅದು ಶೇಕಡ 4 ರಿಂದ 10 ರವರೆಗೂ ಡಿವಿಡೆಂಡನ್ನು ಕೊಡುವುದಕ್ಕೆ ಶಕ್ತಿ ಬಂದಿದೆ. ಹೀಗೆ ನಾವು ಸ್ವಲ್ಪಕಾಲ ಕಾದರೆ ಸರ್ಕಾರದ ಆಡಳಿತದಲ್ಲಿರತಕ್ಕ ಕೈಗಾರಿಕೆಗಳಿಂದಲೂ ಲಾಭ ಬಂದೇ ಬರುತ್ತದೆ. ಜಾಯಿಂಟ್ ಸ್ಟಾಕ್ ಕಂಪೆನಿಗಳ ಷೇರ್ ಬೆಲೆ ಇಳಿಯುವಂತೆ ಅದನ್ನು ತಡೆಗಟ್ಟಬೇಕು ಮತ್ತು ದೇಶಾದ್ಯಂತ ಕೈಗಾರಿಕೆಗಳನ್ನು ವಿಸ್ತಾರಮಾಡಬೇಕು ಎಂದು ಪ್ರಾರ್ಥಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ವಿಶ್ವನಾಥಸ್ವಾಮಿ (ಸ್ಥಾನೀಯ ಪ್ರಾಧಿಕಾರೀ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ಈ ದಿನ ಮುಂಗಡ ಪತ್ರದ ಮೇಲೆ ನಾನು ಭಾಷಣಮಾಡಲು ಭಾಗವಹಿಸುವುದಕ್ಕೆ ಮುನ್ನ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಮ್ಮ ಹಣಕಾಸಿನ ಮಂತ್ರಿಗಳು ಈ ಮುಂಗಡ ಪತ್ರವನ್ನು ಈ ವಿಧಾನಪರಿಷತ್ತಿನಲ್ಲಿ ಮಂಡಿಸಿರುವುದನ್ನು ನೋಡಿದರೆ ನಿಜವಾಗಿ ಅದು ಎರಡು ದೃಷ್ಟಿಗಳಿಂದ ಅಭಿನಂದನೆಗೆ ಅರ್ಹವಾಗಿದೆ ಎಂದು ನಾನು ಭಾವಿಸುತ್ತೇನೆ. ಒಂದನೆಯದಾಗಿ ಉಳಿತಾಯ ಹಾಗೂ ಮಿತವ್ಯಯ ಬಡ್ಜೆಟ್ಟನ್ನು ಮಂಡಿಸಿದ್ದಾರೆ. ಅದಕ್ಕಾಗಿ ನಾನು ವಂದಿಸುತ್ತೇನೆ. ಎಂಡನೆಯದು, ಪ್ರಥಮತಃ ಮಾನ್ಯ ಮಂತ್ರಿಗಳು ಮುಂಗಡ ಪತ್ರವನ್ನು ಕನ್ನಡ ಭಾಷೆಯಲ್ಲಿ ಈ ಪರಿಷತ್ತಿನಲ್ಲಿ ಮಂಡಿಸಿದುದಕ್ಕಾಗಿ ಅವರು ಅಭಿನಂದನಾರ್ಹರು. ಇದರೊಳಗೆ ಕನ್ನಡ ಭಾಷೆಯಲ್ಲಿ ಮುಂಗಡ ಪತ್ರವನ್ನು ಮಂಡಿಸಿರುವುದರಲ್ಲಿ ಕೆಲವು ದೋಷಗಳು ಇರಬಹುದು. ನನ್ನ ಮಿತ್ರರಾದಂಥ ಮಾನ್ಯ ಶ್ರೀ ಬಂದೀಗೌಡರು ಎಷ್ಟೋ ದೋಷಗಳಿವೆ, ಸರಿಯಾದ ಭಾಷಾಂತರವಾಗಿಲ್ಲವೆಂಬುದಾಗಿ ಹೇಳಿದರು. ಅದನ್ನು ಸ್ವತಃ ಮಾನ್ಯ ಮಂತ್ರಿಗಳು ತಮ್ಮ ಭಾಷಣದ ಕೊನೆಯ ಪ್ಯಾರಾದಲ್ಲಿ ಒಪ್ಪಿಕೊಂಡಿದ್ದಾರೆ. ಅವರೇ ಈ ರೀತಿಯಾಗಿ ಹೇಳಿದ್ದಾರೆ. 'ಈ ಸಲ ಮುಖ್ಯವಾದ ಆಯವ್ಯಯ ಲೇಖನಗಳನ್ನು ಇಂಗ್ಲೀಷ್‌ನಲ್ಲೂ ಕನ್ನಡದಲ್ಲೂ ಮಂಡಿಸಿದೆ. ಮುಖ್ಯ ಲೇಖಗಳನ್ನು ಎರಡು ಭಾಷೆಗಳಲ್ಲಿ ಮಂಡಿಸುವ ಈ ಪ್ರಯತ್ನವು ಪ್ರಥಮ ಪ್ರಯತ್ನವಾಗಿದೆ. ಆದುದರಿಂದ ಕನ್ನಡ ಅನುವಾದವು ಪೂರ್ಣ ತೃಪ್ತಿ ನೀಡದಿರಬಹುದು. ಅಲ್ಲದೆ, ಅನುವಾದದಲ್ಲಿ ಏಕರೂಪತೆಯೂ ಕಾಣದಿರಬಹುದು. ಕಾಲಕ್ರಮದಲ್ಲಿ ಈ ಕೆಲಸ

(ಶ್ರೀ ವಿಶ್ವನಾಥಸ್ವಾಮಿ)

ನುವ್ಯವಸ್ಥಿತವಾಗಿ ಏಕರೂಪಕ್ಕೆ ಬರುವುದು. ಅದುವರೆಗೆ ಮಾನ್ಯ ಸದಸ್ಯರು ಸಹಕರಿಸಬೇಕೆಂದು ನಮ್ರತೆಯಿಂದ ವಿನಂತಿಸಿಕೊಳ್ಳುತ್ತೇನೆ.' ಹೀಗೆ ಮಾನ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಇದರಲ್ಲಿರತಕ್ಕ ನ್ಯೂನತೆಗಳನ್ನು ಹಾಗೂ ಕೆಲವು ದೋಷಗಳನ್ನು ಸ್ವತಃ ಒಪ್ಪಿಕೊಂಡು ಅದನ್ನು ಮುಂದೆ ಸುಧಾರಿಸುವುದಕ್ಕೆ ಪ್ರಯತ್ನಮಾಡುತ್ತೇವೆಂದು ಅವರು ಹೇಳಿದ್ದು ನಿಜವಾಗಿ ಬಹಳ ಸ್ವಾಗತಾರ್ಹವಾದ ವಿಚಾರವೆಂದು ನಾನು ಭಾವಿಸುತ್ತೇನೆ. ಇನ್ನು ಮುಂಗಡ ಪತ್ರದ ವಿಷಯವಾಗಿ ಈ ಸಾಲದ ಹೊರೆ ನಮ್ಮ ರಾಜ್ಯದ ಮೇಲೆ ಸಾಕಷ್ಟು ಇದೆಯೆಂದು ಎಷ್ಟೋ ಸದಸ್ಯರು ಹೇಳಿದ್ದು ಉಂಟು. ಸಾಲದ ವಿಷಯದಲ್ಲಿ ಭಾಷಣ ಮಾಡಿದ್ದರಿಂದ ಸಾಲದ ಪರಿಸ್ಥಿತಿ ಅಷ್ಟೊಂದು ಕಳವಳಕ್ಕೆ ಕಾರಣವಾಗಿಲ್ಲ. ಸಾಲಕ್ಕಿಂತ ಹೆಚ್ಚು ಆಸ್ತಿಯನ್ನು ಪಡೆದಿದ್ದೇವೆ, ಆದರೂ ಸ್ವಲ್ಪಮಟ್ಟಿಗೆ ಈಗ ಪರಿಸ್ಥಿತಿ ಚೆನ್ನಾಗಿಲ್ಲವೆಂಬುದಾಗಿ ಒಂದು ವಿಷಯವನ್ನು ಹೇಳಿದರು. ಈ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ಹೇಳುವುದೇನೆಂದರೆ, ನಿಜವಾಗಿ ನಮ್ಮ ರಾಜ್ಯದ ಅಭಿವೃದ್ಧಿಗಾಗಿ ನಾವು ಸಾಲ ಪಡೆಯುವಂಥಾದ್ದು ಬೇಕು. ಹಣವಿಲ್ಲದೆ ಯಾವ ಯೋಜನೆಯನ್ನೂ ಸಹ ಮಾಡಲಾರೆವು. ಹಣ ಪಡೆಯಬೇಕಾದರೆ ಸಾಲ ಮಾಡಬೇಕು. ಆದರೆ ಒಂದು ವಿಷಯ, ಮಿತಿಮೀರಿ ಸಾಲಮಾಡುವುದು ರಾಜ್ಯದ ಹಿತದೃಷ್ಟಿಯಿಂದ ಸರಿಯಾದುದಲ್ಲವೆಂದು ನನ್ನ ಭಾವನೆ. ಇವತ್ತು ನಾವು ಉತ್ಪತ್ತಿಯ ದೃಷ್ಟಿಯಿಂದ ಹಣ ಸಾಲ ಪಡೆದರೆ, ಅದು ನಮ್ಮ ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗವಾಗುವುದಾದರೆ ಒಳ್ಳೆಯದು; ಅದು ಅನ್‌ಪ್ರೊಡಕ್ಟಿವ್ ಕೆಲಸಗಳಿಗೋಸ್ಕರ ಖರ್ಚಾದರೆ ಅದರಿಂದೇನೂ ಪ್ರಯೋಜನವಿಲ್ಲ. ಯಾವುದೋ ಒಂದು ಯೋಜನೆಗೆ ಒಂದು ಸಾವಿರ ರೂಪಾಯಿಗಳಷ್ಟು ಖರ್ಚುಮಾಡುವಂಥಾ ವ್ಯವಸ್ಥೆಗೆ ಇವತ್ತು 10 ಸಾವಿರ ರೂಪಾಯಿಗಳಷ್ಟು ಸಾಲ ತೆಗೆದುಕೊಂಡು ಮಾಡುತ್ತೇವೆಂದು ಹೇಳಿದರೆ ಅದು ನಿಜವಾಗಿಯೂ ಸಾಧುವಾದ ಪ್ರಯತ್ನವೆಂದು ನಾನು ಭಾವಿಸುವುದಿಲ್ಲ. ಏಕೆಂದರೆ ಪರಿಸ್ಥಿತಿ ಏನಾಗಿದೆಯೆಂದರೆ, ಸಾಲವು ರೂಪವಾಗಿ ತೆಗೆದುಕೊಂಡ ಹಣ ಹೆಚ್ಚು ಉಪಯೋಗವಾಗುತ್ತಾ ಇಲ್ಲ, ಹೆಚ್ಚು ದುರುಪಯೋಗವಾಗುತ್ತಲೂ ಇಲ್ಲ. ಯಾವ ಉದ್ದೇಶಕ್ಕೆ ಸಾಲ ಪಡೆಯುತ್ತಾರೋ ಆ ಉದ್ದೇಶವಾಗುತ್ತಾ ಇಲ್ಲ. ಇನ್ನು ಸಾಲವಾಗಿ ತೆಗೆದುಕೊಂಡ ಹಣ ಎಲ್ಲಾ ಇರಾಖೆಗಳಲ್ಲಿಯೂ ಸರಿಯಾಗಿ ಬಳಕೆಯಾಗುತ್ತಾ ಇಲ್ಲ, ಎಂಬುದಾಗಿ ನನ್ನ ವಾದ ಇದೆ. 'ಯಥಾ ರಾಜಾ ತಥಾ ಪ್ರಜಾ:' ಎಂಬ ಹಾಗೆ ಯಾವರೀತಿ ಸರ್ಕಾರ ಇದೆಯೋ ಆ ರೀತಿ ಪ್ರಜೆಯೂ ಇರುತ್ತಾನೆ. ಈ ಸರ್ಕಾರ ಜರ್ಮನ್ಸ್ ಜಪಾನ್, ಅಮೇರಿಕಾ, ಇಂಗ್ಲೆಂಡ್ ಮತ್ತು ಇನ್ನೂ ಇತರ ಯಾವುದೇ ದೇಶಗಳಿಂದ ಸಾಲ ಸಿಗುವ ಸೌಲಭ್ಯ ಇದೆಯೆಂದು ತಿಳಿಯುವುದಾದರೆ, ಭಾರತ ಸರ್ಕಾರದ ಅರ್ಜಿ ಅಲ್ಲಿ ಇದ್ದೇ ಇರುತ್ತದೆ. ಏಕೆಂದರೆ, ಈ ಸಾಲವ ಹೊರೆ 12 ಸಾವಿರ ಕೋಟಿ ರೂಪಾಯಿಗಳು ನಮ್ಮ ರಾಷ್ಟ್ರದ್ದೇ ಆಗಿದೆ. ಮಿತಿಮೀರಿ ಸಾಲ ಮಾಡುವ ಅಭ್ಯಾಸವನ್ನು ಹಾಕಿಕೊಂಡು ಪ್ರಜಾ ಸರ್ಕಾರವೂ ಕೂಡ ಸಾಲಮಾಡುವುದನ್ನು ಬೆಳೆಸಿಕೊಂಡಿದೆ. ಪ್ರಜೆಗಳೂ ಕೂಡ ಇವತ್ತು ಯಾವುದೇ ಯೋಜನೆಗಾಗಲೀ, ಅಮ ಖಾಸಗಿಯಾಗಿಯೇ ಇರಲಿ, ಸರ್ಕಾರದ ಕಡೆಗೆ ಮುಖ ನೋಡಿ ಸರ್ಕಾರದಿಂದ ಸಾಲ ಬೇಕು ಎಂದು ಕೇಳುತ್ತಿದ್ದಾರೆ. ಇವತ್ತು ರಾಜ್ಯದ ರೈತರಲ್ಲಿಯೂ ಈ ಸಾಲ ಪ್ರವೃತ್ತಿಯನ್ನು ಬೆಳೆಸಿದ್ದಾರೆ. ನಮ್ಮ ಪ್ರಜಾ ಸರ್ಕಾರದಲ್ಲಿ ಟ್ಯಾಕ್ಟರುಗಳಿಗೆ ಸಾಲ, ಬಾವಿ ತೋಡುವುದಕ್ಕೆ ಸಾಲ, ಮನೆ ಕಟ್ಟುವುದಕ್ಕೆ ಸಾಲ—ಹೀಗೆ ಪ್ರತಿಯೊಂದಕ್ಕೂ ಸಾಲದ ಹೊರೆಯನ್ನು ಜನರ ಮೇಲೆ ಹಾಕುತ್ತಿದ್ದಾರೆ. ಸಾಲ ಪಡೆಯಬೇಕು, ಅದನ್ನು ರಾಷ್ಟ್ರದ ಅಭಿವೃದ್ಧಿ ಯೋಜನೆಗಳಿಗೋಸ್ಕರ ಉಪಯೋಗ ಮಾಡಬೇಕು ಎಂಬುದಾಗಿ ಹೇಳಿದರೆ ಅದರಿಂದ ನಿಜವಾಗಿ ಸಾರ್ಥಕವಾಗುತ್ತದೆ. ಹಾಗೆ ಮಾಡದೆ ಬೇರೆ ರೀತಿಯಲ್ಲಿ ಅದು ಉಪಯೋಗವಾಯಿತು ಎಂಬುದಾಗಿ ಹೇಳಿದರೆ ನಿಜವಾಗಿ ಈ ರಾಷ್ಟ್ರದ ಜನತೆಗೆ ಹಾನಿಯಾಗುತ್ತದೆ. ರಾಯಚೂರಿನಲ್ಲಿ ಕನಕನಾಳ ಪ್ರಾಜೆಕ್ಟನ್ನು ಕಟ್ಟಿಸಿದರು. ಒರಿಜನಲ್ ಎಸ್ಟಿಮೇಟ್ 25 ಲಕ್ಷ ರೂಪಾಯಿಗಳಾಗಿತ್ತು. ಅದು 25 ಲಕ್ಷ ರೂಪಾಯಿಗಳಲ್ಲಿ ಪ್ರಾರಂಭವಾದುದು. ಇವತ್ತು ಅದು ಒಂದು ಕೋಟಿ ರೂಪಾಯಿಗಳಿಗೆ ಆ ಯೋಜನೆ ಬಂದು ಮುಟ್ಟಿದೆ. ಇದರಿಂದ ನೀರಾವರಿಯಾಗಿರುವ ಪ್ರದೇಶ 4 ಸಾವಿರ ಎಕರೆಗಳು ಮಾತ್ರ ಈ ಪ್ರಾಜೆಕ್ಟಿನ ಖರ್ಚು ಕೇವಲ 25 ಲಕ್ಷ ರೂಪಾಯಿಗಳಿಂದ ಒಂದು ಕೋಟಿ ರೂಪಾಯಿಗಳವರೆಗೂ ಮುಟ್ಟಿದೆ ಎಂಬುದಾಗಿ ಹೇಳಿದರೆ ನಾವು ಪಡೆವಂಥ ಹಣ ಸರಿಯಾಗಿ ಉಪಯೋಗಮಾಡುತ್ತಿದ್ದೇವೆಯೇ ಎಂಬುದು ಇದರಿಂದಲೇ ಗೊತ್ತಾಗುತ್ತದೆ. ಈಗ ಏನಾಗಿದೆ ಅಂದರೆ, ಒಂದು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಮಾಡಿದ ಈ ಯೋಜನೆ ಹೊನ್ನೆಹೊನ್ನೆ ಕಟ್ಟಿದ ಕಟ್ಟಿದ್ದು, ಮನೆ ಮಾಳಿಗೆ ಕುಸಿಯುವಷ್ಟಿದ್ದು, ತಾವೇ ಕಂಟ್ರಾಕ್ಟ್ ಬಿಡಿಸಿ ಸರ್ಕಾರದವರು ಈಗ ಪುನಃ 25 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಮಾಡುವಂತಹ ಒಂದು ಯೋಜನೆಯನ್ನು ತೆಗೆದುಕೊಂಡಿದ್ದಾರೆ.

ಈ ರೀತಿಯಾಗಿ ದುರುಪಯೋಗ ಪ್ರತಿಯೊಂದು ಶಾಖೆಯಲ್ಲಿಯೂ ನಡೆಯುತ್ತಾ ಇದೆ. ಈ ರೀತಿಯ ಸಾಲದ ನೀತಿ ನಿಜವಾಗಿ ಜಾಣತನದ ನೀತಿಯೇ ಎಂಬುದಾಗಿ ನಾನು ಪ್ರಶ್ನೆಮಾಡುತ್ತೇನೆ. ವ್ಯೆಯುಕ್ತಿಕವಾಗಿ ನೋಡಿದ್ದರಲ್ಲಿ ನನ್ನ ಒಂದು ವಾದವನ್ನು ಸಮರ್ಥಿಸಬೇಕಾದರೆ, ಒಬ್ಬ ಮನುಷ್ಯ ಒಂದು ಲಗ್ನವನ್ನು ಮಾಡಬೇಕಾದರೆ ಒಂದು ಸಾವಿರ ರೂಪಾಯಿಗಳಲ್ಲಿ ಮಾಡಬಹುದು, 10 ಸಾವಿರ, 20 ಸಾವಿರ, 30 ಸಾವಿರ, ಹೀಗೆ ಅವನಲ್ಲಿದ್ದಂತೆ ಖರ್ಚುಮಾಡಬಹುದು. ಅದು ಅವನ ಯೋಗ್ಯತೆಯನ್ನು ಅನುಸರಿಸುತ್ತದೆ. ಪ್ಲಾನುಗಳನ್ನು ಮಾಡುವಾಗ ನಮ್ಮ ಸರ್ಕಾರದವರು ನಮ್ಮ ರಿಸೋರ್ಸ್‌ನ್ ಎಷ್ಟು ಬರುತ್ತದೆ, ಎಷ್ಟು ನಮಗೆ ಅದಾಯ ಬರುತ್ತದೆ, ಅದನ್ನು ಪರಿಗಣಿಸಿ ಖರ್ಚುಮಾಡಿದರೆ ಆಗ ಇಕನಾಮಿಕ್ಕಾಗಿ ಮಾಡಬಹುದು. ಒಂದು ಸಾವಿರ ರೂಪಾಯಿಗಳಲ್ಲಿ ಲಗ್ನಮಾಡುವುದನ್ನು ಡಾಂಭಿಕವಾಗಿ 50 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿಯೂ ಮಾಡಬಹುದು. ವಿವಾಹ ಕೇವಲ ಪ್ರೆಸ್ಟಿಜ್ ಎಂದು ಡಾಂಭಿಕವಾಗಿ ನಮ್ಮ ಸಮಾಜದಲ್ಲಿ ನಮ್ಮ ಸ್ಥಾನಮಾನಗಳನ್ನು ಉಳಿಸಿಕೊಳ್ಳುವುದಕ್ಕೋಸ್ಕರವಾಗಿ ಮಾಡುವ ಖರ್ಚು ಆ ರೀತಿಯಲ್ಲಿ ಆಗಬಹುದು. ಅದೇರೀತಿ ಇಲ್ಲಿಯೂ ದುರ್ವಿನಿಯೋಗವಾಗುತ್ತಿದೆ. ಲೋಕೋಪಯೋಗಿ ಶಾಖೆ, ನೀರಾವರಿ ಶಾಖೆ, ವಿದ್ಯುಚ್ಛಕ್ತಿ ಇಲಾಖೆ, ಶಿಕ್ಷಣ ಶಾಖೆ ಮುಂತಾದ ಪ್ರತಿಯೊಂದು ಇಲಾಖೆಯಲ್ಲಿಯಲ್ಲಿಯೂ ಈ ರೀತಿಯಾಗಿ ಹಣದ ದುರುಪಯೋಗವಾಗಿ, ಹಣದ ವಿನಿಯೋಗ ಸಮರ್ಪಕವಾದ ರೀತಿಯಲ್ಲಿ ನಡೆಯದೇ ಇರುವುದರಿಂದಲೇ ಇಂದು ಇನ್ನೂ ನಮ್ಮ ಯೋಜನೆಗಳು ಯಶಸ್ವಿಯಾಗಿಲ್ಲ.

ಇನ್ನು ಆಹಾರದೃಷ್ಟಿಯಿಂದ ಹೇಳುವುದಾದರೆ, ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಆಗಲೇ ನಾವು ಸ್ವಾವಲಂಬಿಗಳು ಆಗಿದ್ದೇವೆಂದು ಹೇಳಿದರು. ಈಗ ಇನ್ನೂ ಆದರಲ್ಲಿ ಸ್ವಾವಲಂಬಿಗಳು ಆಗಿಲ್ಲವೆಂದು ಹೇಳುತ್ತಿದ್ದಾರೆ. ಏಕೆಂದರೆ, ನಾವು ಮಾಡುವ ಯೋಜನೆಗಳು ಸಮರ್ಪಕವಾಗಿಲ್ಲ, ಸರಿಯಾಗಿಲ್ಲ, ನಾವು ಖರ್ಚುಮಾಡುವ ಹಣದ ಉಪಯೋಗ ಸರಿಯಾಗಿ ನಡೆಯುತ್ತಾ ಇಲ್ಲ. ಅದು ಇದರಿಂದಲೇ ಕಂಡುಬರುತ್ತದೆ. ಆದರೆ ನಾವು ಹಣವನ್ನು ಸಾಲ ಪಡೆದರೂ ನಮಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ತೆಗೆದುಕೊಂಡರೆ ಒಳ್ಳೆಯದು. ಅದನ್ನೂ ಕೂಡ ನಾವು ಪ್ರೊಡಕ್ಟಿವ್ ದೃಷ್ಟಿಯಿಂದ ತೆಗೆದುಕೊಂಡು ಆ ಒಂದು ಉದ್ದೇಶಕ್ಕೋಸ್ಕರವೇ ಅದನ್ನು ಖರ್ಚುಮಾಡಿದರೆ ಮಾತ್ರ ಅದರಿಂದ ಪ್ರಯೋಜನವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಇನ್ನು ಸೇಲ್ಸ್‌ಟ್ಯಾಕ್ಸ್ ವಿಷಯದಲ್ಲಿ ಹೇಳುವುದಾದರೆ, ಈಬಾಜಿನಲ್ಲಿ 23 ಕೋಟಿ ರೂಪಾಯಿಗಳ ಆದಾಯ ಬರುತ್ತದೆ. ಇದು ಬಹಳ ಪ್ರಶಂಸನೀಯವಾದ ಒಂದು ಕ್ರಮ ಎಂದು ನಾನು ಹೇಳುತ್ತೇನೆ. ಸೇಲ್ಸ್ ಟ್ಯಾಕ್ಸ್‌ನಿಂದ ಬರತಕ್ಕ 23 ಕೋಟಿ ರೂಪಾಯಿಗಳ ಆದಾಯ ವಿನಿದೆ ಇದು ಇನ್ನೂ ಹೆಚ್ಚಾಗಲಿಕ್ಕೆ ಸಾಧ್ಯ ಇದೆ ಎಂದು ಹೇಳಿದ್ದಾರೆ. ಈ ಸೇಲ್ಸ್ ಟ್ಯಾಕ್ಸ್ ವಿಷಯದಲ್ಲಿ ಹೇಳಬೇಕಾಗಿದ್ದರೆ ಆಹಾರಧಾನ್ಯಗಳ ಮೇಲೆ ರಾಜ್ಯ ಸರ್ಕಾರದವರು ಮಲ್ಟಿಪಾಯಿಂಟ್ ಸೇಲ್ಸ್ ಟ್ಯಾಕ್ಸ್ ಹಾಕಿದ್ದರು. ಈಗ ಅದನ್ನು ತೆಗೆದುಹಾಕಿ ಸಿಂಗರ್ ಪಾಯಿಂಟ್ ಹಾಕತಕ್ಕದ್ದು ಯೋಗ್ಯ ಎಂದು ನನ್ನ ಭಾವನೆ. ಆಹಾರ ಧಾನ್ಯಗಳ ಮಲ್ಟಿಪಾಯಿಂಟ್ ಸೇಲ್ಸ್‌ಟ್ಯಾಕ್ಸ್ ಹಾಕುವುದರಿಂದ ಆಹಾರಧಾನ್ಯಗಳ ಬೆಲೆ ಅನಾವಶ್ಯಕವಾಗಿ ಏರುತ್ತಾ ಹೋಗುತ್ತದೆ. ಪ್ರತಿಯೊಂದು ಪರ್ಚೇಸ್ಸ್ ಪಾಯಿಂಟ್‌ನಲ್ಲಿಯೂ ಸೇಲ್ಸ್ ಟ್ಯಾಕ್ಸ್ ಹಾಕುತ್ತಾರೆ. ಇದರ ಪರಿಣಾಮವಿಂದ ಆಹಾರಧಾನ್ಯಗಳ ಬೆಲೆ ಅನಾವಶ್ಯಕವಾಗಿ ಏರುತ್ತಾ ಹೋಗುತ್ತದೆ. ಈ ದೃಷ್ಟಿಯಿಂದ ಆಹಾರಧಾನ್ಯಗಳ ಮೇಲೆ ಮಲ್ಟಿಪಾಯಿಂಟ್ ಸೇಲ್ಸ್‌ಟ್ಯಾಕ್ಸ್ ಹಾಕದೆ ಸಿಂಗಲ್ ಪಾಯಿಂಟ್ ಸೇಲ್ಸ್‌ಟ್ಯಾಕ್ಸ್‌ನ್ನು ಫರ್ಸ್ಟ್ ಪಾಯಿಂಟ್ ಆಥವಾ ಲಾಸ್ಟ್ ಪಾಯಿಂಟ್‌ನಲ್ಲಿ ಕನ್ಸ್ಯೂಮರ್ಸ್ ಪಾಯಿಂಟ್‌ನಲ್ಲಿ ಇಟ್ಟರೆ ಯೋಗ್ಯವಾಗುತ್ತದೆ. ಅದಕಾರಣ ಸರ್ಕಾರದವರು ಈ ಆಹಾರ ಧಾನ್ಯಗಳ ಮೇಲೆ ಹಾಕಿರತಕ್ಕ ಮಲ್ಟಿಪಾಯಿಂಟ್ ಸೇಲ್ಸ್ ಟ್ಯಾಕ್ಸ್ ಅನ್ನು ಪುನರ್ ವಿಮರ್ಶೆ ಮಾಡಿ ಸಿಂಗಲ್ ಪಾಯಿಂಟ್ ಸೇಲ್ಸ್‌ಟ್ಯಾಕ್ಸ್ ಲೆವಿ ಮಾಡತಕ್ಕದ್ದನ್ನು ಯೋಚಿಸಬೇಕು. ಇದರಿಂದ ಆಹಾರಧಾನ್ಯಗಳ ಬೆಲೆ ಅಷ್ಟಾಗಿ ಏರುವುದಕ್ಕೆ ಅವಕಾಶವಾಗುವುದಿಲ್ಲ. ಅಲ್ಲದೆ ಇದರಿಂದ ಸರ್ಕಾರದ ಆದಾಯ ಕೂಡ ಕಡಿಮೆ ಬರುವುದು ಕಂಡುಬರುವುದಿಲ್ಲ.

ಇನ್ನು ಎರಡನೆಯ ವಿಷಯ ಆಕ್ಟ್ರಾಯ್ ಸಂಬಂಧ. ನಮ್ಮ ಮಂತ್ರಿಗಳು ಹೇಳಿದರು, ಆಕ್ಟ್ರಾಯ್ ತೆರಿಗೆಯನ್ನು ಹಾಕಬೇಕೆಂಬ ಉದ್ದೇಶ ಇದೆಯೆಂದು. ಅನೇಕ ಸ್ಥಳೀಯ ಸಂಸ್ಥೆಗಳ ಆದಾಯದ ಮೂಲ ಈ ಆಕ್ಟ್ರಾಯ್ ತೆರಿಗೆಯನ್ನು ವಸೂಲು ಮಾಡತಕ್ಕದ್ದು. ಪ್ರತಿಯೊಂದು ಗ್ರಾಮ, ಪ್ರತಿಯೊಂದು ಟೌನು, ಪಟ್ಟಣಗಳು ಮತ್ತು ಸಿಟಿಗಳಲ್ಲಿ ಗ್ರಾಮಪಂಚಾಯಿತಿ, ಟೌನು, ಪಂಚಾಯಿತಿ, ಮತ್ತು ಮುನಿಸಿಪಲ್ ಕೌನ್ಸಿಲ್‌ಗಳ ಮೂಲಕ ಆಕ್ಟ್ರಾಯ್ ತೆರಿಗೆಯನ್ನು

(ಶ್ರೀ ವಿಶ್ವನಾಥಸ್ವಾಮಿ)

ವಿಧಿಸುತ್ತಿದ್ದಾರೆ. ಈ ಆಕ್ಟ್ರಾಯ್ ತೆರಿಗೆ ಎನ್ನುವುದು ಪ್ರತಿಯೊಬ್ಬರಿಗೂ ನ್ಯೂಸೆನ್ಸ್ ಆಗಿದೆ. ಯಾವುದಾದರೂ ಸಾಮಾನುಗಳನ್ನು ಮಾರಾಟ ಮಾಡುವುದಕ್ಕೆ ಮಾರ್ಕೆಟ್ಟಿಗೆ ತೆರಬೇಕಾದರೆ ಆಕ್ಟ್ರಾಯ್ ತೆರಬೇಕಾಗುತ್ತದೆ. ಬೇರೆ ಯಾವುದಾದರೂ ಒಂದೂರಿನಿಂದ ಇನ್ನೊಂದೂರಿಗೆ ಸಾಮಾನುಗಳನ್ನು ತೆರಬೇಕಾದರೆ ಆಕ್ಟ್ರಾಯ್ ತೆರಬೇಕಾಗುತ್ತದೆ. ಮುನಿಸಿಪಾಲಿಟಿ ಆಕ್ಟ್‌ನಲ್ಲಿ, ಪಂಚಾಯಿತಿ ಆಕ್ಟ್‌ನಲ್ಲಿ ಎಲ್ಲಾ ವಿಧವಾದ ಐಟಂಗಳ ಮೇಲೂ ಆಕ್ಟ್ರಾಯ್ ವಿಧಿಸಬೇಕೆಂದು ಸರ್ಕಾರದವರು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಸೇಲ್ಸ್ ಟ್ಯಾಕ್ಸ್ ಮತ್ತು ಆಕ್ಟ್ರಾಯ್ ಈ ಎರಡರ ನೀತಿಗಳೂ ಒಂದೇ ಇವುಗಳಿಂದ ಪ್ರತಿಯೊಂದು ವಸ್ತುಗಳ ಬೆಲೆಗಳೂ ಏರುವುದಕ್ಕೆ ಕಾರಣವಾಗಿದೆ. ಯಾವುದೇ ಒಂದು ಸಾಮಾನನ್ನು ಗ್ರಾಮಾಂತರ ಪ್ರದೇಶಗಳಿಂದ ಟೌನ್ ಪಂಚಾಯಿತಿ, ಇರಲಿ, ಮುನಿಸಿಪಾಲಿಟಿ ಇರಲಿ, ಸಿಟಿ ಮುನಿಸಿಪಾಲಿಟಿ ಇರಲಿ ಅವುಗಳ ಜ್ಯೂರಿಸ್‌ಡಿಕ್ಷನ್ನಿಗೆ ತಂದರೆ 2 ಪರ್ಸೆಂಟ್ ಇಂದ 3 ಪರ್ಸೆಂಟ್ ಆಕ್ಟ್ರಾಯ್ ತೆರಿಗೆಯನ್ನು ಹಾಕುತ್ತಾರೆ. ಫರ್ಟಿಲೈಜರ್ಸ್‌ಮೇಲೆ 2 ಪರ್ಸೆಂಟ್ ಹಾಕುತ್ತಾರೆ. ಒಂದು ದೃಷ್ಟಿಯಿಂದ ಪದಾರ್ಥಗಳ ಬೆಲೆ ಏರುಪೇರಿಕೆಯನ್ನು ಕಂಟ್ರೋಲ್ ಮಾಡಬೇಕೆಂದು ಸರ್ಕಾರವು ಉದ್ದೇಶ ಇದೆ. ಇನ್ನೊಂದು ದೃಷ್ಟಿಯಿಂದ ಆಕ್ಟ್ರಾಯ್ ತೆರಿಗೆಯನ್ನು ಹಾಕಿ, ಸೇಲ್ಸ್ ಟ್ಯಾಕ್ಸ್ ಮಲ್ಟಿಪಾಯಿಂಟ್ ತೆರಿಗೆಯನ್ನು ಆಹಾರಧಾನ್ಯಗಳ ಮೇಲೆ ಹಾಕಿ ಸರ್ಕಾರವು ಆದಾಯವನ್ನು ಹೆಚ್ಚಿಸಿಕೊಳ್ಳಬೇಕೆಂದಿದ್ದಾರೆ. ಇದರಿಂದ ಬೆಲೆಗಳು ಏರುತ್ತವೆಯೇ ಹೊರತು ಬೆಲೆಗಳು ಕಂಟ್ರೋಲ್ ಆಗುವುದು ಕಷ್ಟ ಇದೆ. ಆದ್ದರಿಂದ ಆದಷ್ಟು ತೀವ್ರವಾಗಿ ಆಕ್ಟ್ರಾಯ್ ತೆರಿಗೆಯನ್ನು ವಸೂಲು ಮಾಡುವುದನ್ನು ನಿಲ್ಲಿಸಿ ಮುನಿಸಿಪಾಲಿಟಿ, ಸ್ಥಳೀಯ ಸಂಸ್ಥೆಗಳ ಆದಾಯವನ್ನು ಬೇರೆ ರೀತಿಯಿಂದ ತುಂಬಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಆಸ್ತಿ ತೆರಿಗೆಯನ್ನು ಹಾಕಲಿ ಅಥವಾ ಇನ್ನು ಯಾವುದಾದರೂ ಬೇರೆ ರೀತಿಯ ತೆರಿಗೆಯನ್ನು ಹಾಕಲಿ. ಈ ಆಕ್ಟ್ರಾಯ್ ತೆರಿಗೆಯನ್ನು ಹಾಕುವುದು ಒಂದು ನ್ಯೂಸೆನ್ಸ್ ಆಗಿದೆ. ಇದರಿಂದ ಜನಗಳಿಗೆ ತೊಂದರೆ ಇದೆ. ಆದ್ದರಿಂದ ಇದನ್ನು ತಪ್ಪಿಸಬೇಕು ಎಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಇನ್ನು ಈ ಬಜೆಟ್ಟಿನ ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರು ಮಾತನಾಡುತ್ತಾ ಈ ಬಜೆಟ್ಟು ಸಮರ್ಪಕವಾಗಿಲ್ಲ, ಇದರಲ್ಲಿ ಕೊಟ್ಟಿರತಕ್ಕ ಸ್ಟ್ಯಾಟಿಸ್ಟಿಕ್ಸ್ ಬರೀ ''ಜಗ್ಲರಿ'' ಎಂದು ನಾನಾ ರೀತಿಯಾಗಿ ಪರ್ಣನ ಮಾಡಿದ್ದಾರೆ. ನನ್ನ ದೃಷ್ಟಿಯಲ್ಲಿ ಇದು ನಿಜವಾಗಿಯೂ ನೈಜವಾದ ಬಜೆಟ್ ಎಂದು. ನಮ್ಮ ರಾಜ್ಯದ ನೈಜವಾದ ಆರ್ಥಿಕ ಸ್ಥಿತಿಯನ್ನು ಗೊತ್ತುಮಾಡಿ ಮಂಡಿಸಿದಂತಹ ಬಜೆಟ್ ಎಂದು ನನ್ನ ಭಾವನೆ. ಈ ಬಜೆಟ್ಟಿನಲ್ಲಿರತಕ್ಕ ಕೆಲವು ತಿಳುವಳಿಕೆಗಳು ಸರಿಯಿಲ್ಲ ಎಂದು ಮಾನ್ಯ ಹಣಕಾಸಿನ ಸಚಿವರೇ ತಮ್ಮ ಬಜೆಟ್ ಭಾಷಣದಲ್ಲಿ ಒಪ್ಪಿಕೊಂಡಿದ್ದಾರೆ. ಈ ರೀತಿ ಆಗುವುದಕ್ಕೆ ನಾನಾ ಕಾರಣಗಳು ಇವೆ. ಉದ್ಯಮಗಳಲ್ಲಿರತಕ್ಕ ನ್ಯೂನತೆಗಳನ್ನು ಸರ್ಕಾರದವರೇ ಸ್ವತಃ ಒಪ್ಪಿಕೊಂಡಿದ್ದಾರೆ. ಅದರ ಕೆಲಸಕಾರ್ಯಗಳು ತೃಪ್ತಿಕರವಾಗಿಲ್ಲ ಎಂದು ಅವರೇ ಒಪ್ಪಿಕೊಂಡಿದ್ದಾರೆ. ನಮ್ಮ ದೇಶದ ಸ್ಥಿತಿಗಳು ಎಲ್ಲಾ ತೃಪ್ತಿಕರವಾಗಿವೆ ಎಂದು ನಾನು ಹೇಳುವುದಿಲ್ಲ. ಎಲ್ಲಾ ತೃಪ್ತಿಕರವಾಗಿವೆ ಎಂದು ನಾನು ಹೇಳಿದರೂ ಕೂಡ ತಾವು ಒಪ್ಪುವುದಿಲ್ಲ. ಎಷ್ಟೋ ದೃಷ್ಟಿಯಿಂದ ನ್ಯೂನತೆಗಳು ಇವೆ, ದೋಷಗಳಿವೆ. ಆದರೂ ಇದು ರಿಯಲಿಸ್ಟಿಕ್ ಬಜೆಟ್ ಎಂದು ನನ್ನಭಿಪ್ರಾಯ. ಆದರೆ ಈ ವರ್ಷದ ಬಜೆಟ್ಟಿನಲ್ಲಿ ಯಾವು ಯಾವುದಕ್ಕೆ ಎಷ್ಟೆಷ್ಟು ಪ್ರಾಧಾನ್ಯತೆಯನ್ನು ಕೊಡಬೇಕೋ ಅಷ್ಟು ಪ್ರಾಧಾನ್ಯತೆಯನ್ನು ಕೊಟ್ಟಿಲ್ಲ. ಇರಿಗೇಷನ್, ಪವರಾವರಿ ಯೋಜನೆಗಳು ಇವುಗಳಿಗೆ ಎಷ್ಟು ಪ್ರಾಧಾನ್ಯತೆಯನ್ನು ಕೊಡಬೇಕೋ ಅವುಗಳಿಗೆ ಎಷ್ಟು ಪ್ರಾಧಾನ್ಯತೆ ಸಿಕ್ಕಬೇಕೋ ಅಷ್ಟು ಸಿಕ್ಕಿಲ್ಲ ಎಂದು ನನ್ನ ಭಾವನೆ. ನಾನು ಮೊನ್ನೆ ತಿಳಿಸಿದ ಹಾಗೆ ಅಪ್ಪರ್‌ಕೃಷ್ಣಾ ಪ್ರಾಜೆಕ್ಟಿಗೆ ಸರ್ಕಾರದವರು ಎಷ್ಟು ಹಣವನ್ನು ಒದಗಿಸಬೇಕಾಗಿತ್ತೋ ಅಷ್ಟು ಹಣವನ್ನು ಒದಗಿಸಿಲ್ಲ. ಕೃಷ್ಣಾ ಮೇಲ್ದಂಡೆಯ ಯೋಜನೆಗೆ ಕೇವಲ 50 ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಇಟ್ಟಿದ್ದಾರೆ. ಈ ಯೋಜನೆ 120 ಕೋಟಿ ರೂಪಾಯಿಗಳ ಒಂದು ಯೋಜನೆ ಆದರೆ ಈ ಯೋಜನೆಯು ಕೆಲಸಕಾರ್ಯಗಳಿಗೆ ಮೊದಲನೆ ಹಂತದಲ್ಲಿ ಈ ವರ್ಷ ಕೇವಲ 50 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಇದನ್ನು ನೋಡಿದರೆ ಪ್ರತಿಕ್ಕೆ ಇಪ್ಪೊಂದು ಹಣವನ್ನು ಕಡಿಮೆ ಹಣವನ್ನು ಇಟ್ಟಿದ್ದಾರೆ ಎಂಬುವು ಗೊತ್ತಾಗುವುದಿಲ್ಲ. ಬಹುಶಃ ದುಡ್ಡು ಇಲ್ಲ ಎನ್ನತಕ್ಕಂಥಾದ್ದು ಇರಬೇಕು. ನಾನು ಹಿಂದೆ ತಿಳಿಸಿದಂತೆ ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಸಹಾಯದ ರೂಪದಲ್ಲಾಗಲೀ, ಸಾಲದ ರೂಪದಲ್ಲಾಗಲೀ ಹಣಸಹಾಯವನ್ನು ಒದಗಿಸಿಕೊಳ್ಳುವುದು ಅವಶ್ಯಕ. ಆಂಧ್ರ ಸರ್ಕಾರದವರು ನಾಗಾರ್ಜುನ ಸಾಗರದ ಯೋಜನೆಗೆ ಕೇಂದ್ರ ಸರ್ಕಾರದಿಂದ 120 ಕೋಟಿ ರೂಪಾಯಿಗಳನ್ನು ಸಾಲದ ರೂಪದಲ್ಲಿ ಪಡೆದುಕೊಂಡಿದ್ದಾರೆ. ಅದೇ ರೀತಿ ನಮ್ಮ ಸರ್ಕಾರದವರು

ಕೂಡ ಕೃಷ್ಣಾ ಮೇಲ್ದಂಡೆಯ ಯೋಜನೆಗೆ ಕೇಂದ್ರಸರ್ಕಾರದಿಂದ ಸಹಾಯವನ್ನು ಪಡೆದು ಕೊಳ್ಳುವುದಕ್ಕೆ ಪ್ರಯತ್ನಮಾಡಬೇಕು. ಒಂದು ವೇಳೆ ಕೇಂದ್ರಸರ್ಕಾರದಿಂದ ನಮ್ಮ ರಾಜ್ಯ ಸರ್ಕಾರದವರು ಈ ಯೋಜನೆಗೆ ಹಣಸಹಾಯವನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನುವ ಉದ್ದೇಶ ಇದ್ದರೆ, ನಮ್ಮ ರಾಜ್ಯಸರ್ಕಾರದವರೇ ಯಾವುದಾದರೂ ಒಂದು ರೀತಿಯಿಲ್ಲಿ ರಿಸೋರ್ಸಸ್ ಒಟಗಿಸಿಕೊಂಡು ಅಥವಾ ಸ್ಪೆಷರ್ ಲೋನ್ ಪಡೆದುಕೊಂಡು ಈ ಯೋಜನೆಗೆ ಪ್ರಯಾರಿಟಿ ಕೊಟ್ಟು ಇದನ್ನು ಜಾಗ್ರತೆ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಈ ಕೃಷ್ಣಾ ಯೋಜನೆಯಿಂದ ನಮ್ಮ ರಾಜ್ಯಕ್ಕೆ 13-14 ಲಕ್ಷ ಎಕರೆ ನೀರಾವರಿ ಪ್ರದೇಶವಾಗುತ್ತದೆ. ಇಂಥಾ ಒಂದು ಯೋಜನೆಯನ್ನು ನಮ್ಮ ಸರ್ಕಾರದವರು ಉಲಕ್ಷ್ಯಮಾಡುವುದು ಸರಿಯಲ್ಲ. ಎಲ್ಲಾದರೂ ಸ್ಪೆಷಲ್ ಲೋನು ತೆಗೆದುಕೊಂಡು ತ್ವರಿತವಾಗಿ ಈ ಕೆಲಸವನ್ನು ತೆಗೆದುಕೊಂಡು ಇದನ್ನು ಕಾರ್ಯಗತ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನನ್ನ ವಿನಂತಿ ಆದೂ ಅಲ್ಲದೆ ಕೇವಲ ದೊಡ್ಡ ದೊಡ್ಡ ಯೋಜನೆಗಳನ್ನು ತೆಗೆದುಕೊಂಡು ಅವುಗಳಿಗೆ ದುಡ್ಡು ಒದಗಿಸುವುದಕ್ಕೆ ಸಾಧ್ಯವಿಲ್ಲ. ಎಂದರೆ ಬೇರೆ ದೃಷ್ಟಿಯಿಂದ ಇರಿಗೇಷನ್ ಪೊಟೆನ್ಶಿಯಾಲಟಿಯನ್ನು ಹೆಚ್ಚು ಮಾಡತಕ್ಕ ಅಲ್ಟರ್‌ನೇಟೀವ್ ಯೋಜನೆ ಮಾಡಬೇಕಾಗುತ್ತದೆ. ಚಿಕ್ಕಪುಟ್ಟ ನೀರಾವರಿ ಯೋಜನೆಗಳು, ಕೆರೆಗಳು ಪಿಕಪ್‌ಗಳು ಅಣಿಕಟ್‌ಗಳು ಇಂಥ ಪುಗಳನ್ನು ಮಾಡಿಸುವುದರಿಂದ ಒಂದು ನಾಲ್ಕು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದಾದರೆ ಒಂದು ಸಾವಿರ ಎಕರೆ ನೀರಾವರಿ ಆಗಬಹುದು. ಮತ್ತು ಇದೇ ರೀತಿಯಾಗಿ 15 ಸಾವಿರ, 20 ಸಾವಿರ, 30 ಸಾವಿರ ರೂಪಾಯಿ ಗಳನ್ನು ಖರ್ಚು ಮಾಡಿ ಪಿಕಪ್‌ಗಳು ಅಣಿಕಟ್‌ಗಳನ್ನು ಕಟ್ಟಿಸುವುದಾದರೆ ಅವುಗಳಿಂದ 3 ಸಾವಿರ, 4 ಸಾವಿರ ಎಕರೆ ನೀರಾವರಿಯಾಗತಕ್ಕಂಥ ಯೋಜನೆಗಳು ಇವೆ. ಆದ್ದರಿಂದ ಅಂಥಾ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಪ್ರಯತ್ನಮಾಡಬೇಕು. ಈ ಬಡ್ಜೆಟ್ಟಿನಲ್ಲಿ ಮೈನರ್ ಇರಿಗೇಷನ್ ಪೊಟೆನ್ಶಿಯಾಲಟಿ ಹೆಚ್ಚು ಮಾಡುವುದಕ್ಕೆ ಎಷ್ಟು ಹಣ ಒದಗಿಸಬೇಕೋ ಅಷ್ಟು ಒದಗಿಸಿ ಇಟ್ಟಿಲ್ಲ.

ಒಟ್ಟಿನಲ್ಲಿ ರೋಕೋಪಯೋಗಿ ಇರಾಖೆಗೆ ಕೇವಲ 26ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಈ ಹಣದಲ್ಲಿ 9 ಕೋಟಿ ರೂಪಾಯಿಗಳು ಇರಿಗೇಷನ್‌ಗಾಗಿ ಇದೆ. ಇಷ್ಟು ಕಡಿಮೆ ಹಣ ಏತಕ್ಕೆ ಸಾಲುತ್ತದೆ? 120 ಕೋಟಿ ರೂಪಾಯಿಗಳ ವೆಚ್ಚದ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪ್ರತಿ ವರ್ಷ 12 ಕೋಟಿ ರೂಪಾಯಿಗಳಂತೆ ಒದಗಿಸಿದರೂ ಸಹ ಮುಗಿಸಲು 10 ವರ್ಷ ಬೇಕಾಗುತ್ತದೆ. ಆದರೆ ಕೇವಲ 9 ಕೋಟಿ ರೂಪಾಯಿಗಳನ್ನು ಇರಿಗೇಷನ್‌ಗೆ ಇಟ್ಟಿರುವುದು ಜಾಗ್ರತೆ ಕೆಲಸ ವಾಗುವುದಕ್ಕೆ ಅವಕಾಶವಾಗುವುದಿಲ್ಲ. ನಮ್ಮ ರಾಜ್ಯದಲ್ಲಿ ಪಿಕ್-ಅಪ್‌ಗಳನ್ನು, ಸಣ್ಣ ನೀರಾವರಿ ಯೋಜನೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ತೆಗೆದುಕೊಂಡರೆ ಹೆಚ್ಚು ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ನಮ್ಮ ರಾಜ್ಯದ ಪೊಟೆನ್ಶಿಯಲ್ ತೆಗೆದುಕೊಂಡರೆ ಕೇವಲ 8 ಪರ್‌ಸೆಂಟ್ ಇದೆ. ಅದೇ ಆಂಧ್ರ ರಾಜ್ಯದಲ್ಲಿ 33 ಪರ್‌ಸೆಂಟ್ ಇದೆ, ಮದ್ರಾಸ್ ರಾಜ್ಯದಲ್ಲಿ 36 ಪರ್‌ಸೆಂಟ್ ಇದೆ.

Sri VENKANA GOUDA SIDDANA GOUDA.—The Hon'ble Member was making a suggestion that Upper Krishna Valley project may be taken up even by raising special loan to meet the expenditure to some extent. May I take it that in addition to the farmers who are interested in the development of irrigation contributing to the project, it will be possible to take loans from scheduled banks who are interested in helping the development of agriculture?

Sri VISWANATHA SWAMY.—Definitely. ನಾನು ಹೇಳುವುದೇನೆಂದರೆ, ಯಾವುದೇ ವಿಧಾನದಿಂದರಾದರೂ ಸರಿಯೆ, ಹಣವನ್ನು ಒದಗಿಸಿಕೊಳ್ಳುವುದು ಅವಶ್ಯಕವಿದೆಯೆಂದು ಮಾನ್ಯ ಆರ್ಥ ಮಂತ್ರಿಗಳಿಗೆ ತಿಳಿಸುತ್ತೇನೆ. ಈ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಜಾಗ್ರತೆ ಮುಗಿಸುವ ಬಗ್ಗೆ ಅರ್ಥ ಮಂತ್ರಿಗಳು ವಿಚಾರ ಮಾಡಬೇಕಾದುದು ಅತ್ಯಾವಶ್ಯಕವಾಗಿದೆ. ಫೆಡ್ಯೂರ್ ಬ್ಯಾಂಕ್‌ನವರು ಸಹ ಈ ಯೋಜನೆಗೆ ಹಣ ವಿನಿಯೋಗ ಮಾಡುವುದಕ್ಕೆ ಸಾಧ್ಯವಿದೆ. ಅಂತೂ ಸ್ಪೆಷರ್ ಲೋನ್ ಮುಖಾಂತರವಾಗಲೀ, ಬ್ಯಾಂಕ್‌ಗಳಿಂದ ಸಾಲ ತೆಗೆದುಕೊಂಡಾಗಲೀ, ಅಥವಾ ಇನ್ಯಾವುದೇ ಮುಖಾಂತರವಾಗಲೀ ಈ ಯೋಜನೆಯನ್ನು ಕಾರ್ಯಗತ ಮಾಡಬೇಕೆಂದು ಸರ್ಕಾರದವರಲ್ಲಿ ನನ್ನ ವಿನಂತಿ ಇದೆ. ಹಣ ಪಡೆಯುವ ಬಗ್ಗೆ ಎಲ್ಲಾ ವಿಧಾನಗಳನ್ನೂ ವಿಚಾರ

(ಶ್ರೀ ಎಶ್ವನಾಥನ್‌ಯಾಮಿ)

ಮಾಡಿ ನೋಡಲು. ಕೇಂದ್ರಸರ್ಕಾರದವರೇ ಈ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಿರುವುದು ಸರಿಯಿಲ್ಲ. ಅವರು ತೆಗೆದುಕೊಳ್ಳುವವರೆಗೆ ಸುಮ್ಮನಿರುವುದೂ ಸಹ ಸರಿಯಿಲ್ಲ. ಹೊಸಪೇಟೆಯಲ್ಲಿ ಸ್ಟೀರ್‌ಪ್ಲಾಂಟನ್ನು ಕೇಂದ್ರಸರ್ಕಾರದವರು ಸ್ಥಾಪನೆ ಮಾಡದಿದ್ದರೂ ಸಹ ನಾವೇ ಮಾಡುತ್ತೇವೆಂದು ನಮ್ಮ ಸರ್ಕಾರದವರು ಹೇಳುತ್ತಿರುವಂತೆ ಈ ಯೋಜನೆಯನ್ನು ಸಹ ಕೇಂದ್ರಸರ್ಕಾರದವರ ನೆರವಿಗಾಗಿ ಕಾಯದೆ ನಾವೇ ತೆಗೆದುಕೊಳ್ಳುತ್ತೇವೆ ಎಂಬುದನ್ನು ಒಂದು ನೀತಿಯಲ್ಲಿ ತೋರಿಸಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಅನ್ನಭಾಗ್ಯಕ್ಕೆ ಎಷ್ಟೋ ಸಲ ಭೇಟಿ ಕೊಟ್ಟಾಗ, ರೈತರು ಸಾಲ ಕೊಟ್ಟರೆ ಈ ಯೋಜನೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಈ ಯೋಜನೆಗೆ 200ರಿಂದ 300 ಕೋಟಿ ರೂಪಾಯಿಗಳು ಖರ್ಚು ಆದರೂ ಸರಿಯೆ, ಸಾಲ ಕೊಡುವುದಾದರೆ ವಿಚಾರ ಮಾಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಸರ್ಕಾರದವರು ಡಿಬೆಂಚರ್ ಸಾಲವನ್ನು ಪಡೆದು ಅಗಲೀ, ಬ್ಯಾಂಕ್‌ಗಳಿಂದ ಸಾಲ ಪಡೆದಾಗಲೀ ಅಥವಾ ಬೇರೆ ಯಾವ ಮುಖಾಂತರದಿಂದಲಾದರೂ ಸರಿಯೇ ಈ ಯೋಜನೆಯನ್ನು ಕೈಬಿಟ್ಟು ಮುಂದಿನಬೇಕೆಂದು ಸರ್ಕಾರದವರಲ್ಲಿ ನನ್ನ ವಿನಂತಿ ಇದೆ.

ಇನ್ನು ಕೋಆಪರೇಷನ್ ವಿಷಯದಲ್ಲಿ ಹೇಳುವುದಾದರೆ, ಎಲ್ಲಾ ಯೋಜನೆಗಳನ್ನು ಸಹಕಾರ ಸಂಸ್ಥೆಗಳ ಮೂಲಕ ಕಾರ್ಯಗತ ಮಾಡಬೇಕೆಂಬುದು ಸರ್ಕಾರದ ನೀತಿಯಾಗಿದೆ. ಆದ್ದರಿಂದ ಸರ್ಕಾರದವರು ಸಹಕಾರ ಸಂಘಗಳಿಗೆ ಸಾಕಷ್ಟು ಪ್ರಾಮುಖ್ಯತೆ ಕೊಟ್ಟುಕೊಂಡು ಬಂದಿದ್ದಾರೆ. ನಮ್ಮ ರಾಜ್ಯದ ಸಹಕಾರ ಸಂಸ್ಥೆಗಳಲ್ಲಿ ಒಟ್ಟು 218 ಕೋಟಿ ರೂಪಾಯಿಗಳಷ್ಟು ವರ್ಕಿಂಗ್ ಕ್ಯಾಪಿಟಲ್ ಇದೆ. ಈ ಸಹಕಾರ ಸಂಸ್ಥೆಗಳು ಸರಿಯಾಗಿ ಕೆಲಸವನ್ನು ನಿರ್ವಹಿಸುತ್ತಿವೆಯೋ ಇಲ್ಲವೋ ಎಂಬುದನ್ನು ನೋಡಬೇಕಾಗಿದೆ. ಈ ಬಗ್ಗೆ ಕೆಲವು ಮಾನ್ಯ ಸದಸ್ಯರುಗಳು ಅಕ್ಷೇಪಣೆಯನ್ನು ಮಾಡಿದ್ದಾರೆ. ಈ ಸಹಕಾರ ಸಂಘಗಳು ಸಾಕಷ್ಟು ತೃಪ್ತಿಕರವಾದಂಥ ಕೆಲಸವನ್ನು ಮಾಡುತ್ತಿಲ್ಲವೆಂದು ಹೇಳಿದ್ದಾರೆ. ಈ ಸಹಕಾರ ಸಂಘಗಳು ಸರಿಯಾಗಿ ಕೆಲಸ ಮಾಡದಿರುವುದಕ್ಕೆ ಕಾರಣವೆಂದರೆ ಸರಿಯಾದಂಥ ಒಂದು ಮೇಲ್ವಿಚಾರಣೆ, ಆಡಳಿತ ಇಲ್ಲದಿರುವುದೇ ಕಾರಣವೆಂದು ನಾನು ತಿಳಿದಿದ್ದೇನೆ. ಕೋಆಪರೇಷನ್ ದೃಷ್ಟಿಯಿಂದ ಹೇಳಬೇಕೆಂದರೆ, ಈ ಬಗ್ಗೆ ಒಂದು ಆಕ್ಟ್ ಮಾಡಿದ್ದಾರೆ. ಕೆಲವು ಎಲೆಕ್ಷನ್ ರೂಲ್ಸ್‌ಗಳನ್ನು ಮಾಡಿದ್ದಾರೆ. ಬೇರೆ ಯಾವ ಕಡೆಯೂ ಇಲ್ಲದಂಥ ಒಂದು ರೂಲ್ಸ್‌ನ್ನು ಈ ಸಹಕಾರ ಸಂಘಗಳ ಚುನಾವಣೆ ಬಗ್ಗೆ ಸರ್ಕಾರದವರು ಮಾಡಿದ್ದಾರೆ. ಸಾಮಾನ್ಯವಾಗಿ ಎಲ್ಲಾ ಚುನಾವಣೆಗಳಲ್ಲೂ ಸಹ ನಡೆಯುವುದು ನಾಮ ಪತ್ರಗಳ ಸ್ಕ್ರೂಟಿನಿಯಾದ ಮೇರೆ, ಕ್ಯಾಂಡಿಡೇಟ್ಸ್ ಬೇಕಾದರೆ ಮುಂಚೆಯೇ ತಿಳಿಸಿದ ತಾರೀಖಿನೊಳಗೆ ತಮ್ಮ ನಾಮಪತ್ರವನ್ನು ವಾಪಸ್ ಪಡೆಯುವುದಕ್ಕೆ ಅವಕಾಶವಿದೆ. ಆದರೆ ಈ ಸಹಕಾರ ಸಂಘಗಳ ಚುನಾವಣೆಯಲ್ಲಿ ಮಾತ್ರ ಸ್ಕ್ರೂಟಿನಿಯಾಗುವುದಕ್ಕೆ ಮೊದಲೇ ಬೇಕಾದವರು ತಮ್ಮ ನಾಮಪತ್ರವನ್ನು ವಾಪಸ್ ತೆಗೆದುಕೊಳ್ಳಬೇಕಾಗಿದೆ. ಇದರಿಂದ ಏನಾಗುತ್ತದೆಂದರೆ, ಒಂದು ಪಕ್ಷ ಕೆಲವರ ನಾಮಪತ್ರಗಳು ಸ್ಕ್ರೂಟಿನಿ ಸಮಯದಲ್ಲಿ ಕ್ರಮಬದ್ಧವಾಗಿಲ್ಲದೆ ಸಂಬಂಧಪಟ್ಟ ಅಧಿಕಾರಿಗಳು ರಿಜೆಕ್ಟ್ ಮಾಡಿರಬಹುದು. ಆಗ ಸಾಕಷ್ಟು ಜನ ಸ್ಪರ್ಧಿಗಳು ಇಲ್ಲದಿದ್ದರೆ ಇರುವವರೇ ಆರಿಸಿ ಬರುತ್ತಾರೆ, ಮತ್ತು ಇವರೂ ಸಹ ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದಿದ್ದರೆ ಇವರುಗಳು ತಮಗೆ ಬೇಕಾದವರನ್ನು ಡೈರಕ್ಟರನ್ನಾಗಿ ತೆಗೆದುಕೊಳ್ಳುವುದಕ್ಕೆ ಅವಕಾಶವಿರುತ್ತದೆ. ಈ ರೀತಿಯಿಂದಾಗಿ ಸಹಕಾರಸಂಘಗಳ ಕೆಲಸ ತೃಪ್ತಿಕರವಾಗಿ ನಡೆಯುವುದಕ್ಕೆ ಅವಕಾಶವಿಲ್ಲದಂತಾಗಿದೆ. ಆದ್ದರಿಂದ ಈ ಚುನಾವಣಾ ರೂಲ್ಸ್‌ನ್ನು ಜನರಲ್ ಎಲೆಕ್ಷನ್‌ರೂಲ್ಸ್ ಪ್ರಕಾರ ತಿದ್ದುಪಡಿ ಮಾಡಬೇಕಾಗಿದೆ. ಸ್ಕ್ರೂಟಿನಿ ನಂತರ ವಿತ್‌ಡ್ರಾಯಲ್ ಮಾಡುವುದಕ್ಕೆ ಅನುಕೂಲವಾಗುವಂತೆ ಒಂದು ತಿದ್ದುಪಡಿಯನ್ನು ಅದಷ್ಟು ಜಾಗ್ರತೆ ಸರ್ಕಾರದವರು ರೆಜಿಸ್ಟ್ರೇಷರ್ ಮುಂದೆ ತರಬೇಕೆಂದು ನನ್ನ ವಿನಂತಿಯಿದೆ.

ಇನ್ನು ವ್ಯವಸಾಯದ ದೃಷ್ಟಿಯಿಂದ ಹೇಳಬೇಕಾದರೆ, ನಮ್ಮಪಕ್ಷದವಾದಂಥ ಕೆಲಸಗಳು ಈ ರಂಗದಲ್ಲಿ ಆಗುತ್ತಿಲ್ಲವೆಂದು ಕೆಲವು ಮಾನ್ಯ ಸದಸ್ಯರುಗಳು ಹೇಳಿದರು. ಆದರೆ ನನ್ನ ದೃಷ್ಟಿಯಲ್ಲಿ ವ್ಯವಸಾಯ ರಂಗದಲ್ಲಿ ನಮ್ಮ ಸರ್ಕಾರದವರು ಸಾಕಷ್ಟು ಅನಕ್ಕಿ, ಬಹಿನಿ ಕೆಲಸ ಮಾಡುತ್ತಿದ್ದಾರೆಂದು ಹೇಳುತ್ತೇನೆ. ಈ ಬಗ್ಗೆ ವಿವಿಧ ರೀತಿಯ ಕ್ರಾಂತಿ ನಡೆದಿದೆಯೆಂದು ನಾನು ಈಗಾಗಲೇ ತಿಳಿಸಿದ್ದೇನೆ. ವ್ಯವಸಾಯದಲ್ಲಿ ನಮ್ಮ ಸರ್ಕಾರದವರು ನಾನಾ ರೀತಿಯ ಯೋಜನೆಗಳನ್ನು ಹಾಕಿಕೊಂಡು ಆಹಾರದ ಉತ್ಪತ್ತಿ ಹೆಚ್ಚಾಗುವುದಕ್ಕೆ ಪ್ರಯತ್ನಪಡುತ್ತಿದ್ದಾರೆ. ಹೈಬ್ರಿಡ್ ನಂತಹ ಕೆಲವು ಉತ್ತಮವಾದಂಥ ಬೀಜಗಳು ಕಾಲಕ್ಕೆ ಸರಿಯಾಗಿ ಸಿಗುತ್ತಿಲ್ಲ, ಮತ್ತು ಸಹಕಾರ

ಸಂಘಗಳವರು ಹುಳ ಬಿದ್ದ ತಂಂಹ ಬೀಜಗಳನ್ನು ಹಂಚುತ್ತಿದ್ದಾರೆಂದು, ಈ ಕಾರಣದಿಂದ ಬೆಳೆ ಹಾಳಾಗುತ್ತಿದೆಯೆಂದು ಕೇಳಿಬಂತು. ಈ ರೀತಿ ಕೆಲವು ಕಡೆ ಆಗಿರಬಹುದು. ಆದರೆ ವ್ಯವಸಾಯ ರಂಗದಲ್ಲಿ ನಿಜವಾಗಿಯೂ ಸಾಕಷ್ಟು ಕೆಲಸ ನಡೆಯುತ್ತಿದೆ. ನನ್ನ ಜಿಲ್ಲೆಯಾದ ರಾಯಚೂರಿನಲ್ಲಿ ಇರಿಗೇಷನ್ ಬಂದನಂತರ ಸಾಕಷ್ಟು ಪ್ರಮಾಣದಲ್ಲಿ ರೈತರಿಗೆ ವಿವಿಧ ರೀತಿಯ ಗೊಬ್ಬರಗಳನ್ನು ಕೊಟ್ಟು ಎರ್ಲಾ ರೀತಿಯ ಹೈಬ್ರಿಡ್ ಮೇಜ್, ಜೋಳ, ಸಜ್ಜೆ ಮತ್ತು ತಂಗನಿಯಾಕ ಬೆರೇಟಿಯ ಶೇಂಗಾವನ್ನು ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡುತ್ತಿದ್ದಾರೆ. ನಮ್ಮ ರೈತರು ವ್ಯವಸಾಯ ಇರಾಖೆಯವರು ಈ ರೀತಿ ಪ್ರೋತ್ಸಾಹ ಕೊಡುವುದಕ್ಕೆ ಮುಂಚೆಯೇ ಅಂದರೆ ಇದಕ್ಕೆ 3 ವರ್ಷ ಹಿಂದೆಯೇ ಐ.ಆರ್.8. ಭತ್ತವನ್ನು ಬೇರೆ ಕಡೆಯಿಂದ ತಂದು ಬೆಳೆದಿದ್ದಾರೆ. ವಿವಿಧ ರೀತಿಯ ಬೆಳೆಗಳನ್ನು ಅಧುನಿಕ ರೀತಿಯಲ್ಲಿ ಬೆಳೆಯುವುದಕ್ಕೆ ನಮ್ಮ ಕಡೆಯ ರೈತರು ಪ್ರಯತ್ನ ಮಾಡುತ್ತಿದ್ದಾರೆ. ಮತ್ತು ಹೆಚ್ಚು ಗಮನ ಕೊಡುತ್ತಿದ್ದಾರೆ ಇದರಿಂದ ಸಾಕಷ್ಟು ಉತ್ಪತ್ತಿಯೂ ಸಹ ಆಗುತ್ತಿದೆ. ಇದೇ ರೀತಿಯಾಗಿ ಮೊದಲು ರಾಗಿಯನ್ನು ಹಳೆಯ ಮೈಸೂರು ಕಡೆಯಲ್ಲಿ ಮಾತ್ರ ಬೆಳೆಯುತ್ತಿದ್ದರು. ಈಗ ನಮ್ಮ ಜಿಲ್ಲೆಯಲ್ಲೂ ಸಹ ರೈತರು ವ್ಯವಸಾಯ ಇಲಾಖೆಯವರ ಪ್ರೋತ್ಸಾಹದಿಂದ ರಾಗಿಯನ್ನು ಬೆಳೆಯಲಿಕ್ಕೆ ಪ್ರಾರಂಭ ಮಾಡಿದ್ದಾರೆ. ನಮ್ಮ ಜಿಲ್ಲೆಯಲ್ಲ ರಾಗಿಯನ್ನು ಯಾರೂ ಉಪಯೋಗ ಮಾಡುತ್ತಿಲ್ಲ. ಆದರೂ ನಮ್ಮ ಪ್ರದೇಶದಲ್ಲಿ ಇವತ್ತು ಹೆಚ್ಚು ಹೆಚ್ಚು ಬೆಳೆಯುತ್ತಿದ್ದಾರೆ. ಸರಿಯಾದ ಯೀಲ್ಡ್ ಸಿಗುತ್ತದೆ. ಇಡೀ ನಮ್ಮ ರಾಜ್ಯದಲ್ಲಿ ಬಹುಮಾನ ಪಡೆದವನೂ ನಮ್ಮ ಜಿಲ್ಲೆಯವನಾಗಿದ್ದಾನೆ. ಒಂದು ಎಕರೆಗೆ 25 ಕ್ವಿಂಟರ್ ರಾಗಿ ಬೆಳೆಸಿದ್ದಾನೆ. ಇವತ್ತು ರೈತರಿಗೆ ಬೇಕಾಗಿರತಕ್ಕಂತಹ ಅನುಕೂಲಗಳನ್ನು ವ್ಯವಸಾಯ ಇಲಾಖೆಯವರು ಕೊಟ್ಟಿದ್ದಾರೆ. ಪ್ರತಿಯೊಂದೂ ಮಾಡಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಎರ್ಲಾ ಸರಿಯಾಗಿದೆಯೆಂದು ಹೇಳುವುದಕ್ಕೂ ಆಗುವುದಿಲ್ಲ. ಕೆಲವು ದೃಷ್ಟಿಯಿಂದ ಬೇಕಾಗಿರತಕ್ಕಂತಹ ಸಹಾಯ ದೊರಕದಿರಬಹುದು. ಆದರೂ ಕೂಡ ನಮ್ಮ ರೈತರಿಗೆ ಬೇಕಾಗಿರತಕ್ಕಂತಹ ಪೆಸ್ಟಿಸೈಡ್ಸ್ ಕೊಡುತ್ತಿದ್ದಾರೆ ಮತ್ತು ಅವರು ಅದನ್ನು ಉಪಯೋಗ ಮಾಡುವುದನ್ನು ಕಲಿತಿದ್ದಾರೆ. ಇದರಿಂದ ಸಾಕಷ್ಟು ಬೆಳೆ ಬೆಳೆಯುವುದಕ್ಕೆ ಅನುಕೂಲವಾಗಿದೆ. ವ್ಯವಸಾಯ ದೃಷ್ಟಿಯಿಂದ ನಮ್ಮ ಸರ್ಕಾರದವರು ಸಾಕಷ್ಟು ಯೋಜನೆಗಳನ್ನು ಕೈಗೊಂಡಿದ್ದಾರೆ. ಇದರೊಳಗೆ ಒಂದು ವಿಚಾರ ಹೇಳುವುದಾದರೆ, ರಾಯಚೂರು ಜಿಲ್ಲೆಯೊಳಗೆ ಕಾಟನ್, ಶುಗರ್, ಮತ್ತು ಭತ್ತ ಇವು ಮೂರು ಹೆಚ್ಚು ಬೆಳೆಯತಕ್ಕ ಪ್ರದೇಶವಾಗಿವೆ. ಕಾಟನ್ ಉದ್ಯಮ ವಿಷಯದಲ್ಲಿ ಒಂದು ಮಿಲ್ ಸ್ಥಾಪನೆ ಮಾಡಬೇಕೆಂದು ಕೋ-ಆಪರೇಟಿವ್ ಸ್ಪಿನ್ನಿಂಗ್ ಮಿಲ್ ಆಗುತ್ತಿದೆ. ಈ ಸಂದರ್ಭದಲ್ಲಿ ಗಂಗಾವತಿ ತಾಲ್ಲೂಕಿನಲ್ಲಿ 16 ಸಾವಿರ ಎಕರೆ ಇರಿಗೇಟೆಡ್ ಶುಗರ್‌ಕೇನ್ ಏರಿಯಾ ಇದೆ. ಇಲ್ಲಿ ಕಬ್ಬು ಬೆಳೆಯತಕ್ಕ ರೈತರಿಗೆ ಒಂದು ಸಕ್ಕರೆ ಕಾರ್ಖಾನೆಯನ್ನು ಕೊಡದೆ ಹೋದರೆ ರೈತರಿಗೆ ಬಹಳ ಲುಕ್ಸಾನು ಆಗುತ್ತದೆ. ಈ ದೃಷ್ಟಿಯಿಂದ ರೈತರಿಗೆ ಪ್ರೋತ್ಸಾಹ ಕೊಡತಕ್ಕ ರೀತಿಯಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕು. ಹಿಂದೆ ಒಂದು ಕೊ-ಆಪರೇಟಿವ್ ಬೇಸಿನ್ ಮೇಲೆ ಕೊಡಬೇಕೆಂದು ನಿರ್ಧಾರವಾಗಿತ್ತು. ಕೊನೆಗೆ ಲೈಸೆನ್ಸ್ ಕೊಡದೆ ಪ್ರೈವೇಟ್ ಪಾರ್ಟಿಯವರಿಗೆ ಲೈಸೆನ್ಸ್ ಕೊಟ್ಟುಬಿಟ್ಟರು. ಅವರೂ ಅದನ್ನು ಮಾಡಲಿಲ್ಲ. ಮತ್ತು ಶೋ ಕಾಸ್ ನೋಟೀಸ್ ಕೊಟ್ಟು ಕ್ಯಾನ್ಸಲ್ ಮಾಡಿದ್ದಾರೆ. ಅದೇ ಲೈಸೆನ್ಸ್ ಗಾರಿಬಿದನೂರಿಗೆ ವರ್ಗ ಆಗಿದೆ. ಆದ್ದರಿಂದ ಗಂಗಾವತಿ ಭಾಗಕ್ಕೆ ಒಂದು ಸಕ್ಕರೆ ಕಾರ್ಖಾನೆ ಆಗುವುದು ಬಹಳ ಅತ್ಯಾವಶ್ಯಕವೆಂದು ನಾನು ಹೇಳಬಯಸುತ್ತೇನೆ. ಸರ್ಕಾರದವರು ಸರ್ಕಾರದ ವತಿಯಿಂದಾಗಲ, ಖಾಸಗೀ ವತಿಯಿಂದಾಗಲ ಮಾಡಿದರೆ ಅಲ್ಲಿನ ರೈತರು ಏನು ಇದ್ದಾರೆ, ಅವರಿಗೆರ್ಲಾ ಬಹಳ ಅನುಕೂಲವಾಗುತ್ತದೆ. ಇಂದು ಎಂ.ಎಸ್.ಕೆ. ಮಿಲ್ಲಿಗೆ ಎಷ್ಟೋ ಹಣವನ್ನು ಕೊಡುತ್ತಿದ್ದಾರೆ. ಅದು ಲಾಭದಾಯಕವಾಗಿ ನಡೆಯುತ್ತಾ ಇಲ್ಲ. ಅಂಥ ದುಡ್ಡನ್ನು ಇಂಥ ಕಾರ್ಖಾನೆ ಮಾಡುವುದಕ್ಕಾದರೂ ಉಪಯೋಗ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಥವಾ ಸರ್ಕಾರದವರು ಲೈಸೆನ್ಸ್ ಕೊಡುವ ಆಶ್ವಾಸನೆ ಕೊಟ್ಟರೆ ಕೊ-ಆಪರೇಟಿವ್ ಬೇಸಿಸ್‌ನಲ್ಲಿ ಆದರೂ ಮಾಡುವುದಕ್ಕೆ ನಾವು ತಯಾರಿದ್ದೇವೆ. ಅಂಥ ಒಂದು ಆಶ್ವಾಸನೆ ಮುಂದೆ ಬರಲಿ ಎಂದು ನಾನು ಆಶಿಸುತ್ತೇನೆ.

ಇನ್ನು ಈ ಟ್ರಾಕ್ಟರ್ ಲೋನು ಹಾಗೂ ಇನ್ನಿತರ ಲೋನ್‌ಗಳನ್ನು ಈ ಅಗ್ರೋ ಇಂಡಸ್ಟ್ರೀಸ್ ಮುಖಾಂತರ ಕೊಡುತ್ತಿದ್ದಾರೆ. ಇದನ್ನು ಕೊಡುವ ಕಾಲಕ್ಕೆ ಒಂದು ಅಗ್ರಿಮೆಂಟ್ ಬರೆಸಿಕೊಳ್ಳುತ್ತಾರೆ. ಪ್ರತಿ ಸಾವಿರಕ್ಕೆ 22ವರೆ ರೂಪಾಯಿ ಸ್ಟ್ಯಾಂಪ್ ಕೊಡಬೇಕಾಗುತ್ತದೆ. ಇದರಲ್ಲ ಸಾಧಾರಣ 30–40 ಸಾವಿರ ರೂಪಾಯಿ ಸಾಲ ರೈತನು ತೆಗೆದುಕೊಳ್ಳುವಾಗ ಎಷ್ಟು ಸ್ಟ್ಯಾಂಪ್ ಡ್ಯೂಟಿ ಕೊಡಬೇಕಾಗುತ್ತದೆ ಎಂಬುದನ್ನು ಗಮನಿಸಬೇಕು. ಆದ್ದರಿಂದ ರೈತನ ಹಿತದೃಷ್ಟಿಯಿಂದ ಈ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಶನ್ ಮುಖಾಂತರ ಕೊಡತಕ್ಕ ಸಾಲಗಳಿಗೆ ಸ್ಟ್ಯಾಂಪ್ ಡ್ಯೂಟಿ ಎನಾಯಿತಿ ಮಾಡಬೇಕು ಮತ್ತು ಅದಕ್ಕೆ ಬೇಕಾಗಿರತಕ್ಕ ನೋಟಿಫಿಕೇಶನನ್ನು ಸರ್ಕಾರದವರು

(ಶ್ರೀ ವಿಶ್ವನಾಥಸ್ವಾಮಿ)

ಹೊರಡಿಸಬೇಕೆಂದೂ ಮತ್ತು ಅದಕ್ಕೆ ಸರ್ಕಾರದವರು ತೀವ್ರ ಗಮನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಎರೆಕ್ಟೈಸಿಟಿ ವಿಚಾರದಲ್ಲಿ ನಮ್ಮ ಹಲವಾರು ಸದಸ್ಯರು ಮಾತನಾಡಿದ್ದಾರೆ. ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಇವತ್ತು ಪ್ರತಿಯೊಂದು ಗ್ರಾಮದಲ್ಲೂ ಮತ್ತು ಪಟ್ಟಣದಲ್ಲೂ ಇದಕ್ಕೆ ಡಿಮ್ಯಾಂಡ್ ಬರುತ್ತಿದೆ. ಪಂಪ್‌ಸೆಟ್ಟುಗಳಿಗೆ ಕೋಟಿಗಟ್ಟಲೆ ರೂಪಾಯಿ ಕೊಡುವುದಕ್ಕೆ ಯೋಜನೆ ಹಾಕಿಕೊಂಡಿದ್ದೀರಿ. ಆದರೆ ಒಂದು ಎಚ್.ಪಿ. ಎರೆಕ್ಟೈಸಿಟಿ ಒದಗಿಸ ಬೇಕಾದರೆ ಒಂದು ಸಾವಿರ ರೂಪಾಯಿ ಪಾಲಂಟರಿ ಸಾಲ ಸರ್ಕಾರಕ್ಕೆ ಕೊಡಬೇಕೆಂದು, ಇಲ್ಲದಿದ್ದರೆ ಎರೆಕ್ಟೈಸಿಟಿ ಒದಗಿಸುವುದಕ್ಕೆ ಸಾಧ್ಯವಿಲ್ಲವೆಂದು, ಹೇಳುವುದರಿಂದ, ರೈತರಿಗೆ ಬಹಳ ಹಾನಿಯಾಗುತ್ತದೆ. ಈ ರೀತಿ ಕೇಳತಕ್ಕದ್ದು ಸರಿಯೆಲ್ಲ. ಇದನ್ನು ಯಾವ ರೈತನಿಗೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇದನ್ನು ಸರ್ಕಾರದವರು ಸಡಿಲ ಮಾಡಿ ಕೊಡಬೇಕು. ಪರತು ತೆಗೆದು ಹಾಕಿ, ಈಗ ಯಾವ ರೀತಿ ಇದೆಯೋ, ಅದೇ ರೀತಿಯಲ್ಲಿ ಒದಗಿಸಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಇನ್ನು ಉದ್ಯಮದ ವಿಚಾರ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಯಾವ ಯಾವ ಭಾಗದಲ್ಲಿ ಯಾವ ಯಾವ ಕಚ್ಚಾ ಮಾಲುಗಳು ಸಿಗುತ್ತವೆ, ಆ ಭಾಗಗಳಲ್ಲಿ ಉದ್ಯಮುಗಳನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ತೀವ್ರವಾಗಿ ಒಂದು ಸರ್ವೆಯನ್ನು ಮಾಡಬೇಕು. ಎಷ್ಟೋ ಭಾಗ ಗಳಲ್ಲಿ ಉದ್ಯಮ ಸ್ಥಾಪನೆಯಾಗಬೇಕು ಎಂದು ಇದ್ದರೂ ಕೂಡ ಸರಿಯಾದ ಮಾರ್ಗದರ್ಶನ ಇಲ್ಲದೆ ಉದ್ಯಮ ಬರುತ್ತಾ ಇಲ್ಲ. ಅದಕ್ಕಾಗಿ ಸರ್ಕಾರದವರು ಒಂದು ಸರ್ವೆ ಮಾಡಿಸಿ, ಯಾವುದು ಹೆಚ್ಚು ಅಭಿವೃದ್ಧಿ ಆಗುತ್ತದೆ, ಯಾವುದು ಮಾಡುವುದಕ್ಕೆ ಸಾಧ್ಯವಿದೆ ಎಂಬುದು ನೋಡಿ, ಈ ಒಂದು ಉದ್ಯಮದ ಬೆಳವಣಿಗೆಗೆ ಸರ್ಕಾರದವರು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಉದ್ಯಮ ಸ್ಥಾಪನೆ ಮಾಡುವ ವಿಚಾರದಲ್ಲಿ ನಮ್ಮ ಗಂಗಾವತಿ ಭತ್ತ ಬೆಳೆಯತಕ್ಕ ಪ್ರದೇಶ. ಅಲ್ಲ ಭತ್ತವನು ಮಿರ್ ಮಾಡುತ್ತಾರೆ. ಅನಂತರ ಅದರಿಂದ ಹಸ್ಕ್ ಏನು ಇದೆ, ಅದು ಬರುತ್ತದೆ. ಅದನ್ನು ಉಪಯೋಗ ಮಾಡುವುದು ಅಗತ್ಯ. ಆದ್ದರಿಂದ ಕೆಲವು ಕೈಗಾರಿಕೆಗಳಿಂದ ಮಾಹಿತಿಯನ್ನು ತೆಗೆದುಕೊಂಡು, ಅದರಿಂದ ಏನಾದರೂ ಬೇರೆ ಸಾಧನವನ್ನು ತಯಾರು ಮಾಡುವುದಕ್ಕೆ ಸಾಧ್ಯವೇ ಎಂಬುದು ಸರ್ಕಾರದವರು ನೋಡಬೇಕು. ಎಲ್ಲ ಕೇಳಿದರೂ ಅದಕ್ಕೆ ಸರಿಯಾದ ಮಾಹಿತಿ ದೊರಕುತ್ತಾ ಇಲ್ಲ. ನಮ್ಮಲ್ಲಿ ಈ ಹಸ್ಕ್ ಬೇಕಾದಷ್ಟು ಬಿದ್ದಿರುತ್ತವೆ. ಅದನ್ನು ಸುಟ್ಟು ಬಿಡುತ್ತಾರೆ. ಈ ಹಸ್ಕನ್ನು ಉಪಯೋಗ ಮಾಡದಿದ್ದರೆ, ಈ ರೈಸ್ ಮಿಲ್ ಕೂಡ ಒಂದು ನ್ಯೂಸೆನ್ಸ್ ಆಗಬಹುದು. ಏಕೆಂದರೆ, ಅಲ್ಲ 10-12 ರೈಸ್ ಮಿಲ್ಲುಗಳಿರುತ್ತವೆ. ಪ್ರತಿಯೊಂದು ಮಿಲ್ಲಿನಲ್ಲೂ ಹೊರಗಟ್ಟರೆ ಬಿದ್ದಿರುತ್ತವೆ. ಅದನ್ನು ಸುಟ್ಟು ಬಿಟ್ಟರೂ ಅದು ಗಾಳಿಗೆ ಊರೆಲ್ಲಾ ಹರಡಿ ಅದರಿಂದ ಜನರ ಆರೋಗ್ಯಕ್ಕೂ ಕೂಡ ಹಾನಿ ಇದೆ. ಆದ್ದರಿಂದ ಸರ್ಕಾರದವರು ಈ ವಿಚಾರದಲ್ಲಿ ಒಂದು ಸೂಕ್ತವಾದ ಮಾರ್ಗವನ್ನು ಕಂಡು ಹಿಡಿದು ಅದನ್ನು ಉಪಯೋಗ ಮಾಡಿ ಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಂಡು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. DEPUTY CHAIRMAN.— The House will now adjourn and meet at 9-00 A.M. on 16th March 1968.

The House adjourned at Six of the Clock to meet again at Nine of the Clock on Saturday, the 16th March 1968.

WD 10665—GPB -600—19-8-1968

MYSORE LEGISLATIVE COUNCIL

Saturday, 16th March 1968.

The House met in the Council Chamber, Vidhana Soudha, Bangalore, at Nine of the Clock.

MR. CHAIRMAN (SRI S. C. EDKE) in the Chair.

STARRED QUESTIONS

(to which oral answers were given)

Mr. CHAIRMAN.—The hon'ble Member is absent to put Question No. 87. The question lapses. Next Question.

Tour of Ministers and Deputy Ministers

88.- Sri G. V. ANJANAPPA (Graduates' Constituency).—

Will the Chief Minister be pleased to state:—

(*a*) the number of trips made outside the State by the Ministers and the Deputy Ministers during 1967;

(*b*) the object of their trips;

(*c*) the amount spent by Government on such trips (Minister-wise details should be furnished)?

A.—Sri S. NIJALINGAPPA (Chief Minister).—

(*a*), (*b*) and (*c*) *Vide* Statement appended.

(SRI S. NIJALINGAPPA)

STATEMENT

Sl. No.	Minister/Deputy Minister	No. of trips	Amount spent	Object
1	2	3	4	5
			Rs.	
1	Chief Minister ...	22	18,860-70	Official
2	Minister for Transport and Tourism ...	5	3,477-90	Official
3	Minister for Law ...	1	1,134-80	Official
4	Minister for Food and Civil Supplies ...	3	2,100-84	Official
5	Minister for Home ...	1	202-11	Official
6	Minister for Municipal Administration ...	4	2,360-52	Official
7	Minister for Public Works ...	10	9,630-66	Official
8	Minister for Revenue and Forests ...	3	1,352-55	Official
9	Minister for Finance and Planning ...	13	12,537-12	Official
10	Minister for Health and Housing ...	3	3,003-30	Official
11	Minister for Animal Husbandry and Fisheries ...	8	25,942-15	Official
12	Minister for Social Welfare ...	2	1,652-00	Official
13	Minister for Education ...	1	864-00	Official
14	Minister for Development and Co-operation ...	1	1,018-00	Official
15	Deputy Minister for Finance ...	7	3,955-60	Official
16	Deputy Minister for Minor Irrigation ...	Nil	Nil	Nil
17	Deputy Minister for Sericulture	2	2,073-88	Official
18	Deputy Minister for Revenue ...	2	990-50	Official
19	Deputy Minister for Transport and Tourism ...	Nil	Nil	Nil
20	Deputy Minister for Industries ...	6	4,170-55	Official
21	Deputy Minister for Animal Husbandry and Fisheries ...	1	1,135-20	Official
22	Deputy Minister for Agriculture	1	813-00	Official

ಶ್ರೀ ಜಿ. ವಿ. ಅಂಜನಪ್ಪ.—67ನೇ ಇಸವಿಯಲ್ಲಿ ಈ ದೇಶದ ಹೊರಗಡೆ ಮಂತ್ರಿಗಳು ಪ್ರವಾಸ ಹೋಗಿದ್ದು ಯಾವ ಯಾವ ಕಾರಣಗಳಿಗಾಗಿ ಎನ್ನುವ ವಿವರಗಳನ್ನು ಕೊಡುವುದಕ್ಕಾಗುತ್ತದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಯಾವ ಕೆಲಸಗಳಿಗೆ ಹೋಗಿದ್ದರು ಎನ್ನುವುದನ್ನು ಬೇಕಾದರೆ ಕೊಡಬಹುದು.

ಶ್ರೀ ಜಿ. ವಿ. ಅಂಜನಪ್ಪ.—ನನ್ನ ಉದ್ದೇಶ ಪ್ರಶ್ನೆ ಕೇಳುವುದಕ್ಕೆ, ಯಾವ ಯಾವ ನರಕಾರದ ಕೆಲಸಗಳಿಗಾಗಿ ದೇಶದಿಂದ ಹೊರಕ್ಕೆ ಮಂತ್ರಿಗಳು ಪ್ರವಾಸ ಹೋಗಿದ್ದರು ಎನ್ನುವುದರ ವಿವರಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಯೆ ?

ಶ್ರೀ ಎಸ್. ನಿಜಲಿಂಗಪ್ಪ.—ಅವಶ್ಯವಿದ್ದರೆ ಕೊಡಬಹುದು. ಇದು ಬಹಳ ಉದ್ದವಾಗಿರುವ ಪಟ್ಟಿ ಮಾನ್ಯ ಸದಸ್ಯರಿಗೆ ಬೇಕಾದರೆ ವಿವರಗಳನ್ನು ಒದಗಿಸಿಕೊಡುತ್ತೇನೆ.

ಶ್ರೀ ಜಿ. ವಿ. ಅಂಜನಪ್ಪ.—ಮೈಸೂರು ದೇಶದಿಂದ ಹೊರಗಡೆಗೆ ಪ್ರವಾಸ ಹೋದ ಉದ್ದೇಶವೇನು ? ಪರದೇಶಗಳಿಂದ ಹೋಗಿ ಬಂದುದಕ್ಕೆ ನಮ್ಮ ದೇಶಕ್ಕೆ ಆಗಿರುವ ರಾಭಗಳೇನು ?

ಶ್ರೀ ಎಸ್. ನಿಜಲಿಂಗಪ್ಪ.—ಪರದೇಶಗಳಿಗೆ ಹೋದ ಮಂತ್ರಿಗಳಲ್ಲೂ ಒಂದು ಈ ಪಟ್ಟಿಯಲ್ಲಿದೆ. ಅದು ಅನಿಮರ್ ಹಸ್‌ಬೆಂಡ್ರಿ ಮಂತ್ರಿಗಳದ್ದು. ಅವರನ್ನು ಪರದೇಶಗಳವರು ಇಲ್ಲಿಗೆ ಬಂದಾಗ ಕರೆದಿದ್ದರು. ಆ ಆಹ್ವಾನದ ಮೇಲೆ ಅವರು ಹೊರದೇಶಗಳಿಗೆ ಪ್ರವಾಸ ಹೋಗಿ ಬಂದರು. ಇಲ್ಲಿರುವ ಅನಿಮರ್ ಹಸ್‌ಬೆಂಡ್ರಿ ಇಲಾಖೆ ಚೆನ್ನಾಗಿ ಕೆಲಸ ಮಾಡುತ್ತಿದೆ. ನಮ್ಮ ದೇಶಗಳಲ್ಲಿರುವ ಪದ್ಧತಿಗಳನ್ನು ನೋಡಿಕೊಂಡು ಬಂದರೆ ಇನ್ನೂ ಹೆಚ್ಚು ಪ್ರಯೋಜನವಾಗುತ್ತದೆ, ಎಂದು ಇವರನ್ನು ಕರೆದದ್ದರಿಂದ ಅವರು ಪ್ರವಾಸ ಹೋಗಿದ್ದರು. ಹಾಗೆ ಅವರು ಕರೆದಾಗ ಅವರಿಗೆ ಹೋಗತಕ್ಕ ಖರ್ಚು ಮತ್ತು ಬರತಕ್ಕ ಖರ್ಚು ಪರದೇಶಗಳವರ ಮೇಲೆ ಹಾಕಕೂಡದು ಎನ್ನುವುದು ಒಂದು ತತ್ವ, ಅದರಂತೆ ಅವರ ಖರ್ಚನ್ನು ನಾವೇ ವಹಿಸಿಕೊಂಡಿದ್ದೇವೆ.

ಶ್ರೀ ಜಿ. ವಿ. ಅಂಜನಪ್ಪ.—ಮಂತ್ರಿಗಳು ವರ್ಷದಲ್ಲಿ ಪ್ರವಾಸ ಮಾಡುವಾಗ ಇಷ್ಟೇ ಟಿ.ಎ. ಹಾಗೂ ಡಿ.ಎ. ತೆಗೆದುಕೊಳ್ಳಬೇಕೆಂದು ನಿಗದಿಯಾಗಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ನಿಗದಿಯಾಗಿಲ್ಲ. ಹಾಗೆ ನಿಗದಿ ಮಾಡತಕ್ಕದ್ದು ಒಳ್ಳೆಯದಲ್ಲ.

ಶ್ರೀ ಗಾಂಜಿ ವೀರಪ್ಪ.—ಮಂತ್ರಿಗಳು ಪರದೇಶಕ್ಕೆ ಹೋಗಿ ಅಲ್ಲಿನ ಅಭಿವೃದ್ಧಿ ಕೆಲಸಗಳು ಹೇಗೆ ಆಗಿವೆ ಎನ್ನುವುದನ್ನು ನೋಡಿ ನಮ್ಮ ದೇಶದಲ್ಲೂ ಅದೇ ರೀತಿ ಅಭಿವೃದ್ಧಿ ಮಾಡಲು ತಕ್ಕ ಕ್ರಮಗಳನ್ನು ಮಾಡಬಹುದು. ಇದರಿಂದ ಪರದೇಶಗಳಿಗೆ ಮಂತ್ರಿಗಳು ಪ್ರವಾಸ ಹೋಗುವುದು ಅವಶ್ಯಕವಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಅತ್ಯಂತ ಅವಶ್ಯಕ.

Lift Irrigation in Challakere Taluk

89. Sri G. V. ANJANAPPA (Graduates' Constituency).—

Will the Minister for Public Works be pleased to state :—

(*a*) the number of Lift Irrigation projects sanctioned in Challakere taluk ;

(*b*) when they were sanctioned ;

(*c*) the estimated amount of each scheme ;

(*d*) the area that is going to be brought under cultivation ;

(*e*) if they are delayed, the reasons thereof ?

A.—Sri VEERENDRA PATIL (Minister for Public Works) [On behalf of SRI ALUR HANUMANTHAPPA (Deputy Minister for Minor Irrigation)].—

(*a*) Nil.

(*b*), (*c*), (*d*) and (*e*) Does not arise in view of reply to clause (*a*).

ಶ್ರೀ ಜಿ. ವಿ. ಆಂಜನಪ್ಪ.—ಹಿಂದೆ ಒಂದು ಸಾರಿ ಚಳ್ಳಕೆರೆ ತಾಲ್ಲೂಕಿನಲ್ಲಿ ನಾಲ್ಕೈದು ಲಫ್ಟ್ ಇರಿಗೇಷನ್ ಕೆಲಸಗಳು ಮಂಜೂರಾಗಿದ್ದವು ಎಂದು ಹೇಳಿದ್ದೀರಿ. ಇಂದು ಉತ್ತರ ಕೊಡುವಾಗ ಯಾವುದೂ ಇಲ್ಲ ಎನ್ನುವುದಕ್ಕೆ ಕಾರಣವೇನು ?

† ಶ್ರೀ ವೀರೇಂದ್ರ ಪಾಟೀರ್.—ಈ ತಾಲ್ಲೂಕಲ್ಲಿ ಮೊದಲಿಗೆ ಆರು ಕೆಲಸಗಳನ್ನು ಸ್ಯಾಂಕ್ಷನ್ ಮಾಡಲಾಗಿತ್ತು. ಇದರಲ್ಲಿ ಕೆಲವು ಸ್ಕೀಂಗಳು ಮಾಡುವಾಗ ಬೇರ್ಯಾಳ್ ಹಾಗೂ ನಾರಾಯಣಪುರ ಕಟ್ಟೆಬಳಿ ವಾಟರ್ ಸ್ಪೆಡ್ ಏರಿಯಾದಲ್ಲಿ ಇಂಟರ್ ಸ್ಟೇಟ್ ಟ್ರಬರ್ ಬರುತ್ತೆ ಎಂದು ಅವುಗಳನ್ನು ಮಾಡಲಲ್ಲ.

ಶ್ರೀ ಜಿ. ವಿ. ಆಂಜನಪ್ಪ.—ಹಿಂದೆ ಬನವಾಪುರ, ಮೈಲನಹಳ್ಳಿ ಹಾಗೂ ಇನ್ನೆರಡು ಗ್ರಾಮಗಳಲ್ಲಿ ಲಫ್ಟ್ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಇತ್ತು. ಆದರೆ ಈಗ ಯಾವುದೂ ಇಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಇಲ್ಲಿ ಯಾವುದನ್ನಾದರೂ ತೆಗೆದುಕೊಳ್ಳುತ್ತಾರೋ ಇಲ್ಲವೋ ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀರ್.—ಲಫ್ಟ್ ಇರಿಗೇಷನ್ ಸ್ಕೀಂಗಳಾಗಿ ಆರನ್ನು ಇಲ್ಲಿ ತೆಗೆದುಕೊಳ್ಳಬೇಕೆಂದು ಇತ್ತು. ಇಲ್ಲಿ ಇಂಟರ್ ಸ್ಟೇಟ್ ಕಷ್ಟಗಳು ಬರಬಹುದು, ಇದಕ್ಕೆ ಬದಲು ರೆಸ್ಟೊರೇಷನ್ ಆಫ್ ನನ್ನಿಹಾಳ್ ಟ್ಯಾಂಕ್, ರೆಸ್ಟೊರೇಷನ್ ಆಫ್ ಬೇರನಹಳ್ಳಿ ಟ್ಯಾಂಕ್ ಮತ್ತು ಮುಂದನವಾಗಪ್ಪನ ಕಟ್ಟೆ ಇವುಗಳನ್ನು ಮಾಡಲು ನುಮಾರು ಒಂದು ಲಕ್ಷ ರೂಪಾಯಿಗಳಾಗುವಷ್ಟು ಕೆಲಸಗಳು ಲಫ್ಟ್ ಇರಿಗೇಷನ್‌ಗೆ ಬದಲಾಗಿ ತೆಗೆದುಕೊಳ್ಳಬಹುದೇ ಎನ್ನುವುದನ್ನು ವಿಚಾರ ಮಾಡುತ್ತಿದ್ದೆವು. ತೆಗೆದು ಕೊಳ್ಳುವಾಗ ವಾಟರ್ ಸ್ಪೆಡ್ ಏರಿಯಾ ಹತ್ತಿರ ಇಂಟರು ಸ್ಟೇಟ್ ಟ್ರಬರ್ಸ್ ಇದರಲ್ಲಿ ಬರುವುದರಿಂದ ಇದನ್ನು ಕೈಬಿಡರಾಯಿತು.

Sri V. SRINIVASA SHETTY.—Is there any possibility of taking up any work by way of lift irrigation in this district ?

Sri VEERENDRA PATIL.—Wherever possible and wherever there is potential for lift irrigation, we shall certainly take up.

Sri V. SRINIVASA SHETTY.—Have your Department investigated the possibility of taking up any lift irrigation in this district ?

Sri VEERENDRA PATIL.—We have got an Investigation Division with separate staff for that purpose. They are investigating. I do not have the list which has been, investigated by them. I will get that list and if I find that any lift irrigation is possible in that area, I will certainly try to have them included.

ಶ್ರೀ ಜಿ. ವಿ. ಆಂಜನಪ್ಪ.—ಹಿಂದೆ ಬನವಾಪಟ್ಟಣದ ಬಳಿ ಇರುವ ವೇದಾವತಿ ನದಿಗೆ ಮೇಲನ ಹಳ್ಳಿ ಹತ್ತಿರ ಒಂದು ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಲಫ್ಟ್ ಇರಿಗೇಷನ್‌ಗಾಗಿ ಅಂದಾಜುಗಳನ್ನು ತಯಾರು ಮಾಡಿದ್ದರು ಮತ್ತು ಆಗಲೇ ಮಂಜೂರು ಆಗಿದ್ದವು. ಈಗ ಯಾವುದೂ ಇಲ್ಲ ಎಂದರೆ ಇಲ್ಲಿ ಲಫ್ಟ್ ಇರಿಗೇಷನ್ ಕೆಲಸಗಳನ್ನು ಮಾಡಲು ಅಸಾಧ್ಯವೇ ಹೇಗೆ ?

ಶ್ರೀ ವೀರೇಂದ್ರ ಪಾಟೀರ್.—ಹಿಂದೆ ಮಂಜೂರು ಮಾಡಿತ್ತು. ಬನವಾಪಟ್ಟಣ ಹಾಗೂ ಬಾದಿಹಳ್ಳಿದ ಬಳಿ ಮಾಡಬೇಕೆಂದು ಇತ್ತು. ಇದನ್ನು ಎಕ್ಸಿಕ್ಯೂಟ್ ಮಾಡುವಾಗ ಬೈರಾಪುರದ ಬಳಿ ಇಂಟರ್ ಸ್ಟೇಟ್ ಏರಿಯಾ ಬರುತ್ತೆ ಎನ್ನುವ ಕಾರಣಗಳಿಂದಾಗಿ ಇದನ್ನು ಕೈಬಿಡರಾಯಿತು.

†Indicates that remarks or speeches have not been revised by the member concerned.

ಶ್ರೀ ಗಾಂಜಿ ವೀರಪ್ಪ.—ನದಿಗಳಿಂದ ನೀರನ್ನು ತೆಗೆದುಕೊಳ್ಳುವಾಗ ಈಚೆಗೆ ಎಲೆಕ್ಟ್ರಿಸಿಟಿ ಬೋರ್ಡಿನವರು ಹೆಚ್ಚು ಡಿಪಾಸಿಟ್ಟುಗಳನ್ನು ಕೊಡಬೇಕೆಂದು ಕೇಳುತ್ತಿರುವುದರಿಂದ ಕಷ್ಟವಾಗುತ್ತಿದೆ. ಇಂತಹ ಕಷ್ಟಗಳು ಎಲ್ಲೆಲ್ಲಿವೆ ಅವುಗಳನ್ನು ನಿವಾರಣೆ ಮಾಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇರಿಗೇಷನ್ ನಲುವಾಗಿ ಒಂದು ಅಶ್ವಶಕ್ತಿವಿದ್ಯುಚ್ಛಕ್ತಿಗೆ ತೆಗೆದುಕೊಳ್ಳುವಾಗ ಒಂದು ಸಾವಿರ ಕೊಡಬೇಕೆಂದು ಇದೆ. ಇದನ್ನು ಪ್ರಾಯೋಗಿಕವಾಗಿ ಮಾಡುತ್ತಿದ್ದೇವೆ. ಇದರಲ್ಲಿ ಏನಾದರೂ ಕಷ್ಟಗಳು ಬಂದರೆ ಆಗಂಡೆ ಅದನ್ನು ನಿವಾರಣೆ ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ವಿ. ಆಂಜನಪ್ಪ.—ಲಿಫ್ಟ್ ಇರಿಗೇಷನ್ ಮುಖಾಂತರ ನೀರು ತೆಗೆದುಕೊಳ್ಳಬೇಕು ಎಂದು ಒಪ್ಪಂದದಲ್ಲಿ ಅಡಕವಾಗಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಒಪ್ಪಂದವನ್ನು ನೋಡಬೇಕು.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಈ ಲಿಫ್ಟ್ ಇರಿಗೇಷನ್ನಿಗೆ ಬೇಕಾಗುವಂಥ ಮೆಷಿನರಿ ಆಕ್ಸೆಸರೀಸ್, ಸ್ಪೇರ್ ಪಾರ್ಟ್ಸ್ ಸಾಕಷ್ಟು ಪ್ರಮಾಣದಲ್ಲಿ ಒದಗಿಸಲಾಗುತ್ತಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಈ ಯೋಜನೆಗೆ ಏನೇನು ಬೇಕು ಎನ್ನುವುದಕ್ಕೆ ಇಂಜಿನಿಯರುಗಳು ಡಿಸೈನ್ ಮಾಡುತ್ತಾರೆ. ಅದಕ್ಕೆ ಬೇಕಾಗುವ ಸಾಮಾನುಗಳನ್ನು ತರಿಸಿದರೆ ಕಲ್ರ್ಯಾಕ್ಟರ್ ಕಂಪನಿ ನರಬರಾಜು ಮಾಡುತ್ತಾರೆ.

Mr. CHAIRMAN.—Question Nos. 90, 91 and 92 are held over. We shall go to the next question.

Implementation of Second Interim Report

93. Sri M. V. VENKATAPPA (Graduates' Constituency).—

Will the Minister for Finance, Planning and Commerce and Industries be pleased to state :—

(*a*) whether the Government has considered the suggestion submitted by the Pay Commission with regard to resources for the implementation of the second interim report ;

(*b*) the action taken by the Government to implement the Second Interim Report ?

A.— Sri RAMAKRISHNA HEGDE (Minister for Finance, Planning and Commerce and Industries).—

(*a*) No suggestion has been made by the Pay Commission with regard to resources in the second interim report.

(*b*) Reference is invited to pages 40 to 43 of the Budget Speech delivered by the Finance Minister.

ಶ್ರೀ ಎಂ. ವಿ. ವೆಂಕಟಪ್ಪ.—ಸರಕಾರಿ ನೌಕರರಿಗೆ ಕೊಟ್ಟಿರುವ ತುಟ್ಟಿ ಭತ್ಯವನ್ನು ಬೇರೆ ರೂಪದಲ್ಲಿ ಕೊಡದೆ ನಗದು ಕೊಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಸಂಪೂರ್ಣವಾಗಿ ನಗದು ಆಗಿ ಕೊಟ್ಟರೆ, ನಾನು ಈ ಮೊದಲೇ ಹೇಳಿದ ಹಾಗೆ ಎರಡು ತರಹದ ತೊಂದರೆ ಉಂಟಾಗುತ್ತದೆ. ಮೊದಲನೆಯದಾಗಿ ಸರಕಾರದ ಹಣ ಹೊರಗಡೆ ಹೋಗುತ್ತದೆ ಹಾಗು ಎರಡನೆಯದಾಗಿ ಸಂಪೂರ್ಣವಾಗಿ ಲಾಭ ಸರಕಾರಿ ನೌಕರರಿಗೆ ಸಿಕ್ಕುವುದಿಲ್ಲ. ಇದರಿಂದ ಧಾರಣೆ ಹೆಚ್ಚಾಗುತ್ತವೆ.

ಶ್ರೀ ಎಂ. ವಿ. ವೆಂಕಟಪ್ಪ.—90 ರೂಪಾಯಿಗಿಂತ ಕಡಿಮೆ ಇರುವ ವೇತನ ಶ್ರೇಣಿಯವರಿಗೆ ತುಟ್ಟಿಭತ್ಯ ಹೆಚ್ಚಳ 12 ರೂಪಾಯಿ ಮತ್ತು 90–109 ವರೆಗಿನ ಸಂಬಳದವರಿಗೆ 10 ರೂಪಾಯಿ ನಗದು ರೂಪದ ಹೆಚ್ಚಳ ಮಾಡಿರುವುದರಿಂದ ತಾರತಮ್ಯ ಮಾಡುವುದಕ್ಕೆ ಕಾರಣವೇನು ?

ಶ್ರೀ ರಾಮಕೃಷ್ಣ ಹೆಗಡೆ.—ಇದನ್ನು ಕೊಚ್ಚಿರತಕ್ಕಂಥಾದ್ದು ಪೇ ಕಮಿಷನ್ ಶಿಫಾರಸುಗಳ ಆಧಾರದ ಮೇರೆ.

ಶ್ರೀ ಎಂ. ವಿ. ವೆಂಕಟಪ್ಪ.—1-11-1967 ರಿಂದ ಹೆಚ್ಚಿನ ತುಟ್ಟಿಭತ್ಯ ಕೊಡಬೇಕು ಎಂದು ಪೇ ಕಮಿಷನ್ ಶಿಫಾರಸು ಮಾಡಿದ್ದಾರೆ ಅಲ್ಲವೇ ? 1-3-1968 ರಿಂದ ಕೊಡಬೇಕು ಎಂದು ಮಾಡಿರುವುದಕ್ಕೆ ಕಾರಣ ಏನು ?

ಶ್ರೀ ರಾಮಕೃಷ್ಣ ಹೆಗಡೆ.—ಆ ರೀತಿ ಕೊಡುವುದಕ್ಕೆ ಸರಕಾರಕ್ಕೆ ಸಾಧ್ಯವಾಗಲಿಲ್ಲ.

ಶ್ರೀ ಎಂ. ವಿ. ವೆಂಕಟಪ್ಪ.—ಕೇಂದ್ರ ಸರಕಾರದವರು ಹೆಚ್ಚಿನ ತುಟ್ಟಿ ಭತ್ಯ ಕೊಡುವ ಲಿಮಿಟ್ಟನ್ನು 500 ರೂಪಾಯಿ ಸಂಬಳದ ವರೆಗೆ ಇಟ್ಟಿದ್ದಾರೆ. ಇಲ್ಲಿ 450 ರೂಪಾಯಿ ವರೆಗೆ ಲಿಮಿಟ್ಟು ಇದೆ. 500 ರೂಪಾಯಿ ಸಂಬಳದವರೆಗೆ ತುಟ್ಟಿ ಭತ್ಯ ಕೊಡುವುದಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಪೇ ಕಮೀಷನ್ ಶಿಫಾರಸುಗಳನ್ನು ನಾವು ಅವಲಂಬಿಸಿರುತ್ತೇವೆ.

ಶ್ರೀ ಎಂ. ವಿ. ವೆಂಕಟಪ್ಪ.—City Compensatory allowance ಕೊಡುವುದನ್ನು ಇದರಲ್ಲಿ ನಮೂದು ಮಾಡಿಲ್ಲ. ಮದ್ರಾಸ್ ಸಿಟಿಯಲ್ಲಿ ಕನ್‌ಸಿಡರ್ ಮಾಡಿದ ಹಾಗೆ ಬೆಂಗಳೂರು ಕೂಡ ದೊಡ್ಡ ಪಟ್ಟಣ ಎಂದು ಅನೌನ್ಸ್ ಮಾಡಿ ಬೆಂಗಳೂರಿನಲ್ಲಿ ಇದು ಬಿ-2 ಪಟ್ಟಣ ಎಂದು ಇಲ್ಲಿಯೂ ಸಿಟಿ ಕಾಂಪೆನ್‌ಸೇಟರಿ ಅಲೋಯನ್ಸ್ ಕೊಡುವುದಕ್ಕಾಗುವುದಿಲ್ಲವೆ ?

ಶ್ರೀ ರಾಮಕೃಷ್ಣ ಹೆಗಡೆ.—ಇದು ಪೇ ಕಮಿಷನ್ ಶಿಫಾರಸುಗಳನ್ನು ಅವಲಂಬಿಸಿರುತ್ತದೆ.

ಶ್ರೀ ಎಂ. ವಿ. ವೆಂಕಟಪ್ಪ.—ಈ ಹೆಚ್ಚು ಮಾಡಿದ ತುಟ್ಟಿ ಭತ್ಯ ಮಾರ್ಚ್ ತಿಂಗಳ ಸಂಬಳದಲ್ಲಿ ಸೇರಿಸುವುದಕ್ಕೆ ಇನ್ನೂ ವರೆಗೆ ಸರ್ಕಾರಿ ಆಜ್ಞೆ ಹೊರಟಿಲ್ಲ. ಅದಕ್ಕೆ ಕೊಡರೇ ಏರ್ಪಾಡು ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಮಾರ್ಚ್ ಒಂದನೇ ತಾರೀಖಿನಿಂದ ಇದು ಅನ್ವಯಿಸುತ್ತದೆ ಎಂದು. ಆ ರೀತಿ ತುಟ್ಟಿ ಭತ್ಯ ಸಿಕ್ಕುತ್ತದೆ.

Supply of Power to Irrigation Pumpsets

94. **Sri C. BANDI GOWDA** (Teachers' Constituency).—

Will the Minister for Public Works be pleased to state :—

(*a*) the Number of Irrigation Pumpsets for which power has been supplied so far during the current financial year;

(*b*) what was the target ?

A.—**Sri VEERENDRA PATIL** (Minister for Public Works).—

(*a*) 9,897 (to end of December 1967).

(*b*) 12,(00.

ಶ್ರೀ ಸಿ. ಬಂದೀಗೌಡ.—ಮಂಡ್ಯ ಜಿಲ್ಲೆಯಲ್ಲಿ ಎಷ್ಟು ನೀರಾವರಿ ಪಂಪ್ ಸೆಟ್ಟುಗಳಿಗೆ ಪವರ್ ಕೊಟ್ಟಿದ್ದೀರಿ ?

† ಶ್ರೀ ವೀರೇಂದ್ರ ಪಾಟೀರ್.—ಮಂಡ್ಯ ಜಿಲ್ಲೆಗೆ 811.

ಶ್ರೀ ಸಿ. ಬಂದೀಗೌಡ.—ಎಷ್ಟು ಪಂಪ್ ಸೆಟ್ಟುಗಳಿಗೆ ಪವರ್ ಕೊಡಬೇಕು ಎಂದು ಏರ್ಪಾಡು ಇದೆ ?

ಶ್ರೀ ವೀರೇಂದ್ರ ಪಾಟೀರ್.—ಬಹುಶಃ ಅಷ್ಟೇ ಇರುತ್ತದೆ. ಇಲ್ಲಿರುವ ಅಂಕಿ ಸಂಖ್ಯೆಗಳ ಪ್ರಕಾರ ದಿನೆಂಬರ್ 1967 ರ ಕೊನೆಯವರೆಗೆ 9,897 ಮತ್ತು ಮಾರ್ಚ್ ತಿಂಗಳ ಒಳಗಾಗಿ 12,000ಕ್ಕೆ ಹೋಗಬಹುದು.

Government Spun Silk Mills, Channapatna

95. Sri V. VENKATAPPA (Legislative Assembly Constituency).—

Will the Minister for Labour, Animal Husbandry, Fisheries and Sericulture be pleased to state :—

(*a*) whether the Government Spun Silk Mills, Channapatna is supplying yarn to the public for weaving on contract basis ;

(*b*) whether tenders were called for this purpose if so, when ;

(*c*) the number of tenders received in this behalf ;

(*d*) the lowest and highest rate quoted by the tenderers ?

A.—Sri D. DEVARAJ URS (Minister for Labour, Animal Husbandry, Fisheries and Sericulture).—

(*a*) Yes.

(*b*) No.

(*c*) Does not arise in view of the reply to clause (*b*).

(*d*) This does not arise in view of reply to clause (*b*) of the question.

ಶ್ರೀ ವಿ. ವೆಂಕಟಪ್ಪ.—ಟೆಂಡರ್ಸ್ ಏತಕ್ಕೋಸ್ಕರ ಕರೆಯಲಿಲ್ಲ ?

ಶ್ರೀ ಡಿ. ದೇವರಾಜ ಅರಸ್.—ಟೆಂಡರ್ಸ್ ಕರೆಯತಕ್ಕ ಅಗತ್ಯವಿಲ್ಲ. ಇರುವ ಮೂರು ಯುನಿಟ್ಸ್‌ನಲ್ಲಿ ಯಾರಿಗೆ ಬೇಕಾದರೂ ಕಂಡಿಷನ್ಸ್ ಹಾಕಿ ಇದನ್ನು ಕೊಡುವುದಕ್ಕೆ ಅಭ್ಯಂತರ ವೇನಿಲ್ಲ. ಆದುದರಿಂದ ಟೆಂಡರ್ಸ್ ಕರೆಯುವ ಅಗತ್ಯವಿಲ್ಲ.

Mr. CHAIRMAN.—The held over Questions will be taken up on Monday.

QUESTIONS FOR ANSWERS ON THE DAY

(but not taken up)

D. A. to Government Servants

37. Sri S. MUKUNDA RAO (Teachers' Constituency).—

Will the Minister for Finance, Planning and Commerce and Industries be pleased to state :—

(*a*) whether the States of Madras, Kerala and Andhra have raised the D. A. of their servants to the level of the Central Government servants ;

(*b*) when our State will sanction the rise ?

A.—Sri RAMAKRISHNA HEGDE (Minister for Finance, Planning, Commerce and Industries).—

(*a*) The States of Madras, Kerala and Andhra have raised the D. A. of their servants to the level of the Central Government Servants as it existed prior to 1-11-1967. The Central rates of D. A. from 1-11-1967 are higher.

(*b*) The rise in D. A. as announced on the floor of this House on 1-3-1968 is on par with Central rates and somewhat more liberal for the pay group of Rs. 90 and above but below Rs. 110.

CALLING ATTENTION TO A MATTER OF URGENT PUBLIC IMPORTANCE

Sri Y. S. PATIL (Graduates' Constituency).—I call the attention of the Minister for Health and Housing to the strike by the students of the Ayurvedic College in support of their demand for Degree Course.

Sri K. PUTTASWAMY (Minister for Health and Housing).—The Course for 'Ayurveda Vidwat' was introduced in the Ayurvedic College at Mysore during 1908. It was changed to L. A. M. S./L. U. M. S. during 1928. During 1958, G. C. I. M. (Integrated) Course was started and continued up to the end of 1963. The G. C. I. M. was a degree. It was during 1964 that the Diploma Course in Shuddha Ayurveda (D A.M.) based on the recommendations of the Vyas Committee was introduced in all the Ayurveda Vidyalayas in the State and the G. C. I. M. Course was abolished.

As the students were against the introduction of Shuddha Ayurveda as against G. C. I. M. (Integrated) Course, they started agitating for a degree course. With a view to allaying their fears, Government issued a Press Note on 30th November 1965 stating that their representations would be considered sympathetically and requesting them to attend classes. As they continued to abstain from the Classes, Government issued a Second Press Note on 5th January 1968 indicating that Government had taken a decision to introduce a Degree Course in addition to the Diploma Course and that details were being worked out. Further on 20th January 1968, a third Press Note was issued to the effect, that the proposed Degree Course would be a continuation of the Diploma Course and that the old batch of students would have the option to take either the Diploma after completing the Diploma Course or to have the Degree Course by continuing their studies in the Degree Course. However, this position was reconsidered by Government and it was ordered on 19th October 1966 that there would be no Diploma Course from 1966-67 and that the students selected for the Diploma

Course during the previous two years should be permitted to continue for the Degree Course. Orders sanctioning the scheme for the starting of B. S. A. M. Course (Degree Course) were issued on 31st March 1967. Before this graduate course could be started, it was necessary to get the approval of the concerned University for the affiliation of the College and a Faculty of Indian Medicine has to be created by the University. The Bangalore and Mysore Universities were addressed in this behalf. The Mysore University has given affiliation for the I Year B. S. A. M. Course at the Government College of Indian Medicine at Mysore and the reply of the Bangalore University which visited the Jayachamarajendra Institute of Indian Medicine at Bangalore on 7th February 1968 is awaited. In the meantime, the Courses have been started with admission of 38 students at Bangalore and 18 at Mysore from 5th October 1967. The minimum qualification for admission to this Degree Course is a pass in P. U. C. Examination with science subjects (*i. e.*, P. C. B. and C. B Z. as optional). Government are now examining whether a condensed course for the Degree of B. S. A. M. should be arranged for the D. A. M. students who joined the course in the years 1954, 1965, 1966 and 1967. The first batch of these students will complete the D. A. M. Course during May 1968. About 40 to 45 studeuts are expected to pass the final D. A. M. Course.

It is, therefore, necessary to arrange for the condensed Course for the Degree of B. S. A. M. for these candidates, This matter has been discussed with the Registrar, University of Mysore and it is proposed to prepare a curriculum and syllabus consisting of final year subjects of the regular B. S. A. M. Course with additional programme of study in Science subjects (*i. e.* Physics, Chemistry and Biology) to the P. U. C. Standard for a period of 1½ years *including* six months for internship. About 45 students can be admitted if this course is started at the Government College of Indian Medicine, Mysore. The University of Mysore is agreeable to consider an application for affiliation in this behalf.

As regards the Jayachamarajendra Institute of Indian Medicine, Bangalore, the requisite departments require to be developed to the standard of final year course of B. S. A. M. This will take some time. The Condensed Course for the Degree of B. S. A. M. can be started at Bangalore some time later with the approval of the University.

ಶ್ರೀ ಪೈ. ಎಸ್. ಪಾಟೀಲ್.—ಡಿಪ್ಲೊಮಾ ಮಾಡಿದ ವಿದ್ಯಾರ್ಥಿಗಳನ್ನು ಪದವಿ ತರಗತಿಗಳಿಗೆ ತೆಗೆದುಕೊಳ್ಳಬೇಕೆಂದು 1966ನೆ ಅಕ್ಟೋಬರ್ 18ನೇ ತಾರೀಖು ಪ್ರಕಟಣೆ ಮಾಡಿದ್ದಿರಿ. ಹೀಗಿದ್ದೂ ಅದನ್ನು ಈಗ ಹಿಂತೆಗೆದುಕೊಳ್ಳಲಿಕ್ಕೆ ಕಾರಣವೇನು ಎಂದು ತಿಳಿಸುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ನಾವೇನೂ ಹಿಂತೆಗೆದುಕೊಂಡಿಲ್ಲ. ಮುಂದೆ ಮುಂದೆ ಹೋಗುತ್ತಿದ್ದೇವೆ. ವಿಶ್ವವಿದ್ಯಾಲಯದವರನ್ನು ಕೇಳಿ ಅವರೇ ಇದರ ವ್ಯವಸ್ಥೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಡಿ.ಎ.ಎಂ. ಕೋರ್ಸ್‌ನಲ್ಲಿ ಡಿಪ್ಲೊಮಾ ಪಾಸ್ ಮಾಡಿದವರೆಲ್ಲರೂ

(ಶ್ರೀ ಕೆ. ಪುಟ್ಟಸ್ವಾಮಿ)

ಡಿಗ್ರಿ ಕೋರ್ಸ್‌ಗಳಿಗೆ ಬರಬಹುದು, ಬಾರದೆ ಹೋಗಬಹುದು. ಕೆಲವರು ಡಿಪ್ಲೊಮಾ ಸಾಕು ಎಂದು ಪ್ರೈವೇಟ್ ಪ್ರಾಕ್ಟೀಸ್ ವಗೈರೆ ಮಾಡಬಹುದು. ಇನ್ನು ಹಲವರು ಡಿಪ್ಲೊಮಾ ಮಾಡಿದ ಮೇಲೆ ಮತ್ತೆ ಇನ್ನೂ ಹೆಚ್ಚು ಶಿಕ್ಷಣ ಪಡೆಯಬೇಕು ಎಂದು ಅಪೇಕ್ಷೆ ಪಡಬಹುದು. ಅಂಥವರಿಗೆ ವ್ಯವಸ್ಥೆ ಮಾಡಬೇಕು ಎನ್ನುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ. ಅಲ್ಲದೆ ಸರ್ಕಾರವೇ ಡಿಗ್ರಿ ಕೋರ್ಸ್‌ಸ್ ತೆಗೆದಿದ್ದಾರೆ ಅದಕ್ಕೆ ಅಷ್ಟೊಂದು ಬೆಲೆ ಪೈನೂರು ರಾಜ್ಯದ ಹೊರಗಡೆಯ ಜನರ ದೃಷ್ಟಿಯಿಂದ ಇರುವುದಿಲ್ಲ; ವಿಶ್ವವಿದ್ಯಾಲಯದವರು ಡಿಗ್ರಿ ಕೋರ್ಸ್ ಪ್ರಾರಂಭ ಮಾಡಿದರೆ ಅದಕ್ಕೆ ಬೆಲೆ ಬರುತ್ತದೆ ಎಂದು ಸರ್ಕಾರ ಪ್ರಯತ್ನ ಮಾಡುತ್ತಿದೆ. ಇಂಡಿಯಾ ಸರ್ಕಾರದವರು ನಮ್ಮಲ್ಲಿ ಪೋಸ್ಟ್ ಗ್ರಾಜುಯೇಟ್ ಕೋರ್ಸ್ ಪ್ರಾರಂಭ ಮಾಡಲು ಸೌಲಭ್ಯವನ್ನು ಕೊಡುವುದಕ್ಕೆ ಭರವಸೆ ಕೊಟ್ಟಿದ್ದಾರೆ. ಪೋಸ್ಟ್ ಗ್ರಾಜುಯೇಟ್ ಕೋರ್ಸಿಗೆ ಅವರು ಸೌಲಭ್ಯ ಕೊಡಬೇಕಾದರೆ ಒಂದು ಷರತ್ತು ಹಾಕಿದ್ದಾರೆ. ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಂಥ ಅಂಡರ್ ಗ್ರಾಜುಯೇಟ್ ಕೋರ್ಸ್ ನಡೆಯುತ್ತಿದ್ದರೆ ಮಾತ್ರ ಪೋಸ್ಟ್ ಗ್ರಾಜುಯೇಟ್ ಕೋರ್ಸಿಗೆ ಸೌಲಭ್ಯ ಕೊಡುತ್ತೇವೆಂದು ಹೇಳಿದ್ದಾರೆ. ಆ ಕಾರಣದಿಂದಲೇ ವಿಶ್ವವಿದ್ಯಾಲಯದವರಿಗೆ ನಾವು ಆರ್ಡಿ ಹಾಕಿ ಅಫಿಲಿಯೇಷನ್ ಪಡೆದು, ಅವರು ಶಿಕ್ಷಣವನ್ನು ಯಾವ ರೀತಿ ವ್ಯವಸ್ಥೆ ಮಾಡಬೇಕು ಎಂದು ಅಪೇಕ್ಷೆ ಪಡುತ್ತಾರೆ ಆ ರೀತಿ ಮಾಡಬೇಕಾದ್ದು ಅಗತ್ಯವಾಗಿರುವುದರಿಂದ ನಾವು ಈ ಕಾರ್ಯಕ್ರಮವನ್ನು ಕೈಕೊಂಡಿದ್ದೇವೆ. ಹಿಂದೆ ಕೊಟ್ಟಂಥ ಮಾತು ನಾವು ಮೀರಿಲ್ಲ. ಅದಕ್ಕಿಂತ ಇನ್ನೂ ಮುಂದೆ ಹೋಗಿ ಹೆಚ್ಚಿನ ಮಾನ್ಯತೆ ಕೊಡತಕ್ಕ ಕ್ರಮಗಳನ್ನು ಕೈಕೊಂಡಿದ್ದೇವೆ.

Members' Representations

ಶ್ರೀ ಎ. ಎಚ್. ಶಿವಾನಂದಸ್ವಾಮಿ (ವಿಧಾನಸಭಾ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ಈ ಸಭೆಗೆ ಅಗೌರವ ಕೊಡುವ ರೀತಿಯಲ್ಲಿ, ತಮ್ಮಿಂದ ಸರ್ಕಾರಕ್ಕೆ ಕಳಿಸಿಕೊಟ್ಟಿರುವ ಪ್ರಶ್ನೆಗಳಿಗೆ, ಸರ್ಕಾರದವರು ಯಾವ ಉತ್ತರಗಳನ್ನೂ ಕಳಿಸುತ್ತಿಲ್ಲ. ಇನ್ನು ಎರಡು ಮೂರು ದಿವಸಗಳಲ್ಲಿ ಈ ಸಭೆಯ ಕಾರ್ಯಕಲಾಪಗಳು ಮುಂದೂಡಲ್ಪಡುತ್ತವೆ. ಸಭೆ ಪ್ರಾರಂಭ ಆಗುವುದಕ್ಕೆ 15 ದಿವಸ ಮುಂಚೆ ಪ್ರಶ್ನೆಗಳನ್ನು ನಾನು ಕಳುಹಿಸಿದ್ದೆ. ಇನ್ನೂ ಉತ್ತರಗಳು ಬಂದಿಲ್ಲ. ಈ ಸಭೆ ಮುಗಿಯುವುದರೊಳಗಾಗಿ ಸರ್ಕಾರದಿಂದ ಉತ್ತರಗಳು ಬಂದರೂ ಸಾಕು. ನಾವು ಯಾವ ಒತ್ತಾಯವನ್ನೂ ತರುತ್ತಿಲ್ಲ. ಈ ಸಭೆಗೆ ಅಗೌರವವಾಗುವ ರೀತಿಯಲ್ಲಿ ಕಳುಹಿಸಿದ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡದೆ ಮುಂದೆ ಹಾಕುತ್ತಿದ್ದಾರೆ. ಈ ವಿಚಾರದಲ್ಲಿ ಒಂದು ಸಾರಿ ತೀರ್ಮಾನ ಮಾಡೋಣ. ಸರ್ಕಾರದವರು ಅವರ ಮನಸ್ಸಿಗೆ ಬಂದಾಗ ಉತ್ತರಗಳನ್ನು ಕಳಿಸಲಿ ಅಥವ ಬಿಡಲಿ ಎನ್ನುವ ಉದ್ದೇಶವಿದ್ದರೆ ಆ ರೀತಿ ಮಾಡಲಿ. ಇಲ್ಲದೆ ಇದ್ದರೆ ತಾವು ನಮಗೆ ರಕ್ಷಣೆ ಕೊಟ್ಟು ಪ್ರಶ್ನೆಗಳಿಗೆ ಉತ್ತರಗಳನ್ನು ತರಿಸಿ ಈ ಸಭೆಗೆ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಸಭಾಪತಿಯವರು.—ಸಭೆಗೆ ಅಗೌರವವಾಗುವಂಥದ್ದೇನೂ ಇಲ್ಲ. ಈಗ ನೋಡಿದ ಮಟ್ಟಿಗೆ ಇಪ್ಪತ್ತು ಒಂಬತ್ತು ಪ್ರಶ್ನೆಗಳು ಬಂದಿವೆ. ಪರಿಸ್ಥಿತಿ ಸುಧಾರಿಸುತ್ತಿದೆ. ಆದರೂ ಕೂಡ ತಮ್ಮ ಪ್ರಶ್ನೆಗಳಿಗೂ ಕೂಡ ಉತ್ತರಗಳನ್ನು ತರಿಸಲು ಪ್ರಯತ್ನ ಮಾಡಲಾಗುತ್ತಿದೆ. ಸಭೆ ಇನ್ನೂ ಎರಡು ದಿವಸ ಕೂಡುತ್ತದೆ. ಮತ್ತೆ ಏಪ್ರಿಲ್‌ನಲ್ಲಿ ಸಭೆ ಸೇರುವಾಗ ಉಳಿದಿರುವ ಪ್ರಶ್ನೆಗಳು ಬರುತ್ತವೆ. ಯಾವುವೂ ಲಾಪ್ಸ್ ಆಗುವುದಿಲ್ಲ. ಮಾನ್ಯ ಸದಸ್ಯರು ಅಂತಹ ಆತಂಕವನ್ನು ಇಟ್ಟುಕೊಳ್ಳಬೇಕಾಗಿಲ್ಲ.

ಶ್ರೀ ಎ.ಎಚ್. ಶಿವಾನಂದಸ್ವಾಮಿ.—ಲ್ಯಾಪ್ಸ್ ಆಗದೆ ಇದ್ದರೆ ಸಾಕು. ಯಾವತ್ತಿಗಾದರೂ ಉತ್ತರಗಳನ್ನು ಸರ್ಕಾರ ಕಳಿಸಲಿ. ಸಚಿವಾಲಯದಲ್ಲಿ ಉತ್ತರ ಕೊಡುವುದಕ್ಕೂ ಕೂಡ ನಿಧಾನ ಮಾಡುತ್ತಿದ್ದಾರೆ.

BUDGET ESTIMATES FOR 1968-69

(General Discussion)

(Debate Continued)

ಶ್ರೀ ಕೆ. ಟಿ. ಶಾಮಯ್ಯಗೌಡ (ಸ್ಥಾನೀಯ ಪ್ರಾಧಿಕಾರೀ ಕ್ಷೇತ್ರ).—ಮಾನ್ಯ ಸಭಾಪತಿಗಳೆ, ನಮ್ಮ ಮುಂದೆ ಇರತಕ್ಕ ಆಯವ್ಯಯಪಟ್ಟಿಯನ್ನು ಅನುಮೋದಿಸುತ್ತ ಕೇವಲ ಸ್ವಲ್ಪ ವೇಳೆಯಲ್ಲಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಈಗಾಗಲೇ ದೇಶದ ಮೇಲೆ ಸಾಲದ ಹೊರೆ ಜಾಸ್ತಿಯಾಗಿದೆ. ನಮ್ಮ ಆರ್ಥಿಕ ಮಂತ್ರಿಗಳು ಹೇಳಿದ ಹಾಗೆ ಈ ವರ್ಷ ಮತ್ತು ಪಂಚವಾರ್ಷಿಕ ಯೋಜನೆಯಲ್ಲಿ ನಾನ್‌ಗೆಜೆಟೆಡ್ ಅಧಿಕಾರಿಗಳಿಗೆ ಸಹಾಯ ಮಾಡಲು ಸಂಬಳಗಳನ್ನು ಹೆಚ್ಚಿಸಿದ್ದರಿಂದ 30 ಕೋಟಿ ರೂಪಾಯಿ ಖರ್ಚು ಹೆಚ್ಚಿತು, ಈ ಸಲ 14 ಕೋಟಿ ರೂಪಾಯಿ ಹೆಚ್ಚಿದೆ. ಇವೆಲ್ಲರಿಂದಾಗಿ ಹೊಸ ತೆರಿಗೆಗಳು ಬರಬಹುದು ಎಂದು ಸಲಹೆ ಕೊಟ್ಟಿದ್ದಾರೆ. ಈಗಾಗಲೇ ಜನತೆಯ ಮೇಲೆ ತೆರಿಗೆಯ ಹೊರೆ ಬಹಳ ಜಾಸ್ತಿ ಇದೆ. ಸರ್ಕಾರದವರು ಯಾವ ಹೆಚ್ಚಿನ ತೆರಿಗೆಗಳನ್ನೂ ಹಾಕಲು ಯೋಚನೆ ಮಾಡದೆ ಸರ್ಕಾರದಲ್ಲಿ ಏನು ಹೆಚ್ಚು ಖರ್ಚಾಗುವ ಬಾಬುಗಳಿವೆ ಅವನ್ನು ಕಡಿಮೆ ಮಾಡಿ, ಅನವಶ್ಯಕವಾಗಿರುವ ಇಲಾಖೆಗಳನ್ನು ಖೋತಾ ಮಾಡಿ ಖರ್ಚನ್ನು ಕಡಮೆ ಮಾಡಬೇಕೆಂದು ಯಾವ ಹೊಸ ತೆರಿಗೆಗಳನ್ನು ಹಾಕುವ ವಿಚಾರದಲ್ಲಿಯೂ ಈಗ ಕೈ ಹಾಕಬಾರದೆಂದೂ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈಗಾಗಲೇ ನೌಕರರಿಗೆ ಸಂಬಳವನ್ನು ಹೆಚ್ಚು ಮಾಡಿದ್ದೀರಿ. ಆದರೆ ವರ್ಕ್ ರೂಲ್ ವಿಚಾರದಲ್ಲಿ ಏನೂ ಗಮನ ಕೊಟ್ಟಿಲ್ಲ. ಸರ್ಕಾರದವರು ನೌಕರರ ವರ್ಕ್ ರೂಲ್ ವಿಚಾರದಲ್ಲಿ ಗಮನವಿಡಬೇಕು ಮತ್ತು ಅವರಿಂದ ಕೆಲಸವನ್ನು ತೆಗೆದುಕೊಳ್ಳುವುದರಲ್ಲಿ ಹೆಚ್ಚಿನ ಶ್ರಮ ವಹಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ರೋಕೋಪಯೋಗಿ ಇಲಾಖೆಯಲ್ಲಿ ಕೆಲವು ವಿಚಾರಗಳು ನಮ್ಮ ಗಮನಕ್ಕೆ ಬರುತ್ತಿವೆ. ಹೊಸ ಪಂಪ್‌ಸೆಟ್‌ಗಳಿಗೆ ವಿದ್ಯುತ್ತನ್ನು ಕೊಡುವ ಸಂಬಂಧದಲ್ಲಿ ವಿದ್ಯುತ್ತನ್ನು ತೆಗೆದುಕೊಳ್ಳುವವರು ಒಂದು ಅಶ್ವಸಕ್ತಿಗೆ ಒಂದು ಸಾವಿರ ರೂಪಾಯಿ ಡಿಪಾಜಿಟ್ ಕೊಡಬೇಕು ಎಂದು ಹೇಳುತ್ತಿದ್ದಾರೆ. ಹೆಚ್ಚು ಆಹಾರ ಉತ್ಪಾದನೆಯಾಗಬೇಕು ಎಂದು ಹೇಳುವ ಸಮಯದಲ್ಲಿ ಇಂಥ ನಿರ್ಬಂಧಗಳನ್ನು ಹಾಕುವುದು ಸರಿಯಲ್ಲ. ಸರ್ಕಾರದವರು ಇದರ ಬಗ್ಗೆ ಯೋಚನೆ ಮಾಡಿ ಇವನ್ನು ತಪ್ಪಿಸಬೇಕು, ರೈತರಿಂದ ಈ ಹಣವನ್ನು ಕೊಡುವುದಕ್ಕೆ ಸಾಧ್ಯವಾಗದಿರಬಹುದು ಎಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ರೆವೆನ್ಯೂ ಮತ್ತು ಅರಣ್ಯ ವಿಚಾರದಲ್ಲಿ ಒಂದೆರಡು ಮಾತು ಹೇಳಬೇಕಾಗಿದೆ. ಅನೇಕ ಸಮಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳೂ ನಮಗೆ ಆಶ್ವಾಸನೆಯನ್ನು ಕೊಟ್ಟಿದ್ದರು. ಮರೆ ನಾಡಿನಲ್ಲಿ ಹೊಸದಾಗಿ ಅರಣ್ಯವನ್ನು ಬೆಳೆಸುವ ಕಾರ್ಯಕ್ರಮವನ್ನು ಹಾಕಿಕೊಂಡು ಇದ್ದಂಥ ಕಾಡನ್ನು ಕಡಿಯುತ್ತಿದ್ದಾರೆ. ಈ ರೀತಿ ಮಾಡದೆ ಮೊದಲು ಏನು ಅರಣ್ಯವಿತ್ತು ಅದನ್ನು ಹಾಗೆಯೇ ಉಳಿಸಬೇಕೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ನಾನು ನಿನ್ನೆ ತಾನೇ ನೋಡಿ ಬಂದಿದ್ದೇನೆ. ಅಲ್ಲಿಗೆ ಆರೋಗ್ಯ ಮಂತ್ರಿಗಳೂ ಬಂದದ್ದು ನೋಡಿದ್ದಾರೆ. ಹೊಸದಾಗಿ ಕಾಡು ಬೆಳೆಸುತ್ತೇವೆ ಎಂದು ಇಲಾಖೆಯವರು ಕಾಡಿಗೆ ಬೆಂಕಿ ಹಚ್ಚಿ ಅತ್ಯುತ್ತಮವಾದ ಮರಗಳು, ನಂದಿ, ಮತ್ತಿ, ಹೊನ್ನೆ ಅಲ್ಲದೆ ಟಿಂಬರ್‌ಗೆ ಅನುಕೂಲವಾಗುವಂಥ ಮರಗಳನ್ನೂ ನುಟ್ಟು ಹಾಕುತ್ತಿದ್ದಾರೆ ಮತ್ತು ಅಲ್ಲಿ ನೀಲಗಿರಿ ಸಸಿಗಳನ್ನು ನೆಡುತ್ತಿದ್ದಾರೆ. ಮರೆನಾಡಿಗೆ ಇದರ ಅಗತ್ಯವಿಲ್ಲ ಎಂದು ನಾನು ಹೇಳುತ್ತೇನೆ. ಹೀಗೆ ಮಾಡುವುದರಿಂದ ನಮ್ಮ ದೇಶದಲ್ಲಿರುವ ಅರಣ್ಯ ಸಂಪೂರ್ಣವಾಗಿ ನಾಶವಾಗುತ್ತದೆ. ಮರೆನಾಡಿನ ಕಾಡು ಈಗಾಗಲೇ ಮಳೆ ಬಹಳ ಕಡಮೆಯಾಗಿದೆ. ಪಾಟರ್ ಪರ್ಕೊಲೇಷನ್ ಇದ್ದುದು ಕಡಮೆಯಾಗಿದೆ. ಮತ್ತು ನೀರಿಲ್ಲದಂತೆ ಕಷ್ಟ ಪರಿಸ್ಥಿತಿ ಬಂದಿದೆ. ಆದ್ದರಿಂದ ಮರೆನಾಡಿನಲ್ಲಿರುವ ಕಾಡನ್ನು ಕಡಮೆ ಮಾಡಬಾರದೆಂದು ಹೇಳುತ್ತೇನೆ. ಎಲ್ಲೆ ಕಾಡು ಇಲ್ಲ ಅಂಥ ಮೈದಾನ ಪ್ರದೇಶಗಳಲ್ಲಿ ಕಾಡನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ಮರೆ ನಾಡಿನಲ್ಲಿ ಕಾಡನ್ನು ಕಡಮೆ ಮಾಡಿ ರೈತರಿಗೆ ಹಿಂಸೆ ಕೊಡುವುದು ಬೇಡ. ಕಾಡನ್ನು ಕಡಮೆ ಮಾಡುತ್ತ ಹೋದರೆ ಅದರಿಂದ ಖಂಡಿತವಾಗಿಯೂ ನಾಟ ಸಿಕ್ಕುವುದಿಲ್ಲ. ಅಲ್ಲದೆ ಕಾಡಿನಲ್ಲಿ ಹಕ್ಕಿಗಳ ಮತ್ತು ಪಕ್ಷಿಗಳ ಬೇಕಾದಷ್ಟು ಸ್ಪೀಸೀಸ್ ಇರುವುದು ಕೂಡ ಸಿಕ್ಕದೆ ಹೋಗುವ ಸಂಭವವಿದೆ. ಇರುವ ಕಾಡನ್ನು ಕಡಿದು ನವೀಕರಣ ಮಾಡುತ್ತೇವೆಂದು ಹೇಳುವುದರಿಂದ ಏನೂ ಪ್ರಯೋಜನವಿಲ್ಲ ಎಂದು ಅರಿಕೆ ಮಾಡಿಕೊಳ್ಳುತ್ತೇನೆ.

(ಶ್ರೀ ಕೆ. ಟಿ. ಶಾಮಯ್ಯ ಗೌಡ)

ಲ್ಯಾಂಡ್ ಗ್ರಾಂಟ್ ವಿಚಾರದಲ್ಲಿ ನಾನು ನಾಲ್ಕು ಮಾತನ್ನು ಹೇಳಬೇಕಾಗಿದೆ. ಈಗ ಎರಡು ಮೂರು ದಿವಸಗಳ ಹಿಂದೆ ಕೆಳಗಿನ ಮನೆಯಲ್ಲಿ ನನ್ನ ಮೇಲೆ ನಿರಾಧಾರವಾದ, ನತ್ಯಕ್ಕೆ ದೂರವಾದ ಒಂದಂಶವನ್ನು ಇಬ್ಬರು ವಿರೋಧ ಪಕ್ಷದ ಸದಸ್ಯರು ತಂದು ಹೊರಿಸಿದ್ದಾರೆ. ಯಾವ ಕಾರಣದಿಂದ ಅಂಥ ಆಪಾದನೆಯನ್ನು ಹೊರಿಸಿದರೋ ನನಗೆ ಗೊತ್ತಿಲ್ಲ. ವಿರೋಧಪಕ್ಷದಲ್ಲಿ ಎಲ್ಲರೂ ಎಂದು ಹೇಳುವುದಿಲ್ಲ, ಇಬ್ಬರು ಸದಸ್ಯರು ಆಪಾದನೆ ಮಾಡಿದ್ದಾರೆ. ಶಾಸನ ಸಭೆಗಳ ಸದಸ್ಯರಾಗಿದ್ದುಕೊಂಡು ಕೆಳಗಿನ ಮನೆಯ ಸದಸ್ಯರು ಮೇಲ್ಮನೆಯ ಸದಸ್ಯರ ಮೇಲೆ ಆರೋಪ ಮಾಡುವುದು, ಕೆಳಗಿನ ಮನೆಯ ಸದಸ್ಯರ ಮೇಲೆ ಮೇಲ್ಮನೆಯ ಸದಸ್ಯರು ಆರೋಪ ಮಾಡುವುದು ಸರಿಯಲ್ಲ. ಇರುವ ಸತ್ಸಂಪ್ರದಾಯಗಳನ್ನು ವಿರೋಧಿಸಿ ಯಾವತ್ತೇ ಆಗಲೀ, ಯಾರೇ ಆಗಲಿ, ತಮ್ಮನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಯಾರು ಸಭೆಯಲ್ಲಿ ಇರುವುದಿಲ್ಲ ಅಂಥವರ ಮೇಲೆ ಇಲ್ಲ ಸಲ್ಲದ ಆರೋಪಗಳನ್ನು ಮಾಡುತ್ತಾರೆ, ಅದು ಸತ್‌ಸಂಪ್ರದಾಯಕ್ಕೆ ಪ್ರಜಾಪ್ರಭುತ್ವಕ್ಕೆ ವಿರೋಧವಾದುದು ಎಂದು ನಾನು ಹೇಳುತ್ತೇನೆ. ನಾನು ಸುಮಾರು 40 ವರ್ಷಗಳಿಂದ ರಾಜಕೀಯದಲ್ಲಿದ್ದೇನೆ. ವಿರೋಧಪಕ್ಷದ ಸದಸ್ಯರು ಮಂತ್ರಿಗಳ ಮೇಲೆ, ಸದಸ್ಯರ ಮೇಲೆ, ಯಾರ ಮೇಲೆ ಏನು ಆರೋಪವನ್ನು ಹೇಳಿದರೂ ನಡೆದು ಹೋಗುತ್ತದೆ ಎಂದು ಆರೋಪ ಮಾಡುವುದು ನ್ಯಾಯವಾದುದಲ್ಲ. ಈ ರೀತಿ ಒಬ್ಬರ ಮೇಲೆ ಒಬ್ಬರು ಆರೋಪಣೆ ಮಾಡುತ್ತ ಹೋದರೆ ಯಾವ ಪರಿಣಾಮಕ್ಕೆ ಬರುತ್ತದೆ, ಜನತೆಯ ಮೇಲೆ ಏನು ಪ್ರಭಾವವಾಗುತ್ತದೆ ಎಂದು ನೋಡಬೇಕು. ನಾನು ಸುಮಾರು 40 ವರ್ಷಗಳಿಂದ ರಾಜಕೀಯದಲ್ಲಿದ್ದರೂ ಕೂಡ ಸರ್ಕಾರದಿಂದ ನಾನಾಗಲೀ, ನನ್ನ ಸಂಬಂಧೀಕರಾಗಲೀ.....

9-30 A.M.

Sri A. H. SHIVANANDASWAMY.—Sir, I rise to a point of order. The hon'ble member is making allegations about the opposition members and I do not know what statement was made in the lower House. I request the member just to enlighten the House as to why he is making such allegations.

ಶ್ರೀ ಕೆ. ಟಿ. ಶಾಮಯ್ಯಗೌಡ.—ಅದನ್ನು ಮುಂದೆ ಹೇಳುತ್ತೇನೆ. ನಾನು 40 ವರ್ಷಗಳಿಂದ ರಾಜಕೀಯದಲ್ಲಿ ಇದ್ದರೂ ಕೂಡ ಸರಕಾರದಿಂದಲಾಗಲೀ ಇತರರಿಂದಾಗಲೀ ಯಾವ ಸಹಾಯವನ್ನೂ ನನಗಾಗಲೀ ನನ್ನ ಕುಟುಂಬಕ್ಕಾಗಲೀ ಪಡೆದಿಲ್ಲ. ಹಾಗಿದ್ದರೂ ಕೂಡ ಕೆಲವರು ಸದಸ್ಯರು ನನ್ನ ಮೇಲೆ ಆರೋಪ ಹೊರಿಸಿದ್ದಾರೆ, ನನ್ನ ಕುಟುಂಬದ ಹೆಸರಿನಲ್ಲಿ ಸರಕಾರದಿಂದ ನಾನು ಜಮೀನು ಪಡೆದಿರುವುದಾಗಿ ಆರೋಪ ಮಾಡಿದ್ದಾರೆ.

ಶ್ರೀ ಜಿ. ಎ. ಆಂಜನಪ್ಪ (ಪದವೀಧರರ ಕ್ಷೇತ್ರ).—ಆರೋಪ ಮಾಡಿರುವ ಸದಸ್ಯರು ಯಾರು ?

ಶ್ರೀ ಕೆ. ಟಿ. ಶಾಮಯ್ಯ ಗೌಡ.—ಸತ್ಸಂಪ್ರದಾಯವಿರಬೇಕು, ಅದುದರಿಂದ ನಾನು ಅದನ್ನು ಹೇಳುವುದಿಲ್ಲ, ಈ ವಿಚಾರ ಪತ್ರಿಕೆಯಲ್ಲಿ ದೊಡ್ಡ ಅಕ್ಷರಗಳಲ್ಲಿ ಬಂದಿವೆ. ನಾನು ಒಬ್ಬ ಸಾಮಾನ್ಯ ಮನುಷ್ಯನಂತೆ 40 ವರ್ಷಗಳಿಂದ ನಡೆದುಕೊಳ್ಳುತ್ತಿರುವಾಗ ಮಾನ್ಯ ಸದಸ್ಯರು ಕೆಲವರು ನನ್ನ ಕುಟುಂಬಕ್ಕೆ ಸರಕಾರ 28 ಎಕರೆ ಜಮೀನನ್ನು ಕೊಟ್ಟಿದೆ ಎಂದು ಹೇಳಿದ್ದಾರೆ. ಇದು ಸತ್ಯಕ್ಕೆ ಎಷ್ಟು ದೂರವಾದುದು ಎಂಬುದನ್ನು ಹೇಳುತ್ತೇನೆ. ಒಂದು ಕೆರೆಗೆ ಸಂಬಂಧಪಟ್ಟ ಜಮೀನನ್ನು ಕೊಟ್ಟಿದ್ದಾರೆ ಎಂದು ತಿಳಿಸಿದ್ದಾರೆ. ಇದಕ್ಕಾಗಿ ಒಂದು ಪ್ರಿವಿಲೇಜ್ ಮೋಷನ್ನನ್ನು ಕಳುಹಿಸಿದ್ದೇನೆ ಅದಕ್ಕೆ ಇನ್ನೂ ಅವಕಾಶ ಕೊಟ್ಟಿಲ್ಲ. ಲ್ಯಾಂಡ್ ಗ್ರಾಂಟ್ ವಿಚಾರ ಹೇಳುತ್ತೇನೆ.

ಶ್ರೀ ಜಿ. ಎ. ಆಂಜನಪ್ಪ.—ಮಾನ್ಯ ಶಾಮೇಗೌಡರಿಗೆ ಕೊಟ್ಟಿದ್ದಾರೆಂದು ಹೇಳಿದರೆ ಅವರು ಡಿಫೆಂಡ್ ಮಾಡಿಕೊಳ್ಳಬಹುದು. ಅವರ ಕುಟುಂಬಕ್ಕೆ ಕೊಟ್ಟಿದ್ದಾರೆಂದು ಹೇಳಿದರೆ ಅವರು ಡಿಫೆಂಡ್ ಮಾಡಬಹುದೇ ? ಅವರ ಮನೆಯವರಿಗೆ ಕೊಟ್ಟರೆ ಅದರ ಬಗ್ಗೆ ಮಾನ್ಯ ಸದಸ್ಯರ ಮಾತನಾಡಲು ಅಧಿಕಾರವೆಲ್ಲದೆ ? ಅವರ ಬಗ್ಗೆ ಏನಾದರೂ ಹೇಳಿದರೆ ಡಿಫೆಂಡ್ ಮಾಡಿಕೊಳ್ಳಲಿ.

Mr. CHAIRMAN.—The question so far as I can understand is, the hon'ble member is not trying to defend. He is stating facts—what exactly the things are.

ಶ್ರೀ ಜಿ. ವಿ. ಅಂಜನಪ್ಪ.—ಜಮೀನನ್ನು ಯಾರಿಗೆ ಮಂಜೂರು ಮಾಡಿದ್ದಾರೋ ಅದನ್ನು, ವಾಸ್ತವಾಂಶವನ್ನು ಹೇಳಿದ್ದಾರೆ, ಆ ರೀತಿ ಹೇಳಿರುವುದು ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ನೋಡಿದೆ, ಶ್ರೀ ಶಾಮೇಗೌಡರ ಬಗ್ಗೆ ಯಾರೂ ಹೇಳಿಲ್ಲ.

ಶ್ರೀ ಕೆ. ಟಿ. ಶಾಮಯ್ಯ ಗೌಡ.—ಪತ್ರಿಕೆಯಲ್ಲಿ ವಿಧಾನ ಪರಿಷತ್ತಿನ ಸದಸ್ಯರಾದ ಶಾಮೇಗೌಡರ ಪತ್ನಿಗೆ ಕೊಡಲಾಗಿದೆ ಎಂದು ಹೇಳಿರುವುದಾಗಿ ಅಚ್ಚಾಗಿದೆ; ಶಾಸನ ಸಭಾ ಸದಸ್ಯರು ಜಮೀನು ಪಡೆಯಲು ಪ್ರಯತ್ನ ಮಾಡಿದ್ದಾರೆಂದು ಹೇಳಿರುವುದಾಗಿ ವರದಿಯಾಗಿದೆ. ಹಿಂದೆ ಮಂತ್ರಿ ಸಹ ಆಗಿದ್ದವರು ಇವ್ವಾರೆ. ನನ್ನ 40 ವರ್ಷಗಳ ರಾಜಕೀಯ ಜೀವನದಲ್ಲಿ ಅವರು ಮಂತ್ರಿಗಳಾದಾಗ, ನಾಲ್ಕೂವರೆ ವರ್ಷಗಳಲ್ಲಿ ಒಂದು ವರ್ಷವಾದರೂ ಅವರ ಮುಖ ನಾನು ನೋಡಿರಲಿಲ್ಲ. 1954ರಲ್ಲಿ ವೃತ್ತಿದಾರರ ಒಂದು ಟ್ರ್ಯಾಂಕ್ ಬೆಡ್ಡನ್ನು ಸರಕಾರದ ಆಜ್ಞೆಯ ಪ್ರಕಾರ ಮಾರಾಟ ಮಾಡಲಾಗಿದೆ, ಸರಕಾರದ ಅನುಮತಿಯಿಂದ 88 ಮತ್ತು 89ನೆಯ ಸರ್ವೆ ನಂಬರು ಜಮೀನನ್ನು ಶಿವಮೊಗ್ಗ ತಾಲ್ಲೂಕಿನ ಜೇಡಿಕಟ್ಟೆ ರಂಗಯ್ಯಯೆಂಬುವರಿಗೆ ಕೆರೆ ಅಂಗಳದಲ್ಲಿ ಮಾರಾಟ ಮಾಡಲು ತಾರೀಖು ಎಂಟನೇ ಜನವರಿ 1955ರಲ್ಲಿ ಆರ್ಡರು ಕೊಡಲಾಗಿನೆ. ನಂತರ ಪುನಃ ಆ ಕೆರೆ ಸುತ್ತ ಮುತ್ತಲಿದ್ದವರು ಸರಕಾರದ ಬಳಿಗೆ ಹೋಗಿ ಆ ಕೆರೆಯನ್ನು ಬ್ರೀಚ್ ಮಾಡಲು ಅನುಮತಿ ಕೊಡಬಾರದು ಎಂದು ಹೇಳಿದರು. ಆಗ ತುಂಗಾ ಮತ್ತು ಭದ್ರಾಗಳಿಗೆ ಸಂಬಂಧಪಟ್ಟ ಎರಡು ಧಾನಲ್ ಬಂದು ವಾಟರ್ ರಾಕ್ ಆಗಿ 400-500 ಎಕರೆ ಜಮೀನು ಹಾಳಾಗುತ್ತಿತ್ತು, ಆಗ ರಾಜ್ಯ ಸರಕಾರದವರು ಅಕ್ವಿಡಕ್ಟ್ ಕಟ್ಟಬೇಕು, ಅದು ಉಳಿಯುವುದಿಲ್ಲ, ಕೆರೆ ಬ್ರೀಚ್ ಮಾಡಬೇಕು ಎಂದು ಆಜ್ಞೆ ಮಾಡಿದರು. ಪುನಃ ಅದೇ ರೈತರು ಅದಕ್ಕೆ ಅವಕಾಶ ಕೊಡಬಾರದೆಂದು ಅರ್ಜಿ ಕೊಟ್ಟರು. ಆಗ ಶ್ರೀ ಕೃಷ್ಣ ಆಚಾರ್ಯ ಮತ್ತು ಇತರರು ಹೇಳಿದ್ದರಿಂದ 1955ರಲ್ಲಿ ಪುನಃ ಆರ್ಡರಾಗಿದೆ. ಇದು ಕೆಳಮನೆಯಲ್ಲಿರುವ ಮಾಜಿ ಮಂತ್ರಿಗಳ ಕಾಲದಲ್ಲಿ ಆಗಿರುವುದು, ಆಗ ಅವರು ಕಾಂಗ್ರೆಸ್ಸಿನಲ್ಲಿದ್ದರು. ಆ ಜಮೀನನ್ನು 24 ಜನರು ಕೊಂಡಮೇಲೆ ಉಳಿದ ಜಮೀನನ್ನು 1956ರಲ್ಲಿ ನನಗೆ ಕ್ರಯಕ್ಕೆ ಇನಾಂದಾರರು ಕೊಟ್ಟಿದ್ದಾರೆ, ಹನ್ನೆರಡೂವರೆ ಎಕರೆ ಮಾತ್ರ ನನ್ನ ಕುಟುಂಬದ ಹೆಸರಿನಲ್ಲಿ ಖರೀದಿಯಾಗಿದೆ. ನಂತರ ಈ ವಿಚಾರ ಟ್ರಿಬ್ಯೂನಲ್‌ಗೆ ಹೋಯಿತು, ಹೈಕೋರ್ಟಿನವರೆಗೆ ಹೋಯಿತು, ಎಲ್ಲ ವೃತ್ತಿದಾರರಿಗೆ ಹಕ್ಕಿದೆ, ಮಾರಬಹುದು ಎಂದು ತೀರ್ಮಾನವಾಯಿತು. ಇದಕ್ಕೆ ಸುಮಾರು 10 ಸಾವಿರ ರೂಪಾಯಿ ಖರ್ಚಾಗಿದೆ. 24 ಜನ ಇದಕ್ಕೆ ಸಂಬಂಧಪಟ್ಟ ಜಮೀನನ್ನು ಸಾಗುವಳಿ ಮಾಡುತ್ತಾರೆ. ನಾನು ಸರಕಾರದಿಂದ ಒಂದು ಗೋವಿನ ಪಾವಪಟ್ಟು ಜಮೀನನ್ನು ಕೂಡ ಪಡೆದಿಲ್ಲ. ವಿರೋಧ ಪಕ್ಷದವರು ಚುನಾವಣೆಯಲ್ಲಿ ಆರೋಪ ಮಾಡುವಂತೆ ಈ ಸಂಬಂಧದಲ್ಲಿ ಮಾತಾಡಿದ್ದಾರೆ. ಹಿಂದೆ ಚುನಾವಣಾ ಕಾಲದಲ್ಲಿ ಆರೋಪ ಮಾಡಿದಾಗ ನಾನು 60 ರೂಪಾಯಿಗಳನ್ನು ಖರ್ಚುಮಾಡಿ ಟೆಲಿಗ್ರಾಂ ಕೊಟ್ಟೆ, ಕಮಿನರ್ ಪ್ರಾಸಿಕ್ಯೂಷನ್‌ಗೆ ಸಹ ಈ ಸಂಬಂಧದಲ್ಲಿ ಹಾಕಿದೆ. ಆರೋಪಣೆ ದೂರುವರೆಗೆ ಡಿಫಮೇಷನ್‌ಗೆ ಹಾಕಿ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ತೀರ್ಮಾನವಾಗಿ ಅದು ಹೈಕೋರ್ಟಿನಲ್ಲಿ ಕನ್‌ಫರ್ಮ್ ಆಗಿದೆ. ಹೀಗಿರುವಾಗ ಸರಕಾರದಿಂದ ಏನೋ ಮಾಡಿ 195ರಲ್ಲಿ ಜಮೀನು ಪಡೆದರೆಂದು ಕೆಳಮನೆಯಲ್ಲಿ ನನ್ನ ಮೇಲೆ ಮತ್ತು ನನ್ನ ಕುಟುಂಬದ ಮೇಲೆ ಆಪಾದನೆ ಮಾಡುವುದು ಸತ್ಸಂಪ್ರದಾಯವೇ, ಇದೆಂಥ ನೀತಿ ಎಂಬುದನ್ನು ತಿಳಿಯಬೇಕು. 14 ವರ್ಷಗಳ ಹಿಂದೆ ತೀರ್ಮಾನವಾಗಿರುವ ವಿಚಾರವನ್ನು ಈಗ ಎತ್ತಿ ಆಪಾದನೆ ಮಾಡುವುದು ಸೂಕ್ತವೇ ಎಂಬುದನ್ನು ಯೋಚನೆ ಮಾಡಬೇಕು. ಇದಕ್ಕಾಗಿ ನಾನು ಊರಿಗೆ ಹೋಗಿ ನನ್ನ ಸಂಬಂಧಪಟ್ಟ ರಿಕಾರ್ಡನ್ನು ತಂದೆ. ಕೆಲವರು ಅನ್‌ಆಥರೈಜ್ಡ್ ಆಗಿ ಕೆರೆಯ ಅಂಗಳದ ಜಮೀನನ್ನು ಸಾಗುವಳಿ ಮಾಡಿದ್ದರು, ಅವರನ್ನು ಹೊರಗೆ ಹಾಕುವಾಗ ಸರಕಾರದವರು ನನಗೆ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ ಈ ವಿಚಾರ ಹೈಕೋರ್ಟಿನಲ್ಲಿ 14 ವರ್ಷಗಳ ಕೆಳಗೆ ತೀರ್ಮಾನವಾಗಿರುವಾಗ ಈಗ ವಿಚಾರ ಸರಿಯಾಗಿ ತಿಳಿಯದೆ ನನ್ನ ಮೇಲೆ ಆಪಾದನೆ ಕೆಳಮನೆಯಲ್ಲಿ ಮಾಡಿದ್ದಾರೆ. ಅದಕ್ಕಾಗಿ ನಾನು ಸರಿಯಾದ ವಿಚಾರ ತಿಳಿಸಬೇಕಾಗಿದೆ. ಎರಡು ಶಾಸನ ಸಭೆಗಳವರಿಗೂ ಒಂದು ಪ್ರಿವಿಲೇಜ್ ಇದೆ. ಆದರೆ ಅದನ್ನು ದುರುಪಯೋಗ ಪಡಿಸಿಕೊಳ್ಳಬಾರದು. ಈ ಸಂಬಂಧದಲ್ಲಿ ಆಪಾದನೆ ಮಾಡಿದವರು ತಾವು ಮಾಡಿದುದೂ ತಪ್ಪಾಯಿತೆಂದು ಹೇಳಿಕೆ ನೀಡಬೇಕು. ಇಲ್ಲವಿದ್ದರೆ ನಾನು ಇದರಮೇಲೆ ಮುಂದಿನ ಕ್ರಮ ಏನು ಕೈಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಯಾವಾಗಲೂ ಸತ್ಸಂಪ್ರದಾಯವನ್ನು ಸ್ಥಾಪಿಸಬೇಕು, ಏನಾಕಾರಣ ಆಪಾದನೆ ಮಾಡಬಾರದು. ಮಾಡುವುದು ಅನ್ಯಾಯ. ಕೆಳಮನೆಯಲ್ಲಿ ಆಪಾದನೆ ಮಾಡಿರುವವರು ತಾವು ಹಾಗೆಮಾಡಿದ್ದು ಸರಿಯಲ್ಲವೆಂದು ಹೇಳಿಕೆ ಕೊಡುವುದು ಅವರಿಗೆ ಗೌರವ ತರುವುದು, ಅವರೂ ಕೂಡ ಶಾಸಕರು, ತಮ್ಮ ಜವಾಬ್ದಾರಿಯನ್ನು ತಿಳಿದುಕೊಳ್ಳಬೇಕು. ತಪ್ಪನ್ನು ಒಪ್ಪಿಕೊಳ್ಳಬೇಕು ಎಂದು ಒತ್ತಾಯ ಹಾಕಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಕೆ. ಎ. ಶಂಕರಗೌಡ (ಶಿಕ್ಷಣ ಮತ್ತು ವ್ಯವಸಾಯ ಶಾಖೆಗಳ ಮಂತ್ರಿಗಳು).—ಮಾನ್ಯ ಸಭಾಪತಿಗಳೇ, ಈ ಸಭೆಯು ಮುಂದೆ ಇರತಕ್ಕಂಥ ಈ ಆಯವ್ಯಯದ ಮೇಲೆ ಕಳೆದ 10–12 ದಿವಸಗಳಿಂದ ವಿಪುಲವಾದಂಥ ಚರ್ಚೆ ನಡೆದಿದೆ, ಈ ಸಭೆಯ ಮಾನ್ಯ ಸದಸ್ಯರನೇಕರು ಈ ಆಯವ್ಯಯ ಪಟ್ಟಿಯನ್ನು ಮುಂಡಿಸಿರುವುದರಲ್ಲಿ ಮಾನ್ಯ ಅರ್ಥ ಮಂತ್ರಿಗಳವರು ಹೆಚ್ಚಿನ ಮುತ್ಸದ್ದಿತನವನ್ನು, ವಿವೇಕವನ್ನು ತೋರಿಸಿದ್ದಾರೆ ಎಂದು ಹೇಳಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಮಾಡಿದ್ದಾರೆ. ಮತ್ತೆ ಕೆಲವರು ಇದು ಕೇವಲ ಅಂಕಿಸಂಖ್ಯೆಗಳ ದೊಂಬರಾಟ. ತೋರಿಕೆಗೆ ಇದು ಉಳಿತಾಯದ ಆಯವ್ಯಯವಾದರೂ ವಾಸ್ತವಿಕವಾಗಿ ಖೋತಾ ಆಯವ್ಯಯ ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ. ನಾನು ಅರ್ಥತಜ್ಞನಲ್ಲ ಆದ್ದರಿಂದ ಈ ವಿಷಯದಲ್ಲಿ ನನ್ನ ಸ್ಪಷ್ಟವಾದಂತಹ ಅಭಿಪ್ರಾಯವನ್ನು ಕೊಡುವುದಕ್ಕೆ ಅಸಕ್ತನಾಗಿದ್ದರೂ ಕೂಡ ಈ ಆಯವ್ಯಯ ಪಟ್ಟಿಯನ್ನು ಮುಂಡಿಸುವುದರಲ್ಲಿ ಮಾನ್ಯ ಅರ್ಥ ಸಚಿವರು ಹೆಚ್ಚಿನ ಜಾಣ್ಮೆಯನ್ನು, ವಿವೇಕವನ್ನು, ದಕ್ಷತೆಯನ್ನು ಪ್ರದರ್ಶಿಸಿದ್ದಾರೆ ಎಂದು ಹೇಳುವುದಕ್ಕೆ ನನಗೆ ತುಂಬಾ ಹೆಮ್ಮೆಯಾಗುತ್ತದೆ. ಕೆಲವು ಮಾನ್ಯ ಸದಸ್ಯರು ಕಳೆದ 20 ವರ್ಷಗಳಿಂದ ಈ ದೇಶದಲ್ಲಿ ಏನೂ ಅಭಿವೃದ್ಧಿ ಸಾಧನೆಯಾಗಿಲ್ಲ, ಬಡವರು ಬಡವರೇ ಆಗಿದ್ದಾರೆ, ಧನಿಕರು ಧನಿಕರೇ ಆಗಿದ್ದಾರೆ ಎಂದು ಹೇಳಿ ಆರೋಪಣೆ ಮಾಡಿದ್ದಾರೆ. ಕಣ್ಣಿದ್ದೂ ಕುರುಡರಂತೆ ವರ್ತಿಸುತ್ತೇವೆ ಅನ್ನತಕ್ಕವರಿಗೆ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಎಲ್ಲಾ ಕೆಲಸಗಳನ್ನೂ ಕೂಡ ಬಣ್ಣದ ಗಾಜಿನ ಮುಖಾಂತರ ನೋಡತಕ್ಕವರಿಗೆ ನಾವು ವಿಷಾದಪಡಬೇಕಾಗಿದೆ. ಈ 20 ವರ್ಷಗಳಲ್ಲಿ ದೇಶದಲ್ಲಿ ಅಸಾಧಾರಣವಾದಂತಹ ಪ್ರಗತಿಯನ್ನು ಸಾಧಿಸಲಾಗಿದೆ. ವಿವಿಧ ಕ್ಷೇತ್ರಗಳಲ್ಲಿ ಹೆಚ್ಚಿನ ಚಟುವಟಿಕೆಯನ್ನು, ಚೇತನವನ್ನು, ಸ್ಫೂರ್ತಿಯನ್ನು ನಾವು ಗುರುತಿಸಬಹುದಾಗಿದೆ. ಎಲ್ಲಾ ಇಲಾಖೆಗಳಿಗೂ ಸಂಬಂಧಪಟ್ಟಂತೆ ಅಂಕಿಸಂಖ್ಯೆಗಳನ್ನು ಸಭೆಯ ಮುಂದೆ ಮುಂಡಿಸುವುದಕ್ಕೆ ನನಗೆ ಸಾಕಾದಷ್ಟು ಕಾಲಾವಕಾಶ ಇಲ್ಲ. ವಿದ್ಯಾಭ್ಯಾಸದ ಕ್ಷೇತ್ರವನ್ನೇ ತೆಗೆದುಕೊಂಡರೆ 10 ವರ್ಷಗಳ ಹಿಂದೆ ಕೇವಲ ಹತ್ತು ಸಾವಿರ ಇದ್ದಂಥ ಪ್ರಾಥಮಿಕ ಪಾಠಶಾಲೆಗಳು ಇಂದು 32 ಸಾವಿರಕ್ಕೆ ಹೋಗಿದೆ. ಕೇವಲ 500 ಇದ್ದಂಥ ಪ್ರೌಢಶಾಲೆಗಳು ಇಂದು 1,500 ಆಗಿವೆ. ಹತ್ತು ವರ್ಷಗಳ ಹಿಂದೆ ಕೇವಲ 38 ಲಕ್ಷ ಟನ್ ಆಹಾರ ಉತ್ಪಾದನೆ ಮಾಡುತ್ತಾ ಇದ್ದರೆ ಇಂದು 48 ಲಕ್ಷ ಟನ್, ಎಂದರೆ ಹತ್ತು ಲಕ್ಷ ಟನ್ ಆಹಾರ ಉತ್ಪಾದನೆಯನ್ನು ಹೆಚ್ಚಿಸಲಾಗಿದೆ. ಮನುಷ್ಯರ ಆಯುಸ್ಸಿನ ಪ್ರಮಾಣದಲ್ಲಿ 25 ವರ್ಷದಿಂದ 48ರ ವರೆಗೂ ಹೆಚ್ಚಿಸಲಾಗಿದೆ. ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲಾಗಿದೆ. ಜನರ ಆರ್ಥಿಕ ಸ್ಥಿತಿ ಸುಧಾರಿಸಲ್ಪಟ್ಟಿದೆ. ರಾಜಕೀಯ ಕ್ಷೇತ್ರದಲ್ಲಿ, ಆರ್ಥಿಕ ಕ್ಷೇತ್ರದಲ್ಲಿ ಹೆಚ್ಚಿನ ಚಟುವಟಿಕೆಯನ್ನು ನಾವು ಕಾಣಬಹುದಾಗಿದೆ. ಜನರು ಸುಖ ಸಂತೋಷದಿಂದ ಜೀವನವಾಡುತ್ತಾ ಇದ್ದಾರೆ, ಸುಖೀರಾಜ್ಯ ಸ್ಥಾಪನೆಯತ್ತ ನಾವು ಸುಖವಾಗಿ ಸಾಗುತ್ತಾ ಇದ್ದೇವೆ. ಎಲ್ಲವನ್ನೂ ಸಾಧಿಸಿದ್ದೇವೆ ಎಂದು ಹೇಳತಕ್ಕ ಉದ್ಧಟತನಕ್ಕೆ ನಾನು ಕೈಹಾಕದಿದ್ದರೂ ಕೂಡ ಹೆಚ್ಚಿನ ಪ್ರಮಾಣದ ಪ್ರಗತಿಯನ್ನು ಸಾಧಿಸಿದ್ದೇವೆ ಎಂದು ಹೇಳುವುದಕ್ಕೆ ನನಗೆ ಸಂತೋಷವಾಗುತ್ತದೆ. ಜನರ ಮೆಚ್ಚುಗೆಯನ್ನು ಗಳಿಸುವುದಕ್ಕೆ ಮಾತನಾಡುವುದು ಸುಲಭ. ಆದರ ಅದು ತಿರುಗು ಬಾಣವಾದೀತು. ಏಕೆಂದರೆ ಆ ವಿಷಯಗಳಿಗೆ ಮಾತನಾಡತಕ್ಕವರಿಗೆ ಇರುವುದು ಅತ್ಯವಶ್ಯಕ, ನಾವು ಖಾಯಂ ಆಗಿ ಈ ಸ್ಥಾನದಲ್ಲಿ ಇರುತ್ತೇವೆ ಅಂತ ಹೇಳುವಂತಹ ಉದ್ಧಟತನ ನನಗೆ ಇಲ್ಲ. ಈ ಕಾಲ ಬದಲಾವಣೆಯಾಗಬಹುದು, ಈಗ ಯಾರು ನಮಗೆ ಎದುರಾಳಿಗಳಾಗಿದ್ದು ಭಾಷಣಗಳನ್ನು ಮಾಡುತ್ತಾ ಇದ್ದಾರೋ ಅವರೇ ಅಧಿಕಾರ ಸೂತ್ರವನ್ನು ಹಿಡಿಯತಕ್ಕ ಕಾಲ ಬರಬಹುದು. ಈಗ ಅವರು ಮಾಡಿರತಕ್ಕ ಭಾಷಣಗಳು ತಿರುಗುಬಾಣವಾಗಿ ಅವರಿಗೆ ಹೆಚ್ಚಿನ ಕಷ್ಟವನ್ನು ಕೊಡುತ್ತಾವು. ಆದ್ದರಿಂದ ಭಾಷಣ ಮಾಡುವಾಗ ಬರೀ ಓಟುಗಳಿಸತಕ್ಕ ದೃಷ್ಟಿಯಿಂದ ಭಾಷಣ ಮಾಡದೇ ವಾಸ್ತವಾಂಶವಾದ ಅಂಕಿಅಂಶಗಳನ್ನು ಎತ್ತಿ ತೋರಿಸುವುದು ಅತ್ಯವಶ್ಯಕ. ಈ ದೃಷ್ಟಿಯಿಂದ ನಾವೆಲ್ಲರೂ ಕೆಲಸ ಮಾಡಬೇಕು, ಇಲ್ಲಿ ನಾವೆಲ್ಲರೂ ಸೇರಿರತಕ್ಕವರು ದೇಶದ ಕಲ್ಯಾಣವನ್ನು ರಾಷ್ಟ್ರದ ಪುನರ್‌ನಿರ್ಮಾಣವನ್ನು ಮಾಡತಕ್ಕ ಕೆಲಸದಲ್ಲಿ ತೊಡಗಿದ್ದೇವೆ. ಒಬ್ಬರೊಡನೆ ಒಬ್ಬರು ಸಹಕರಿಸಿ ಕೆಲಸ ಮಾಡಬೇಕು. ರಚನಾತ್ಮಕ ಟೀಕೆಗೆ ಅವಕಾಶ ಉಂಟು, ಆದರೆ ಯಾವ ಕಾರಣವೂ ಇಲ್ಲದೆ ಟೀಕೆ ಮಾಡುವುದು ಸತ್‌ಸಂಪ್ರದಾಯವಲ್ಲ. ಅದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ ಎಂದು ನನ್ನ ಖಚಿತವಾದ ಅಭಿಪ್ರಾಯ. ಪ್ರಾಸಂಗಿಕವಾಗಿ ಈ ಎರಡು ಮಾತುಗಳನ್ನು ಹೇಳಿ ಕೆಲವು ಇಲಾಖೆಗಳ ವಿಷಯದಲ್ಲಿ ಮಾಡಿರತಕ್ಕ ಆಕ್ಷೇಪಣೆಗಳಿಗೆ ನನ್ನ ಉತ್ತರವನ್ನು ಕೊಡುವುದಕ್ಕೆ ಇಚ್ಛಿಸುತ್ತೇನೆ. ಈ ಸಭೆಯು ಗಮನವನ್ನು ಸೆಳೆದಂತಹ ಬಹಳ ಪ್ರಾಮುಖ್ಯವಾದಂತಹ ಪ್ರಶ್ನೆ ಗ್ರಂಥ ಶಾಲೆಗಳಿಗೆ ತೆಗೆದುಕೊಳ್ಳಬಹುದು ಎಂದು ಇಲಾಖೆಯಿಂದ ಏನು ಒಂದು ನುಕ್ತೀರ್ಪೆ ಹೋಗಿತ್ತು, ಅದರ ವಿಚಾರವಾಗಿ ಕುರಿತು ಆದಂತಹ ಪ್ರಶ್ನೆ. ಆ ಸಂಬಂಧವಾಗಿ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ವೈ. ಎನ್. ಪಾಟೀಲ್‌ರವರು ಗಾಬರಿ ಉಂಟಾಗುವ ರೀತಿಯಲ್ಲಿ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ. ಅವರು ಹೇಳಿರ

ತಕ್ಕ ಕೆಲವು ವಿಷಯಗಳು ಉತ್ಪ್ರೇಕ್ಷೆಯಿಂದ ಕೂಡಿವೆ ಎಂದು ಹೇಳುವುದಕ್ಕೆ ನನಗೆ ವಿಷಾದವಾಗುತ್ತದೆ. ಜನಪದ ಸಾಹಿತ್ಯ ನಮ್ಮ ಸಾಹಿತ್ಯದ ವಿವಿಧ ಪ್ರಾಕಾರಗಳಲ್ಲಿ ಒಂದು ಪ್ರಾತಸ್ಮರ್ಣೀಯತಕ್ಕ ಮತ್ತು ಪ್ರಾಮುಖ್ಯವಾದಂತಹ ಪ್ರಾಕಾರ ಅದನ್ನು ಸಂಗ್ರಹ ಮಾಡುವುದು ಬಹಳ ಕಷ್ಟವಾದಂತಹ ಕೆಲಸ. ದೇಶದ ಮೂಲೆ ಮೂಲೆಗಳಲ್ಲಿ ಜನಪದ ಸಾಹಿತ್ಯವನ್ನು ಸಂಗ್ರಹ ಮಾಡಬೇಕಾದರೆ ಯಾರೊಬ್ಬರೇ ಆದರೂ ವಿಶೇಷವಾಗಿ ಶ್ರಮಪಡಲೇಬೇಕು. ಈ ಕೆಲಸದಲ್ಲಿ ಕೃತಕೃತ್ಯರಾದವರು ಶ್ರೀಮಾನ್ ಕಾ.ರಾ.ಕೃ.ರವರು. ಅವರು ಈ ಕೆಲಸ ಮಾಡಿರುವುದರಲ್ಲಿ ಸಾಹಿತಿಗಳು ಹಾಗೂ ಇವತ್ತು ಪತ್ರಿಕೆಗಳು ಹೆಚ್ಚಿನ ಶ್ಲಾಘನೆಯನ್ನು ಪಡೆದುಕೊಂಡಿದ್ದಾರೆ. ಹಗಲಿರುಳೆನ್ನದೆ, ದೂರವಾಗಲಿ ಹತ್ತಿರವಾಗಲಿ ದೇಶದ ವಿವಿಧ ಭಾಗಗಳಲ್ಲಿ ಸಂಚಾರ ಮಾಡಿ ಈ ಜನಪದ ಸಾಹಿತ್ಯವನ್ನು ಸಂಗ್ರಹಿಸುವುದರಲ್ಲಿ ಅವರು ಹೆಚ್ಚಿನ ಶ್ರಮವನ್ನು ವಹಿಸಿದ್ದಾರೆ. ಈ ಸಾಹಿತ್ಯವನ್ನು ಜನರಿಗೆ ನೀಡುವುದರಲ್ಲಿ ಅವರು ತೋರಿಸಿರತಕ್ಕ ಆಸಕ್ತಿ. ಅವರು ಪಟ್ಟಿರತಕ್ಕ ಶ್ರಮ ಅಸಾಧಾರಣವಾದದ್ದು. ಇದರಲ್ಲಿ ಕೆಲವು ಭಾಗದ ಸಾಹಿತ್ಯ ಅಶ್ಲೀಲವಾಗಿದೆ, ಕೆಲವು ಪುಸ್ತಕಗಳಲ್ಲಿ ನಗ್ನ ಚಿತ್ರ ಇದೆ, ಅಂತಹ ಪುಸ್ತಕಗಳನ್ನು ಹೇಗೆ ಗ್ರಂಥಾಲಯಗಳಿಗೆ ಕೊಂಡುಕೊಳ್ಳುವುದಕ್ಕೆ ಒತ್ತಾಯ ಮಾಡಿದಿರಿ ಎಂಬ ಪ್ರಶ್ನೆಯನ್ನು ಮಾನ್ಯ ಸದಸ್ಯರು ಎತ್ತಿದ್ದಾರೆ. ಕಲೆಯಲ್ಲಿ, ಸಾಹಿತ್ಯದಲ್ಲಿ ಅಶ್ಲೀಲ ಯಾವುದು, ಶೀಲ ಯಾವುದು ಎಂಬುದನ್ನು ತೀರ್ಮಾನಿಸುವುದು ಸುಲಭವಲ್ಲ. ಈ ಜಿಜ್ಞಾಸೆ ತಜ್ಞರಲ್ಲೇ ಇದೆ. ಅವರಲ್ಲೇ ಅಭಿಪ್ರಾಯ ಭೇದ ಇದೆ. ಯಾವುದು ಅಶ್ಲೀಲ ಅಥವಾ ಶೀಲ ಎಂಬುದನ್ನು ಪರಿಹರಿಸುವುದು, ತೀರ್ಮಾನಿಸುವುದು ಕಷ್ಟ, ಅದು ಯಕ್ಷ ಪ್ರಶ್ನೆಯಾಗಿಯೇ ಉಳಿದಿದೆ. ನಮ್ಮ ಜಗತ್ ಪ್ರಸಿದ್ಧವಾದಂತಹ ಶಿಲ್ಪ ಕಲೆಗಳನ್ನು ಹೋಗಿ ನೋಡುವುದಾದರೆ ಇಂದಿಗೂ ಅನೇಕ ನಗ್ನ ಪ್ರತಿಮೆಗಳನ್ನು ನೋಡಬಹುದು, ಅಂದ ಮಾತ್ರಕ್ಕೆ ಅವು ಅಶ್ಲೀಲವಾದವುಗಳು ಅಂತ ಹೇಳುವುದಕ್ಕೆ ಬರುವುದಿಲ್ಲ, ಇದನ್ನು ನಿರ್ಧರ ಮಾಡುವುದು ಕಷ್ಟ. ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಂದೆರಡು ಪುಸ್ತಕಗಳಲ್ಲಿ ನಗ್ನಚಿತ್ರಗಳನ್ನು ಹಾಕಿರುವುದರ ಬಗ್ಗೆ ಅವರು ಆಕ್ಷೇಪಣೆ ಎತ್ತಿದ್ದಾರೆ, ವೈಯಕ್ತಿಕವಾಗಿ ಹೇಳುವುದಾದರೆ ಆ ಚಿತ್ರಗಳು ಅಲ್ಲಿ ಸಂದರ್ಭೋಚಿತವಾಗಿಲ್ಲ ಎಂಬುದು ನನ್ನ ಅಭಿಪ್ರಾಯ. ಆ ಚಿತ್ರಗಳು ಇಲ್ಲದೇ ಇದ್ದರೂ ಕೂಡ ನಡೆಯುತ್ತಾ ಇತ್ತು ಎಂದು ಹೇಳಬಹುದೇ ಹೊರತು ಅವುಗಳನ್ನು ಹಾಕಿರುವುದು ಸಂಪೂರ್ಣವಾಗಿ ತಪ್ಪೇ ಸರಿಯೇ ಅಂತ ಹೇಳುವುದಕ್ಕೆ ಬರುವುದಿಲ್ಲ. ಮತ್ತು ಸುಗ್ರೋಲೆಯನ್ನು ಕಳುಹಿಸಿರತಕ್ಕ ವಿಚಾರದಲ್ಲಿ ದೇಶದ ಎಲ್ಲಾ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳೂ ತೆಗೆದುಕೊಳ್ಳಬೇಕೆಂದು ಸುತ್ತೋಲೆ ಕಳುಹಿಸಲಾಗಿಲ್ಲ, ಕೇವಲ 4-5 ಜಿಲ್ಲೆಗಳಿಗೆ ಮಾತ್ರ ಕಳುಹಿಸಲಾಗಿದೆ. ಕೋರಾರ, ಬೆಂಗಳೂರು, ಮಂಡ್ಯ, ಮೈಸೂರು, ಹಾಸನ ಈ ಜಿಲ್ಲೆಗಳಿಗೆ ಸಂಬಂಧಪಟ್ಟ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳು ಈ ಪುಸ್ತಕಗಳನ್ನು ತೆಗೆದುಕೊಳ್ಳಬಹುದು ಎಂದು ಸುತ್ತೋಲೆಯಲ್ಲಿ ಪ್ರಕಟ ಮಾಡಲಾಗಿದೆ. ಕಡ್ಡಾಯವಾಗಿ ತೆಗೆದುಕೊಳ್ಳಲೇಬೇಕೆಂದು ಒತ್ತಾಯ ಮಾಡಿಲ್ಲ, ಗ್ರಂಥಾಲಯಗಳಿಗೆ ಈ ಪುಸ್ತಕಗಳನ್ನು ತೆಗೆದುಕೊಳ್ಳಬಹುದು ಎಂದು ಸೂಚನೆ ಕೊಟ್ಟಿದ್ದೇವೆ. ಮತ್ತು ಜನಪದ ಸಾಹಿತ್ಯ ಅಕಾಡೆಮಿಯವರು ಇದುವರೆಗೂ ಯಾವ ಪ್ರಾಥಮಿಕ ಪಾಠಶಾಲೆಗಳಿಗೂ ಈ ಪುಸ್ತಕವನ್ನು ಒದಗಿಸಿಲ್ಲ, ಇದು ಇರತಕ್ಕ ಸತ್ಯವಾದ ಸಂಗತಿ. ಮತ್ತು ಈ ಪುಸ್ತಕ ತೆಗೆದುಕೊಳ್ಳದಿದ್ದರೆ ಶಿಕ್ಷಕರ ಸಂಬಳದಿಂದ ಅದನ್ನು ಹಿಡಿಯಲಾಗುತ್ತದೆ ಎಂದು ಸುತ್ತೋಲೆಯಲ್ಲಿ ತಿಳಿಸಿದ್ದಾರೆ ಎಂದು ಮಾನ್ಯ ಸದಸ್ಯರು ಅಭಿಪ್ರಾಯಪಟ್ಟಿದ್ದಾರೆ, ಇದು ನಿಜವಲ್ಲ, ಯಾರು ಪುಸ್ತಕಗಳನ್ನು ತೆಗೆದುಕೊಂಡಿದ್ದಾರೆ ಅವರು ಹಣವನ್ನು ಪಾವತಿ ಮಾಡದಿದ್ದರೆ ಅವರ ಸಂಬಳದಿಂದ ಹಿಡಿದುಕೊಳ್ಳಲಾಗುತ್ತದೆ ಎಂಬ ಸೂಚನೆಯನ್ನು ಕೊಟ್ಟಿದ್ದಾರೆಯೇ ಹೊರತು ಕಡ್ಡಾಯವಾಗಿ ತೆಗೆದುಕೊಳ್ಳಬೇಕು, ತೆಗೆದುಕೊಳ್ಳದೇ ಹೋದರೆ ನಿಮ್ಮ ಸಂಬಳದಿಂದ ಹಿಡಿದುಕೊಳ್ಳುತ್ತೇವೆ ಎಂಬ ಸುತ್ತೋಲೆಯನ್ನು ಕಳುಹಿಸಿಲ್ಲ. ಮಾನ್ಯ ಕಾ. ರಾ. ಕೃ.ರವರು ವಿಶೇಷ ಶ್ರಮವಹಿಸಿ ಈ ಜನಪದ ಸಾಹಿತ್ಯವನ್ನು ನಮ್ಮ ಜನತೆಗೆ ಒದಗಿಸಿಕೊಟ್ಟಿದ್ದಾರೆ. ಜನಪದ ಸಾಹಿತ್ಯ ಹಾಗೂ ನಮ್ಮ ಪ್ರಾಚೀನ ಸಂಸ್ಕೃತಿಯನ್ನು ಅಂದರೆ ಪರಂಪರಾನುಗತವಾಗಿ ಬಂದಂಥ ನಮ್ಮ ಸಂಸ್ಕೃತಿಯನ್ನು ಉಳಿಸಿ ಅದನ್ನು ಬೆಳೆಯುವಂತೆ ಮಾಡುವುದು ನಮ್ಮ ಕರ್ತವ್ಯ ಅದನ್ನು ನಾವು ಉಳಿಸಿಕೊಳ್ಳುವುದಕ್ಕೆ ಈ ದಿವಸ ಪ್ರಯತ್ನ ಮಾಡದಿದ್ದರೆ ಅದು ಮುಂದೆ ಕಣ್ಮರೆಯಾಗಬಹುದು. ಅದನ್ನು ಅವರು ಈ ದಿವಸ ಸಂಗ್ರಹಿಸಿ ದೇಶಕ್ಕೆ ಒಂದು ದೊಡ್ಡ ಉಪಕಾರವನ್ನು ಮಾಡಿದ್ದಾರೆ. ಆದರೆ ಈ ಪುಸ್ತಕಗಳನ್ನು ಗ್ರಂಥಾಲಯಗಳು ಈಗ ತೆಗೆದುಕೊಳ್ಳಕೂಡದೆಂದು ಮತ್ತೊಂದು ಸುತ್ತೋಲೆಯನ್ನು ಕಳುಹಿಸಲಾಗಿದೆ. ಆದರಲ್ಲಿ ಅಂಥ ಆಘಾತವಾಗತಕ್ಕಂಥ ತಪ್ಪುಗಳನ್ನೇನೂ ಮಾಡಿಲ್ಲ. ಆದರೆ ಹಿಂದೆ ಕಳುಹಿಸಿದ್ದ ಆ ಸುತ್ತೋಲೆಯೇನಿತ್ತು, ಅದನ್ನು ಈಗ ಸಧ್ಯಕ್ಕೆ ವಾಪಸ್ಸು ತೆಗೆದುಕೊಳ್ಳಲಾಗಿದೆ. ಇಷ್ಟನ್ನು ನಾನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ತಿಳಿಸಿದರೆ ಅವರು ತೃಪ್ತರಾಗುತ್ತಾರೆಂದು ನಾನು ಭಾವಿಸುತ್ತೇನೆ.

(ಶ್ರೀ ಕೆ. ಎ. ಶಂಕರಗೌಡ)

ಇನ್ನು ನಮ್ಮ ಶಿಕ್ಷಣದ ಬಗ್ಗೆ ಅನೇಕರು ಅನೇಕ ಉಪಯುಕ್ತ ಸಲಹೆಗಳನ್ನು ಮಾಡಿದ್ದಾರೆ. ಸರ್ಕಾರದವರು ಶಿಕ್ಷಣ ಸಂಸ್ಥೆಗಳನ್ನು ವಿಸ್ತಾರ ಮಾಡುತ್ತಿರುವುದರ ಬಗ್ಗೆ ಅನೇಕರು ಶ್ಲಾಘನೆ ಮಾಡಿದ್ದಾರೆ. ಆದರೆ ಅಷ್ಟೇ ಸಾಲದು ಅದರ ಗುಣವನ್ನೂ ಕೂಡ ಉತ್ತಮ ಪಡಿಸಬೇಕೆಂದು ಹೇಳಿದ್ದಾರೆ. ಹಾಗೆ ಅವರು ವ್ಯಕ್ತಪಡಿಸಿದ ವಿಚಾರದಲ್ಲಿ ಸ್ವಲ್ಪಮಟ್ಟಿಗೆ ನಿಜಾಂಶವಿದೆ. ಆದರೆ ಸರ್ಕಾರದವರು ಏನೂ ಇಲ್ಲದಿರುವುದಕ್ಕಿಂತ ಸ್ವಲ್ಪವಾದರೂ ಇರುವುದು ಒಳ್ಳೆಯದು ಅನ್ನುವ ದೃಷ್ಟಿಯಿಂದ ಶಿಕ್ಷಣ ಸಂಸ್ಥೆಗಳನ್ನು ವಿಸ್ತಾರ ಮಾಡಿದ್ದೇವೆ. ಈ ಬಗ್ಗೆ ಜನರಿಂದಲೂ ಆಗಾಗ್ಗೆ ಅನೇಕ ಒತ್ತಾಯಗಳೂ ಬರುತ್ತಿದ್ದವು. ಹಳ್ಳಿಗಳಲ್ಲಿರತಕ್ಕ ಮಕ್ಕಳು ಶಾಲೆಗಳಿಗೆ ಹೋಗುವುದಕ್ಕಾದರೂ ಅಭ್ಯಾಸಮಾಡಿಕೊಳ್ಳಲಿ ಎಂದು ಅವುಗಳನ್ನು ವಿಸ್ತಾರ ಮಾಡಿದ್ದೇವೆ. ಇನ್ನು ಈ ಶಾಲೆಗಳಿಗೆ ಸಾಕಷ್ಟು ಕಟ್ಟಡ, ಲೈಬ್ರೆರಿ ಮತ್ತು ಫರ್ನೀಚರ್ ಇರುವುದಿಲ್ಲ. ಸಾಧ್ಯವಾದ ಮಟ್ಟಿಗೂ ಅವುಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆದರೆ ಹಿಂದಿನ ಕಾಲದಲ್ಲಲ್ಲ ಈಗಿನಂತೆ ಸಾಮೂಹಿಕ ವಿದ್ಯಾಭ್ಯಾಸವಿರಲಿಲ್ಲ. ಹಿಂದಿನ ಕಾಲದಲ್ಲಿ ಯಾರು ವಿದ್ಯಾವಂತರಾಗಿದ್ದರೋ ಅಂಥವರ ಮನೆಗಳಿಗೆ ಹೋಗಿ ವಿದ್ಯಾಭ್ಯಾಸಮಾಡತಕ್ಕ ಪದ್ಧತಿ ಇತ್ತು. ಆ ಕಾಲದಲ್ಲಲ್ಲ ಅಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳು ಇಂಟರ್, ಬಿ. ಎ. ಮತ್ತು ಬಿ. ಎಸ್. ಸಿ. ಪರೀಕ್ಷೆಗಳಲ್ಲಲ್ಲ ಶೇಕಡ 14 ರಿಂದ 17 ರವರೆಗೆ ಮಾತ್ರ ಪರೀಕ್ಷೆಗಳಲ್ಲಿ ಪಾಸಾಗುತ್ತಿದ್ದರು. ಈಗಿನಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಆಗ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ತೇರ್ಗಡೆ ಹೊಂದುತ್ತಿರಲಿಲ್ಲ. ಈಗಿನಂತೆ ಆಗ ಸಾಮೂಹಿಕ ವಿದ್ಯಾಭ್ಯಾಸದ ಪದ್ಧತಿ ಇರಲಿಲ್ಲವಾದ್ದರಿಂದ ಜನರು ಪರೀಕ್ಷೆಗೆ ಕುಳಿತು ಪಾಸಾಗುವುದು ಬಹಳ ಕಷ್ಟವಾಗಿತ್ತು. ಈ ದಿವಸ ಬಹಳ ಜನ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಕುಳಿತು ತೇರ್ಗಡೆಯಾಗುತ್ತಿದ್ದಾರೆ. ವಿದ್ಯಾಭ್ಯಾಸದ ಬಾಬಿನಲ್ಲಿ ಇತ್ತೀಚೆಗೆ ಅನೇಕ ಸುಧಾರಣೆಗಳಾಗಿವೆ. ಇದಕ್ಕಾಗಿ ಹಿಂದೆ ಕೊಠಾರಿ ಆಯೋಗ ಎಂಬ ಒಂದು ಆಯೋಗವನ್ನು ನೇಮಕ ಮಾಡಲಾಗಿತ್ತು. ಅವರು ನಮ್ಮ ವಿದ್ಯಾಭ್ಯಾಸದಲ್ಲಲ್ಲ ಕೈಗೊಳ್ಳಬೇಕಾದ ಅನೇಕ ಸುಧಾರಣೆಗಳನ್ನು ಸಲಹೆಗಳನ್ನು ಮಾಡಿದ್ದಾರೆ. ಆ ಪ್ರಕ್ಕೆ ಅನೇಕ ಆ ಸಮಿತಿಯ ಶಿಫಾರ್ಸುಗಳನ್ನು ಕಾರ್ಯರೂಪಕ್ಕೆ ತರಲಾಗಿದೆ. ಇಂದು ಹೆಚ್ಚಿನ ಸಂಖ್ಯೆಯಲ್ಲಲ್ಲ ಬಾಲಕ ಬಾಲಕಿಯರಿಗೆ ಶಿಕ್ಷಣವನ್ನು ಕೊಡಲಾಗುತ್ತಿದೆ. ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸದಲ್ಲಲ್ಲ ಹೆಚ್ಚಿನ ಆಸಕ್ತಿಯುಂಟಾಗುವಂತೆ ಮಾಡುವುದಕ್ಕಾಗಿ ಅನೇಕ ಮಕ್ಕಳಿಗೆ ಪುಸ್ತಕ ಸ್ಲೇಟು ಇತ್ಯಾದಿಗಳನ್ನೆಲಾ ಕೊಡಲಾಗುತ್ತಿದೆ. ಯೂನಿಫಾರಂಗಳನ್ನೂ ಸಹಾ ಕೊಡಲಾಗುತ್ತಿದೆ. ಅಷ್ಟೇ ಅಲ್ಲದೆ ಬಡಹುಡುಗರಿಗೆ ಮಧ್ಯಾಹ್ನದ ಹೊತ್ತಿನಲ್ಲಲ್ಲ ಮಿಡ್ಡೇಮೀಲನ್ನು ಕೊಡತಕ್ಕ ಬಗ್ಗೆ ಒಂದು ವ್ಯವಸ್ಥೆಯನ್ನು ಸುಮಾರು 10 ಲಕ್ಷ ಮಕ್ಕಳಿಗೆ ಮಾಡಲಾಗಿತ್ತು. ಈಗ ಆ ಸಂಖ್ಯೆ 11 ಲಕ್ಷಕ್ಕೇರಿದೆ. ಅಷ್ಟೂ ಜನರಿಗೂ ಮಿಡ್ಡೇಮೀಲನ್ನು ಒದಗಿಸುವುದಕ್ಕೆ ಏರ್ಪಾಡನ್ನು ಮಾಡಿದ್ದೇವೆ. ಇದೇ ರೀತಿಯಾಗಿ ಇನ್ನು ಆ ನರ್ಸರಿ ಶಾಲೆಗಳಲ್ಲಿರತಕ್ಕ ನಾಲ್ಕುಸಾವಿರ ಮಕ್ಕಳಿಗೂ ಈ ಸೌಕರ್ಯವನ್ನು ಒದಗಿಸಬೇಕೆಂದು ಪರಿಶೀಲನೆ ಮಾಡುತ್ತಿದ್ದೇವೆ. ಇನ್ನು ಮುಂದಕ್ಕೆ ಹೊಸ ಪ್ರಾರಂಭ ಮಾಡಿರತಕ್ಕ ವಿದ್ಯಾಶಾಲೆಗಳ ಗುಣವನ್ನು ಹೆಚ್ಚಿಸುವ ಸಲುವಾಗಿ ಇನ್ನು ಮುಂದೆ ಶಿಕ್ಷಣ ಸಂಸ್ಥೆಗಳನ್ನು ಬೆಳೆಸುವುದನ್ನು ತಡೆಹಿಡಿಯಬೇಕೆಂದು ತೀರ್ಮಾನ ಮಾಡಿದ್ದೇವೆ. ಈಗ ಮಾಡಿರುವುದನ್ನು ಉತ್ತಮಪಡಿಸಿ ಮುಂದಕ್ಕೆ ಸಾಗಬೇಕೆಂಬ ಉದ್ದೇಶ ಸರ್ಕಾರಕ್ಕಿದೆ.

ಇನ್ನು ವ್ಯವಸಾಯದ ವಿಚಾರ: ನಮ್ಮ ವ್ಯವಸಾಯದ ಇಲಾಖೆಯವರು ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆಂದು ಹೇಳಲು ನಾನು ಹೆಮ್ಮೆಪಡುತ್ತೇನೆ. ಕಳೆದ ಹತ್ತುವರ್ಷಗಳಿಂದಲೂ ನಾವು ಸಾಧಿಸಿರತಕ್ಕ ಪ್ರಗತಿ ಅಂದರೆ, ಆಹಾರ ಧಾನ್ಯಗಳನ್ನು ಉತ್ಪನ್ನ ಮಾಡತಕ್ಕ ವಿಶೆಯಲ್ಲಲ್ಲ ನಾವು 38 ಲಕ್ಷ ಟನ್ ಆಹಾರ ಸಾಮಗ್ರಿಗಳನ್ನು ಬೆಳೆಯುತ್ತಿದ್ದೆವು. ಈಗ ಅದನ್ನು 48 ಲಕ್ಷ ಟನ್ನಿಗೆ ಹೆಚ್ಚಿಸಲಾಗಿದೆ. ನಮ್ಮ ವ್ಯವಸಾಯದ ಇಲಾಖೆಯವರು ಅಷ್ಟು ಕಷ್ಟಪಟ್ಟು ಈ ಬಾಬಿನಲ್ಲಲ್ಲ ಶ್ರಮಿಸದೆ ಇದ್ದಿದ್ದರೆ ನಾವು ಇಷ್ಟನ್ನು ಬೆಳೆಯುವುದಕ್ಕೆ ಆಗುತ್ತಿರಲಿಲ್ಲ. ಆದುದರಿಂದ ನಮ್ಮಲ್ಲಲ್ಲ ಈ ದಿವಸ ಆಗಿರತಕ್ಕ ಹೆಚ್ಚು ಉತ್ಪತ್ತಿಗೆ ಇವರೇ ಕಾರಣ ಎಂದು ಹೇಳುತ್ತೇನೆ. ಈ ದಿವಸ ನಮ್ಮ ವ್ಯವಸಾಯದ ವಿಶ್ವವಿದ್ಯಾನಿಲಯದವರೂ ಮತ್ತು ವ್ಯವಸಾಯ ಖಾತೆಯವರೂ ಒಂದು ಹೊಂದಾವಣಿಕೆಯಿಂದ ಕೆಲಸ ಮಾಡಿ ನಮ್ಮ ಆಹಾರ ಉತ್ಪಾದನೆಯನ್ನು ಹೆಚ್ಚಿಸಿರತಕ್ಕದ್ದು ವ್ಯವಸಾಯದ ಬಾಬಿನಲ್ಲಲ್ಲ ಇದೊಂದು ಮೈಲಿಗಲ್ಲು. ಆದರೆ ಕೆಲವರು ವ್ಯವಸಾಯದ ಖಾತೆಗೂ ಮತ್ತು ಶಿಕ್ಷಣ ಸಂಶೋಧನೆ ನಡೆಸತಕ್ಕ ಕಾರ್ಯೇಟಿನವರಿಗೂ ಭಿನ್ನಾಭಿಪ್ರಾಯಗಳಿವೆ ಎಂದು ಕೆಲವರು ಹೇಳಿದರು. ಆದರೆ ಅಲ್ಲಲ್ಲ ಕಾರ್ಯಭಾರ ಮಾಡತಕ್ಕ ಕಾಲದಲ್ಲಲ್ಲ ವಿಧಿನಿಯಮಗಳ ವ್ಯಾಖ್ಯಾನದಲ್ಲಲ್ಲ ಭಿನ್ನಾಭಿಪ್ರಾಯ ಇರಬಹುದು. ಆದರೆ ಅವರು ಆ ಒಂದು ಹೊಂದಾವಣಿಕೆಯಲ್ಲಲ್ಲ ಕೆಲಸ

ಮಾಡುತ್ತಿದ್ದರೆ ಮುಂದೆ ಉತ್ತರೋತ್ತರ ಆ ಭನ್ನಾಭಿಪ್ರಾಯಗಳು ಸರಿಹೋಗಬಹುದು ಎಂದು ನನಗೆ ಅನಿಸುತ್ತಿದೆ. ಅದುದರಿಂದ ಅಲ್ಲಿ ಇಂತ ಆತಂಕಗಳೇನೂ ಇರುವುದಿಲ್ಲ ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇತ್ತೀಚೆಗೆ ನಮ್ಮ ವ್ಯವಸಾಯಾಭಿವೃದ್ಧಿಯ ಬಗ್ಗೆ ರೈತರಿಗೆ ಒದಗಿಸಬೇಕಾದ ಅನೇಕ ಸೌಲಭ್ಯಗಳನ್ನು ಒದಗಿಸುವುದಕ್ಕೆ ತಕ್ಕ ವ್ಯವಸ್ಥೆಯನ್ನು ಕೈಗೊಳ್ಳಲಾಗಿದೆ. ಮುಖ್ಯವಾಗಿ ವ್ಯವಸಾಯಗಾರರಿಗೆ ಬೇಕಾದ ಬಂಡವಾಳ ಅವರಿಗೆ ಬೇಕಾದ ಕೃತಕ ಗೊಬ್ಬರ ಹಾಗೂ ಅವರ ಬೆಳೆಗೆ ತಗಲುತಕ್ಕ ಕ್ರಿಮಿನಾಶ ಮಾಡತಕ್ಕ ಔಷಧಿಗಳು ಮತ್ತು ಅವರಿಗೆ ಅಗತ್ಯವಾಗಿ ಬೇಕಾದ ನೀರಾವರಿ ಸೌಲಭ್ಯಗಳು ಅಂದರೆ ಕೆರೆಕಟ್ಟೆಗಳು ಮತ್ತು ಬಾವಿಗಳು ಇವುಗಳನ್ನು ಒದಗಿಸುವುದಕ್ಕೆ ವ್ಯವಸ್ಥೆಮಾಡಲಾಗಿದೆ. ಇದರಿಂದ ಎಲ್ಲ ಕ್ಷೇತ್ರಗಳಲ್ಲೂ ನಮ್ಮ ವ್ಯವಸಾಯಾಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗಿದೆ. ರೈತರಿಗೆ ಅಗತ್ಯವಾಗಿ ಬೇಕಾದ ಅಲ್ಪಾವಧಿ ಸಾಲಗಳನ್ನು ಕೊಡುವುದಕ್ಕಾಗಿ 27 ಕೋಟಿ ರೂಪಾಯಿಗಳನ್ನೂ ಮತ್ತು ಮಧ್ಯಮಾವಧಿಯ ಸಾಲಕ್ಕಾಗಿ 4 ಕೋಟಿ ರೂಪಾಯಿಗಳನ್ನೂ ಒದಗಿಸಲಾಗಿದೆ. ಹೀಗೆ ಇಲ್ಲಿಯವರೆಗೂ ಸರ್ಕಾರದವರು ರೈತನ ವ್ಯವಸಾಯದ ಬಾಬಿಗೆ ಅವಶ್ಯಕವಾಗಿ ಬೇಕಾಗಿದ್ದ ಬಂಡವಾಳವನ್ನು ಒದಗಿಸಿರುವುದರಲ್ಲಿ ಈ ದಿವಸ ದೇಶದಲ್ಲಿ ವ್ಯವಸಾಯದಲ್ಲಿ ತೊಡಗಿರತಕ್ಕ ಜನ ಸಂಖೆಯಲ್ಲಿ ಸುಮಾರು ಶೇಕಡ 30—40 ಭಾಗದಷ್ಟು ಜನರು ಈ ಸಾಲದ ಸೌಲಭ್ಯಕ್ಕೆ ಒಳಗಾಗಿದ್ದಾರೆ. ಇನ್ನುಳಿದ ಶೇಕಡ60—70 ರಷ್ಟು ಕುಟುಂಬಗಳನ್ನು ಈ ಸೌಲಭ್ಯದ ಚೌಕಟ್ಟಿನಲ್ಲಿತರುವುದಕ್ಕೆ ಎಲ್ಲ ಪ್ರಯತ್ನಗಳನ್ನೂ ಮಾಡಲಾಗುತ್ತಿದೆ. ನಮ್ಮ ಮುಂದೆ ಬರಲಿರುವ ನಾಲ್ಕನೇ ಪಂಚವಾರ್ಷಿಕ ಯೋಜನೆ ಯಲ್ಲಿ ಆ ಶೇಕಡ 60-70 ರಷ್ಟು ಉಳಿದಿರತಕ್ಕ ಕುಟುಂಬಗಳನ್ನೂ ಈ ಸೌಲಭ್ಯದ ಚೌಕಟ್ಟಿನಲ್ಲಿ ತರುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೆ ನಮ್ಮ ರೈತರಿಗೆ ಹೆಚ್ಚಿನ ಪ್ರಮಾಣದಲ್ಲಿ ಪಂಪ್ ಸೆಟ್ಟುಗಳನ್ನು ಒದಗಿಸಲಾಗಿದೆ. ಹಾಗೇ ಕೃತಕ ಗೊಬ್ಬರವನ್ನೂ ಒದಗಿಸಲಾಗುತ್ತಿದೆ. ಕ್ರಿಮಿನಾಶಕ ಔಷಧಿಗಳನ್ನು ಕೊಡಲಾಗುತ್ತಿದೆ. ಸಾಲವನ್ನೂ ಒದಗಿಸಲಾಗುತ್ತಿದೆ. ಹೀಗೆ ಅವರಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನೂ ಒದಗಿಸುತ್ತಿರುವುದರಿಂದ ಈ ದಿವಸ ನಮ್ಮ ದೇಶದಲ್ಲಿ ವ್ಯವಸಾಯದ ಉತ್ಪನ್ನ ಹೆಚ್ಚಿದೆ. ನಮ್ಮ ದೇಶದಲ್ಲರತಕ್ಕ ಆ ರೈತನ ಆರ್ಥಿಕ ಪರಿಸ್ಥಿತಿ ಉತ್ತಮವಾಗದ ಏನಾ ದೇಶದ ಆರ್ಥಿಕ ಪರಿಸ್ಥಿತಿ ಉತ್ತಮಾವಾಗುವುದಿಲ್ಲ. ಇದಕ್ಕೆರಲ್ಲಾ ಒಂದು ಕ್ರಾಂತಿಕಾರಕವಾದ ರೀತಿಯಲ್ಲಿ ನಮ್ಮ ವ್ಯವಸಾಯ ಪದ್ಧತಿಗಳುಬದಲಾವಣೆಯಾಗಬೇಕು. ನಮ್ಮ ದೇಶ ವ್ಯವಸಾಯಕ್ಕೆ ಪ್ರಾಧಾನ್ಯವಾದದ್ದು. ಅದುದರಿಂದ ಸರ್ಕಾರದವರು ಈ ದಿಶೆಯಲ್ಲಿ ಎಲ ಕಾರ್ಯಕ್ರಮಗಳನ್ನೂ ಕೈಗೊಂಡಿದ್ದಾರೆ. ಇನ್ನು ಮುಂದೆ ನಮ್ಮ ರೈತರು ಒಂದು ಸುಧಾರಿತ ರೀತಿಯಲ್ಲಿ ಕೆಲಸ ಮಾಡಬೇಕು. ಆದರೆ ಈ ದಿವಸ ರೈತನ ಶ್ರಮ ಜಾಸ್ತಿ ಇರುತ್ತೆ.

ನಾವು ನಮ್ಮ ದೇಶದಲ್ಲಿ ಉತ್ತಮ ತಳಿ ಬೀಜವನ್ನು ಉತ್ಪತ್ತಿಮಾಡತಕ್ಕ ಕಾರ್ಯದಲ್ಲಿ ಸಫಲರಾಗಿದ್ದೇವೆ. ಈ ಹೈಬ್ರಿಡ್ ಜವಾರ್ ಇತ್ಯಾದಿ ಬೀಜಗಳೇನಿವೆ ಅವುಗಳನ್ನೂ ಸಹಾ ನಾವು ದಾಟಿ ಹೋಗಿದ್ದೇವೆ. ನಾವು ಬರಿ ಆ ಗುರಿಯನ್ನು ಮುಟ್ಟಿರುವುದು ಅಷ್ಟೇ ಅಲ್ಲ. ಅದನ್ನು ದಾಟಿ ಇನ್ನೂ ಮುಂದೆ ಹೋಗಿದ್ದೇವೆ. ಆದುದರಿಂದ ಈ ಬಾಬಿನಲ್ಲಿ ನಾವು ಹೆಚ್ಚಿನ ಜಯವನ್ನು ಗಳಿಸಿದ್ದೇವೆ. ಈ ಸಲ ನಾವು ಸುಮಾರು ½ ಲಕ್ಷ ಎಕರೆಗಳಲ್ಲಿ ಹೈಬ್ರಿಡ್ ಜವಾರನ್ನು ಬೆಳೆಸಲು ಸಂಕಲ್ಪಮಾಡಿದ್ದೇವೆ.

10-00 A.M.

ಹೀಗೆ ವ್ಯವಸಾಯ ಕ್ಷೇತ್ರದಲ್ಲಿ ಹೆಚ್ಚಿನ ಅಭಿವೃದ್ಧಿಯನ್ನು ಸಾಧಿಸುತ್ತಿದ್ದರೂ ಕೂಡ ಈಗ ಇನ್ನೂ ಆಹಾರಭಾವ ಏಕೆ ಇದೆಯೆನ್ನುವುದನ್ನು ವಿಮರ್ಶೆಮಾಡಬೇಕಾಗಿದೆ. ವ್ಯವಸಾಯೋತ್ಪನ್ನ ಯಾವ ಪ್ರಮಾಣದಲ್ಲಿ ಹೆಚ್ಚಾಗುತ್ತಿದೆಯೋ ಅದಕ್ಕೆ ದ್ವಿಗುಣವಾಗಿ ನಮ್ಮ ಜನಸಂಖ್ಯೆ ಹೆಚ್ಚಾಗುತ್ತಿದೆ. ಆದ್ದರಿಂದ ಇದನ್ನು ಏಕಕಾಲದಲ್ಲಿ ಪರಿಶೀಲಿಸಬೇಕು. ಒಂದು ಕಡೆ ಆಹಾರಪದಾರ್ಥಗಳನ್ನು ಹೆಚ್ಚಿಸಬೇಕು, ಮತ್ತೊಂದು ಕಡೆ ಜನನನಿಯಂತ್ರಣವನ್ನು ಜಾರಿಗೆ ತರಬೇಕು. ಏಕೆಂದರೆ ಈಗ ಮಕ್ಕಳ ಸಂಖ್ಯೆ ಜಾಸ್ತಿಯಾಗುತ್ತಿದೆ. ತಿನ್ನುತ್ತಾ ಇರುವ ಬಾಯಿಗಳು ಹೆಚ್ಚಾಗುತ್ತಿವೆ. ಆದ್ದರಿಂದಲೇ ಎಷ್ಟು ಆಹಾರ ಬೇಕೋ ಅಷ್ಟನ್ನು ಒದಗಿಸಲಕ್ಕಾಗಲಲ್ಲ. ಜನನನಿಯಂತ್ರಣ ಕಾರ್ಯವನ್ನು ಅದಷ್ಟು ಜಾಗ್ರತೆ ಹೆಚ್ಚು ಪರಿಣಾಮಕಾರಿಯಾದಂಥ ರೀತಿಯಲ್ಲಿ ಜಾರಿಯಲ್ಲಿ ತರುವುದು ಅವಶ್ಯಕ. ಹೀಗೆ ಎಲ್ಲಾ ದೇಶಗಳಲ್ಲಿಯೂ ಈಗ ನಡೆಯುತ್ತಿದೆ. ಇಲ್ಲಿ ಅನೇಕ ಇರಾಖೆಗಳ ಬಗ್ಗೆ ಮಾನ್ಯ ಸದಸ್ಯರು ಅನೇಕರು ಉಪಯುಕ್ತವಾದ ಸಲಹೆಗಳನ್ನು

(ಶ್ರೀ ಕೆ. ಎ. ಶಂಕರಗೌಡ)

ಕೊಟ್ಟಿದ್ದಾರೆ. ಅವರ ಆ ನಲಹೆಗಳಿಗಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ಅವರೆಲ್ಲರಿಗೂ ನನ್ನ ವಂದನೆಗಳನ್ನು ಅರ್ಪಿಸಿ ಇಷ್ಟು ಮಾತುಗಳನ್ನು ಹೇಳಲು ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪೈ. ಎಸ್. ಪಾಟೀಲ್.—ಮಾನ್ಯ ಮಂತ್ರಿಗಳು ಸುತ್ತೋಲೆಯನ್ನು ಕಳುಹಿಸಿದ್ದು ನಿಜವೆಂದು ಹೇಳಿದರು, ಅವರಿಗೆ ನಾನು ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಜನಪದ ಸಾಹಿತ್ಯ ಅಕಾಡೆಮಿಯವರು ಹೋದವರ್ಷ ಆದನ್ನು ಒತ್ತಾಯಮಾಡಲಿಲ್ಲವೆಂದು ಹೇಳಿದರು. ಅದರ ಬಗ್ಗೆ ಒಂದು ಆರ್ಡರ್ ಕಾಪಿ ಇದೆ. ಅದನ್ನು ಬೇಕಾದರೆ ಓದುತ್ತೇನೆ. ಅಂದಮೇಲೆ ಅವರು ಒತ್ತಾಯ ಮಾಡಲಿಲ್ಲವೆಂದು ಹೇಳಿದರೆ ಹೇಗೆ ?

ಶ್ರೀ ಕೆ. ಎ. ಶಂಕರಗೌಡ.—ನುತ್ತೋಲೆ ಕೊಟ್ಟಿರುವುದು ನಿಜ. ಆದರೆ ಪುಸ್ತಕಗಳನ್ನು ತೆಗೆದುಕೊಳ್ಳದಿದ್ದರೆ, ನಿಮ್ಮ ಸಂಬಳದಲ್ಲಿ ಹಿಡಿಯುತ್ತೇವೆಂದು ಹೇಳಿದ್ದು ನಿಜವಲ್ಲ.

ಶ್ರೀ ಪೈ. ಎಸ್. ಪಾಟೀಲ್.—ಯಾರು ತೆಗೆದುಕೊಂಡಿಲ್ಲವೋ ಅವರ ಬಗ್ಗೆ ಡಿ. ಪಿ. ಐ. ಯವರು ಡಿ. ಇ. ಓ. ಗೆ ಪರ್ಸನಲ್ ಆಗಿ ಭೇಟಿಮಾಡಿ ರಿಪೋರ್ಟ್ ಕೊಡಬೇಕೆಂದು ಹೇಳಿದ್ದಾರೆ. ಹಿಂದಿನ ದಿವಸ ಡಿ. ಪಿ. ಐ. ಯವರು ಹೊರಡಿಸಿದ ಆರ್ಡರ್ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ 16-3-1968 ನೇ ತಾರೀಖು ಬಂದಿತ್ತು. ಡಿ. ಪಿ. ಐ. ಅವರ ಆರ್ಡರ್ 14-3-1968 ರಲ್ಲಿಯೇ ಹೊರಬಿತ್ತು. ಅಂದರೆ ಕೆಲವು ಜನರರ್ ಬುಕ್ಸ್ ರೆಫರೆನ್ಸ್‌ಗೆ ಬೇಕಾಗಿರುತ್ತದೆ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಯಾವ ವರ್ಗಕ್ಕೆ ಯಾವ ಕ್ಲಾಸಿಗೆ ರೆಫರನ್ಸ್ ಬುಕ್ಸ್ ಬೇಕಾಗಿರುತ್ತದೆ ? ಅನೇಕ ಶಾಲೆಗಳಲ್ಲಿ ಡಿಕ್ಷನರಿಗಳೇ ಇಲ್ಲ, ಎನ್‌ಸೈಕ್ಲೋಪೀಡಿಯಾ ಇಲ್ಲ, ಗ್ಲೋಬ್ಸ್, ಭೂಪಟಗಳೂ ಇಲ್ಲ. ಪ್ರತಿಯೊಂದು ಶಾಲೆಗೂ ಡಿಕ್ಷನರಿಯನ್ನು ರೆಫರೆನ್ಸ್ ಬುಕ್ ಎಂದು ಕೊಡಬೇಕು. ಅನೇಕ ಸಾಹಿತಿಗಳು ಜನಪದ ಸಾಹಿತ್ಯವನ್ನು ಕೊಟ್ಟಿದ್ದಾರೆ. ಜನಪದದಲ್ಲಿಯೂ ಶ್ರೇಷ್ಠ ಸಾಹಿತ್ಯವಿದೆ. ಇಂತಹ ಪುಸ್ತಕಗಳಿಗೆ ನಾವು ಹೆಚ್ಚು ಸಹಾಯಮಾಡಬೇಕು. ರಿಸರ್ಚ್ ಮಾಡಬೇಕು, ಹೆಚ್ಚಿನ ರೊಕ್ಕ ಕೊಡಬೇಕು. ಆದರೆ ನಮ್ಮಲ್ಲಿರುವ ಸಾಹಿತಿಗಳ ಬಗ್ಗೆ ಎಷ್ಟೋ ಭಿನ್ನಾಭಿಪ್ರಾಯಗಳಿದ್ದರೂ ಕೂಡ ಗಾನನುಧೆಯನ್ನು ನಂಗ್ರಹಮಾಡುವಂಥಾದ್ದು ಬಹಳ ಒಳ್ಳೆಯದು. ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಪ್ರೋತ್ಸಾಹಕರವಾದ ದೃಷ್ಟಿಯಿಂದ ಅದನ್ನು ತೆಗೆದುಕೊಳ್ಳಬಹುದು. ಅಂತಹ ಪುಸ್ತಕಗಳು ನಮ್ಮಲ್ಲಿ ಕೆಲವು ಇರಬಹುದು. ಪ್ರೈಮರಿ ಮತ್ತು ಮಿಡರ್‌ಸ್ಕೂಲುಗಳ ಪುಸ್ತಕಗಳು ಅಂತಹವು ಇಲ್ಲವೆಂದು ಹೇಳುತ್ತಾರೆ.

ಶ್ರೀ ಕೆ. ಎ. ಶಂಕರಗೌಡ.—ಇದುವರೆಗೂ ಅಂತಹ ಪುಸ್ತಕಗಳನ್ನು ಯಾವ ಪ್ರೈಮರಿ ಸ್ಕೂಲಿಗೂ ಕಳುಹಿಸಿಲಲ್ಲ.

ಶ್ರೀ ಪೈ. ಎಸ್. ಪಾಟೀಲ್. —ಮೆಡಿಕರ್ ಸ್ಕೂಲಿಗೆ ಕಳುಹಿಸಿದ್ದೀರಿ ಅಲ್ಲವೇ ?

ಶ್ರೀ ಕೆ. ಎ. ಶಂಕರಗೌಡ.—ಮೆಡಿಕರ್ ಸ್ಕೂಲಿಗೆ ಕಳುಹಿಸಿದೆ.

ಶ್ರೀ ಪೈ. ಎಸ್. ಪಾಟೀಲ್.—ಅಲ್ಲಿನ ಚಿತ್ರಗಳಿಗೂ ಅವರ ಕವನಗಳಿಗೂ ಬಹಳ ವಿಚಿತ್ರ ವಾಗಿದೆ. ''ಜೇನು ಹುಳ'' ಪುಸ್ತಕವನ್ನು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಜಿ. ವಿ. ಆಂಜನಪ್ಪ.—ಈಗ ಒಂದು ಕ್ಲಾರಿಫಿಕೇಷನ್. 10 ವರ್ಷಗಳ ಹಿಂದೆ 38 ಲಕ್ಷ ಟನ್‌ಗಳಷ್ಟು ಧಾನ್ಯವಿದ್ದುದು ಈಗ 48 ಟನ್‌ಗಳಷ್ಟು ಆಗಿದೆ. 10 ವರ್ಷಗಳ ಹಿಂದೆ ಈ ದೇಶದಲ್ಲಿ ಆಹಾರಕೊರತೆ ಯಾವರೀತಿ ಇತ್ತು, 10 ವರ್ಷಗಳಾದ ಮೇಲೆ ಎಷ್ಟು ಇದೆಯೆಂಬುದನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀ ಕೆ. ಎ. ಶಂಕರಗೌಡ.—10 ವರ್ಷಗಳ ಹಿಂದೆ ಅಷ್ಟು ಆಹಾರ ಕೊರತೆ ಇರಲಿಲ್ಲ. ಈಗ ಅದರ 2 ರಷ್ಟು ಇರಬೇಕು. ಕಾರಣ ಜನನಂಖ್ಯೆ ಜಾಸ್ತಿಯಾಗಿದೆ. ತಮಗೆ 7—8 ಜನ ಮಕ್ಕಳು ಇರಬಹುದು.

ಶ್ರೀ ಜಿ. ವಿ. ಆಂಜನಪ್ಪ.—ನನಗೆ ಒಬ್ಬನೇ ಇರುವುದು.

ಶ್ರೀ ಪೈ. ಎಸ್. ಪಾಟೀಲ್.—ಕೆಲವು ರೆಫೆರೆನ್ಸ್ ಬುಕ್ಸನ್ನು ಮೆಡಿಕರ್ ಸ್ಕೂಲಿನಲ್ಲಡುವುದಕ್ಕೆ ಯೋಗ್ಯವಲ್ಲ. ಅನೇಕ objections ಕೇಳಿದ ಮೇಲೆ ಅನೇಕ ಪುಸ್ತಕಗಳನ್ನು ಹಿಂದೆ ತೆಗೆದುಕೊಂಡಿದ್ದಾರೆ. ಆದ್ದರಿಂದ ಅವನ್ನು ಪೂರ್ತಿಯಾಗಿ ತೆಗೆಯಬೇಕು.

Smt. M. R. LAKSHAMMA (Graduates' Constituency).—Can he interrupt and make speeches again and again ?

Sri Y. S. PATIL.—I am not making any speech, but I am explaining.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಫೋರ್ಡ್ ಫೌಂಡೇಷನ್ನಿನವರು ತುಂಗಭದ್ರಾ ಆಯಕಟ್ಟು ಪ್ರದೇಶದಲ್ಲಿ ಎಲ್ಲಾ ಪರಿಯಾಗಳನ್ನು ನೋಡಿಕೊಂಡು ಬಂದ ಮೇಲೆ ಸರ್ಕಾರದವರು ಸಹಾಯ ಮಾಡುತ್ತಾರೆಂದು ಹೇಳಿದ್ದರು. ತುಂಗಭದ್ರಾ ಡೆವೆಲಪ್‌ಮೆಂಟ್ ಕಾರ್ಪೊರೇಷನ್ನಿನವರು ಆ ಪರಿಯಾವನ್ನು ಡೆವೆಲಪ್ ಮಾಡುವ ದೃಷ್ಟಿಯಿಂದ ಕೇಳಿದ್ದಾರೆ. ಮಾನ್ಯ ವ್ಯವಸಾಯ ಮಂತ್ರಿಗಳು ತುಂಗಭದ್ರಾ ವ್ಯವಸಾಯದ ಬಗ್ಗೆ ಫೋರ್ಡ್ ಫೌಂಡೇಷನ್ನಿನವರು ಏನು ಹೇಳಿದ್ದಾರೆ ಎಂಬ ಬಗ್ಗೆ ಹೇಳಲಿಲ್ಲ. ದಯವಿಟ್ಟು ಅದರ ಬಗ್ಗೆ ಸ್ವಲ್ಪ ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಆ ಬಗ್ಗೆ ಅಮೆರಿಕಾ ದೇಶದಿಂದ ಬಂದಿದ್ದ ಪ್ರತಿನಿಧಿಗಳು ನೋಡಿಕೊಂಡು ಹೋಗಿದ್ದಾರೆ. ಈಗ ನನಗೊಂದು ನೋಟ್ ಕಳುಹಿಸಿದ್ದಾರೆ. ಅದು ಈಗತಾನೆ ಬಂದಿದೆ. ಏನೇನು ಅಭಿಪ್ರಾಯಗಳು ಅವರದು ಇದೆಯೋ ಅವನ್ನು ಪರಿಶೀಲಿಸಿ ಸರ್ಕಾರ ತೀರ್ಮಾನವಾಡಬೇಕಾಗಿದೆ.

ಶ್ರೀ ಜಿ. ವಿ. ಆಂಜನಪ್ಪ (ಪದವೀಧರರ ಕ್ಷೇತ್ರ).—ಮಾನ್ಯ ಕೃಷಿ ಸಚಿವರು ಇನ್ನು 10 ವರ್ಷಗಳಲ್ಲಿ ಸುಖರಾಜ್ಯ ಮಾಡುತ್ತೇವೆ, ಎಲ್ಲರೂ ಸುಖವಾದ ಬಾಳನ್ನು ಬಾಳುವಂತೆ ಮಾಡಲು ದೇಶದ ಆದಾಯವನ್ನು ಜಾಸ್ತಿಮಾಡುತ್ತೇವೆಂದು ಹೇಳಿದರು. ಯಾವ ಆಧಾರದ ಮೇಲೆ ಈ ಮಾತನ್ನು ಅವರು ಹೇಳುತ್ತಿದ್ದಾರೆ ? ಮೈಸೂರು ಸಂಸ್ಥಾನದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ. ವ್ಯವಸಾಯ ಮಾಡತಕ್ಕ ಕುಟುಂಬವರ್ಗಕ್ಕೆ ಆದಾಯ ಎಷ್ಟರಮಟ್ಟಿಗೆ ಜಾಸ್ತಿಯಾಗಿದೆ, ಅವರ ಕಷ್ಟಸುಖಗಳೇನು ಎಂಬುದನ್ನು ವಿಚಾರ ಮಾಡಲು ಈ ಸಮಿತಿ ನೇಮಕವಾಗಿದೆಯೋ ಅಥವಾ ಹೀಗೆ ಹೇಳುತ್ತಿದ್ದಾರೋ ಅಥವಾ ಯಾವ ಅಂಕಿ ಅಂಶಗಳನ್ನನುಸರಿಸಿ ಹೇಳುತ್ತಿದ್ದಾರೆ ?

ಶ್ರೀ ಕೆ. ವಿ. ಶಂಕರಗೌಡ.—ಅಂಕಿ ಅಂಶಗಳನ್ನು ಸಂಗ್ರಹಿಸುವುದಕ್ಕೆ ಬೇಕಾದಷ್ಟು ಕಮಿಟಿಗಳು ಈಗಾಗಲೇ ಇವೆ. ರಾಷ್ಟ್ರದ ಆದಾಯ ಎಷ್ಟರ ಮಟ್ಟಿಗೆ ಹೆಚ್ಚಿದೆ ಎಂಬ ಬಗ್ಗೆ ವರದಿ ಬಂದಿದೆ. ವ್ಯವಸಾಯ ಕ್ಷೇತ್ರದಲ್ಲಿ ಎಷ್ಟರ ಮಟ್ಟಿಗೆ ಅಭಿವೃದ್ಧಿಯಾಗಿದೆ ಎಂಬುದು ಮಾನ್ಯ ಸದಸ್ಯರಿಗೆ ಚೆನ್ನಾಗಿ ಗೊತ್ತಿದೆ. ಮಾನ್ಯ ಸದಸ್ಯರು ಕೆನ್ನೆಯಲ್ಲಯೇ ಕನ್ನಡಿ ಇಟ್ಟುಕೊಂಡು ಇದ್ದರೂ ಅವರಿಗೆ ನೋಡುವ ಕಣ್ಣು ಇಲ್ಲ.

ಶ್ರೀ ಜಿ. ವಿ. ಆಂಜನಪ್ಪ.—ನಾನು ನನ್ನ ಅಪ್ಪನ ಕಾಲದಲ್ಲಯೂ ಹೀಗೆಯೇ ಇದ್ದವನು. ಈಗಲೂ ನಾನು ಅಷ್ಟೇ ಬೆಳೆಮಾಡಿದ್ದೇನೆ. ನಾನೇನೂ ಕುಗ್ಗಿಲ್ಲ, ತಗ್ಗಿಲ್ಲ. ಹೆಚ್ಚಿನ ಆದಾಯವು ಬಂದಿಲ್ಲವೆಂದು ಹೇಳಿದರೆ, ಈ ದೇಶದಲ್ಲಿ ಪರಿಸ್ಥಿತಿ ಹೀಗಾಗಲು ಕಾರಣವೇನೆಂಬುದನ್ನು ವಿಚಾರ ಮಾಡಬೇಕು.

ಶ್ರೀ ವೈ. ಎಸ್. ಪಾಟೀಲ್.—ಜನಪದ ಸಾಹಿತಿಗಳಿಗೂ, ಮತ್ತು ವಿದ್ಯಾ ಖಾತೆಗೂ—ಈ ಎರಡಕ್ಕೂ ಏನಾದರೂ ಸಂಬಂಧವಿದೆಯೇ ? ಜನಪದ ಸಾಹಿತ್ಯಕ್ಕೂ ಅವರೇ ಪ್ರೆಸಿಡೆಂಟ್, ಸರ್ಕಾರದ ಪರವಾಗಿಯೂ ಅವರೇ ಪ್ರೆಸಿಡೆಂಟ್. ಇದರ ಬಗ್ಗೆ ಕ್ಲಾರಿಫಿಕೇಶನ್ನಿಗೆ ಉತ್ತರ ಹೇಳಬೇಕು.

ಶ್ರೀ ಕೆ. ವಿ. ಶಂಕರಗೌಡ.—ಅಂತಹ ಸಂಬಂಧವಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ (ಹಣಕಾಸಿನ, ಯೋಜನಾ ಮತ್ತು ಕೈಗಾರಿಕಾ ಶಾಖೆಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಬರುವ ವರ್ಷದ ಅಯವ್ಯಯ ಪತ್ರಿಕೆಯ ಮೇಲೆ ಬಹು ದೀರ್ಘವಾದ ಚರ್ಚೆ ಈ ಸಭೆಯಲ್ಲಿ ನಡೆದಿದೆ. ಈ ಚರ್ಚೆಯ ಸಂದರ್ಭದಲ್ಲಿ ನಾನು ಇಲ್ಲಿ ಇರಲು ಸಾಧ್ಯವಾಗದೇ ಇರುವುದಕ್ಕೆ ವಿಷಾದಪಡುತ್ತೇನೆ. ಮಾನ್ಯ ಸದಸ್ಯರೆಲ್ಲರೂ ಈ ಚರ್ಚೆಯಲ್ಲಿ ಭಾಗವಹಿಸಿ ಬಜೆಟ್ಟಿನ ವಿಚಾರವಾಗಿ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮತ್ತು ಕೆಲವರು ಟೀಕೆಯನ್ನು ಕೂಡ ಮಾಡಿದ್ದಾರೆ. ಎರಡಕ್ಕೂ ನಾನು ಉಪಕೃತನಾಗಿದ್ದೇನೆ. ಕೆಲವೊಂದು ಅನಿವಾರ್ಯಕಾರಣಗಳಿಂದ ಸತತವಾಗಿ ಈ ಸಭೆಯಲ್ಲಿ ನಡೆದ ಚರ್ಚೆಯನ್ನು ಕೇಳಲಕ್ಕೆ ನಾನು ಇಲ್ಲಿ ಇರುವುದಕ್ಕೆ ಸಾಧ್ಯವಾಗದೇ ಇದ್ದರೂ ಮಾನ್ಯ ಸದಸ್ಯರು ಮಾಡಿದ ಭಾಷಣಗಳ ಸಾರಾಂಶ

(ಶ್ರೀ ರಾಮಕೃಷ್ಣ ಹೆಗಡೆ)

ನನ್ನ ಹತ್ತಿರ ಇದೆ. ಮತ್ತು ಅವರು ಯಾವ ಯಾವ ಮುಖ್ಯ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆಯೋ ಅದನ್ನೆಲ್ಲಾ ನಾನು ತಿಳಿದುಕೊಂಡಿದ್ದೇನೆ. ಕೆಲವು ಮಾನ್ಯ ಸದಸ್ಯರು ಈ ಸಲದ ಮುಂಗಡ ಪತ್ರದ ಮೇಲೆ ಅಂಕೆ ಸಂಖ್ಯೆಗಳ ಜಂಜಾಟವನ್ನು ತೋರಿಸಿದರು. ಶ್ರೀಮಾನ್ ನರಸಿಂಹನ್ ಅವರು ಮಾತನಾಡುತ್ತಾ ಈ ರಾಜ್ಯದ ಭವಿಷ್ಯ ಈ ಬಡ್ಜೆಟ್ಟಿನಲ್ಲಿ ಯಾವ ರೀತಿ ರೂಪಿತವಾಗಿ ಕಾಣಬೇಕಾಗಿತ್ತೋ ಅದು ಕಂಡಿಲ್ಲ ಎಂದು ಹೇಳಿದರು. ಅವರು ಅದನ್ನು ಸ್ವಲ್ಪ ಗಮನವಿಟ್ಟು ನೋಡಿದರೆ ಈ ರಾಜ್ಯದ ಭವಿಷ್ಯ ತಾನಾಗಿಯೇ ಸಿದ್ಧವಾಗಿ ಎದ್ದು ಕಾಣುತ್ತದೆ ಎಂದು ನಾನು ಯೋಚನೆ ಮಾಡಿಕೊಂಡಿದ್ದೇನೆ. ಅನೇಕ ಮಾನ್ಯ ಸದಸ್ಯರು ಈ ಸಲದ ಆಯವ್ಯಯ ಪತ್ರಿಕೆಯು ನಮ್ಮ ರಾಜ್ಯದ ಹಣಕಾಸಿನ ಸ್ಥಿತಿಯ ವಾಸ್ತವ ಚಿತ್ರವನ್ನು ಕೊಡುತ್ತದೆ ಎಂದು ಹೇಳಿದ್ದಾರೆ. ಮತ್ತು ಇದರಲ್ಲಿ ಯಾವುದೇ ತರಹದ ಅಂಕೆ ಸಂಖ್ಯೆಗಳ ಚಮತ್ಕಾರವಾಗಲೀ ಅಥವಾ ಅತಿರಂಜಿತ ಚಿತ್ರವಾಗಲೀ ಇಲ್ಲ ಎಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅವರಿಗೆ ನಾನು ತುಂಬಾ ಕೃತಜ್ಞನಾಗಿದ್ದೇನೆ. ಆಯವ್ಯಯ ಪತ್ರಿಕೆ ಇದು ಕೇವಲ ಅಂದಾಜು ಪತ್ರಿಕೆ ಮಾತ್ರ ಎಂಬುದನ್ನು ನಾವು ಮರೆಯಕೂಡದು. ಆಯವ್ಯಯ ಪತ್ರಿಕೆಗೂ ಬಾರೆನ್ಸ್‌ಷೀಟಿಗೂ ಬಹಳ ವ್ಯತ್ಯಾಸ ಇದೆ. ಬ್ಯಾರೆನ್ಸ್‌ಷೀಟ್ ವರ್ಷದ ಒಂದು ಹಣಕಾಸಿನ ಸ್ಥಿತಿಯನ್ನು, ಒಂದು ಚಿತ್ರವನ್ನು ತೋರಿಸಿದರೆ ಆಯವ್ಯಯ ಪತ್ರಿಕೆ ಬರುವ ವರ್ಷದ ಹಣಕಾಸಿನ ಅಗುಹೋಗು ಮತ್ತು ಆಯವ್ಯಯ ಚಿತ್ರವನ್ನು ತೋರಿಸುತ್ತದೆ. ಆದ್ದರಿಂದ ಇದರಲ್ಲಿ ಅಂದಾಜಿನ ಆಧಾರದ ಮೇಲೆ ಚಿತ್ರವನ್ನು ಬರೆಯುತ್ತೇವೆಯೇ ಹೊರತು ಸಂಪೂರ್ಣವಾಗಿ, ನಿರ್ದಿಷ್ಟವಾಗಿ ಒಂದು ಅಂಶ ಕೂಡ ತಪ್ಪು ಇಲ್ಲದ ಹಾಗೆ ಹಣಕಾಸಿನ ಸ್ಥಿತಿ ಗತಿ ಇರುತ್ತದೆ ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೂ ಕೂಡ ಸಾಮಾನ್ಯವಾಗಿ ಆಯವ್ಯಯ ಪತ್ರಿಕೆ ಎಷ್ಟರ ಮಟ್ಟಿಗೆ ವಾಸ್ತವ ಚಿತ್ರವನ್ನು, ವಾಸ್ತವ ಸ್ಥಿತಿಯನ್ನು ತೋರಿಸುತ್ತದೆ ಎಂದು ಹೇಳುವುದಕ್ಕೆ ಒಂದು ಸಾಕ್ಷಿ ಅದಕ್ಕೆ ಒಂದು ಊಹೆಗೋಲು ಇರುತ್ತದೆ. ಹಿಂದಿನ ವರ್ಷದ ಅಥವಾ ಅದಕ್ಕೆ ಹಿಂದಿನ ವರ್ಷದ ಯಾವ ವರ್ಷದ ಬಗ್ಗೆ ಖಚಿತವಾದ ಅಂಕಿ ಅಂಶಗಳು ಪ್ರಾಪ್ತವಾಗಿತ್ತೋ ಅಂಥಾ ವರ್ಷದ ಆಯ ವ್ಯಯ ಪತ್ರಿಕೆಗೂ ಮತ್ತು ನಿಜವಾದ ಲೆಕ್ಕಪತ್ರಕ್ಕೂ ಎಷ್ಟರಮಟ್ಟಿಗೆ ವ್ಯತ್ಯಾಸವಾಗಿದೆ ಎಂದು ಹೇಳುವುದು ಒಂದು ಅಳತೆಕೋಲು. ಮತ್ತೊಂದು ಸಂದರ್ಭದಲ್ಲಿ ಮಾನ್ಯ ಸದಸ್ಯರ ಗಮನವನ್ನು ಬಡ್ಜೆಟ್ ಭಾಷಣದಲ್ಲಿರತಕ್ಕ ಪುಟ 28 ಮತ್ತು 29 ರ ಕಡೆಗೆ ಸೆಳೆದಿದ್ದೇನೆ. ಇದು ನನ್ನ ಮೂರನೆಯ ಆಯವ್ಯಯ ಪತ್ರಿಕೆ. ಮೊದಲನೆಯ ಆಯವ್ಯಯ ಪತ್ರಿಕೆ 1966-67 ನೇ ಸಾಲಿನ ಪತ್ರಿಕೆ. ಎರಡನೆಯದನ್ನು 1967-68 ರಲ್ಲಿ ನಾನು ಮಂಡಿಸಿದ್ದೇನೆ. 1966-67 ರಲ್ಲಿ ನಾನು ಏನು ಆಯವ್ಯಯ ಪತ್ರಿಕೆಯನ್ನು ಮಂಡಿಸಿದ್ದೇನೆ, ಅದಕ್ಕೆ ಸಂಬಂಧಪಟ್ಟ ಆಕ್ಚುಯಲ್ ಏನು ಲಭ್ಯವಿದೆ ಎಂದರೆ ಆಯವ್ಯಯ ಪತ್ರಿಕೆಯ ಪ್ರಕಾರ ರೆವಿನ್ಯೂ ಸರ್‌ಪ್ಲಸ್ ಆ ವರ್ಷದ ಬಗ್ಗೆ 5 ಕೋಟಿ 26 ಲಕ್ಷ ರೂಪಾಯಿಗಳನ್ನು ಅಂದಾಜು ಮಾಡಲಾಗಿತ್ತು. ಆದರೆ ಲೆಕ್ಕಪತ್ರದ ಪ್ರಕಾರ ಏನು ಆಕ್ಚುಯಲ್ಸ್ ಎಂದು ಕರೆಯುತ್ತೇವೆಯೋ ಅದರ ಪ್ರಕಾರ 4 ಕೋಟಿ 96 ಲಕ್ಷ ರೂಪಾಯಿಗಳು ರೆವಿನ್ಯೂ ಸರ್‌ಪ್ಲಸ್ ಆ ವರ್ಷ ಆಗಿದೆ. ಎಂದರೆ ಸುಮಾರು 170 ಕೋಟಿ ರೂಪಾಯಿಗಳ ಒಂದು ಮುಂಗಡ ಪತ್ರದಲ್ಲಿ ಆಗಿರತಕ್ಕಂಥ ವ್ಯತ್ಯಾಸ ಅಂದಾಜು ಮತ್ತು ಆಕ್ಚುಯಲ್ಸ್‌ಗೆ ವ್ಯತ್ಯಾಸ ಕೇವಲ 30 ಲಕ್ಷ ರೂಪಾಯಿಗಳು. ಇದು ಒಂದು ಮಾತು ಸಾಕು. ಆದ್ದರಿಂದ ಈ ವರ್ಷದ ಆಯವ್ಯಯ ಪತ್ರಿಕೆಯಲ್ಲಿ ಅವಾಸ್ತವಿಕತೆಯಾಗಲೀ, ಯಾವುದೇ ವಿಷಯವನ್ನು ಮರೆಮಾಚುವ ಪ್ರಯತ್ನವಾಗಲೀ ಸ್ವಲ್ಪವೂ ಕೂಡ ಇಲ್ಲ. 1967-68 ರ ಮುಂಗಡ ಪತ್ರದಲ್ಲಿ ನಾನು ಸುಮಾರು 8 ಕೋಟಿ 59 ಲಕ್ಷ ರೂಪಾಯಿಗಳು ರೆವಿನ್ಯೂ ಸರ್‌ಪ್ಲಸ್ ಆಗಬಹುದು ಎಂದು ನೀರೀಕ್ಷಣೆ ಮಾಡಿದ್ದೆ. ಆಕ್ಚುಯಲ್ಲಾಗಿ ನನ್ನ ಹತ್ತಿರ ಲೆಕ್ಕಪತ್ರ ಎಲ್ಲಾ ಮುಗಿದು ನಮಗೆ ಲಭ್ಯವಾದ ರೆವಿನ್ಯೂ ಎಸ್ಟಿಮೇಟ್ ಪ್ರಕಾರ 8 ಕೋಟಿ 59 ಲಕ್ಷ ರೂಪಾಯಿ ರೆವಿನ್ಯೂ ಸರ್‌ಪ್ಲಸ್ ಬದಲು ಸುಮಾರು 10 ಕೋಟಿ 86 ಲಕ್ಷ ರೂಪಾಯಿಗಳ ಸರ್‌ಪ್ಲಸ್ ಆಗುತ್ತದೆ. ಆಮೇಲೆ ಮತ್ತೊಂದು ವಿಚಾರವನ್ನು ಮಾನ್ಯ ಸದಸ್ಯರು ಗಮನಲ್ಲಿಡಬೇಕು. ಯಾವುದೇ ಒಂದು ಮುಂಗಡ ಪತ್ರವನ್ನು ತಯಾರು ಮಾಡುವಾಗ ಬುದ್ಧಿವಂತರಾದ ಅರ್ಥ ಮಂತ್ರಿಗಳು ಇದ್ದರೆ ಯಾವಾಗಲೂ ಖರ್ಚಿನ ಬಾಬಿನ್ನು ಹೆಚ್ಚು ತೋರಿಸುತ್ತಾ ಉತ್ಪನ್ನದ ಬಾಬಿನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಿ ಅಂದಾಜನ್ನು ತಯಾರು ಮಾಡುತ್ತಾರೆ. ಆದರ ಪ್ರತಿಫಲ ಫಲತಾಂಶ ಕೊನೆಯಲ್ಲಿ ಸಿಕ್ಕುತ್ತದೆ ಯಾವಾಗಲೂ ನಾವು ನೀರೀಕ್ಷೆ ಮಾಡಿದ ಮಾಡಿದ ಉತ್ಪನ್ನಕ್ಕಿಂತ ಕಡಿಮೆ ಆಗತಕ್ಕಂಥ ಸಂಭವವೇ ಹೆಚ್ಚು. ಅದರಂತೆ ನಾವು ನೀರೀಕ್ಷಿಸಿದ ಖರ್ಚಿಗಿಂತ ಹೆಚ್ಚು ಆಗತಕ್ಕಂಥಾದ್ದೇ ಹೆಚ್ಚು. ಆದ್ದರಿಂದ ಯಾವುದೇ ಒಬ್ಬ ಅರ್ಥಮಂತ್ರಿಗಳು ಶಾಸನ ಸಭೆಗೆ ಶಾಸನಸಭಾ ಪರಿಪತ್ತಿಗೆ ಕೇವಲ ಒಂದು ಉಳಿತಾಯದ ಮುಂಗಡ ಪತ್ರವನ್ನು ತೋರಿಸಬೇಕೆಂಬುದೇ ಅವರ ಇಚ್ಛೆ. ಉತ್ಪನ್ನದ ಬಾಬಿನ್ನು ಹೆಚ್ಚು ಮಾಡಿ

ಖರ್ಚಿನ ಬಾಬನ್ನು ಕಡಿಮೆ ಮಾಡಿ ತೋರಿಸಿದರೆ ಅದರಿಂದ ಮುಂದೆ ಅವನಿಗೆ ಒಂದು ದೊಡ್ಡ ಆತಂಕ ಪುಂಟಾಗುತ್ತದೆ. ಮಾನ್ಯ ಸದಸ್ಯರು ಕೆಲವರು ಹೇಳಿದರು ಈ ಸಲದ ಮುಂಗಡ ಪತ್ರ ನಿಜವಾಗಿ ಉಳಿತಾಯದ ಮುಂಗಡ ಪತ್ರವಲ್ಲ ಎಂದು. ನಾನು ಅವರನ್ನು ಕೇಳುತ್ತೇನೆ ಈ ಸಲದ ಮುಂಗಡ ಪತ್ರ ಉಳಿತಾಯದ ಮುಂಗಡ ಪತ್ರ ಎಂದು ನಾನು ಎಲ್ಲಿ ಹೇಳಿದ್ದೇನೆ ? ನಾನೂ ಎಲ್ಲೂ ಹೇಳಲಿಲ್ಲ. ನಾನು ಹೇಳತಕ್ಕಂಥದ್ದು ನರ್ಕಾರ ನರ್ಕಾರಿ ನೌಕರರ ಹೆಚ್ಚಿನ ತುಟ್ಟಿಭತ್ಯ ಏರಿಸಬೇಕೆಂಬ ನಿರ್ಣಯವನ್ನು ಕೊನೆಯ ಘಳಿಗೆಯಲ್ಲಿ ಮಾಡಿದ್ದು. ಈ ಬಗ್ಗೆ ಮುಂಗಡ ಪತ್ರದ 39ನೇ ಪೇಜಿನಲ್ಲಿ ಏನು ಸಾರಾಂಶ ಹೇಳಿದ್ದೇನೆ, ಅದು ಕೊನೆಯ ಘಳಿಗೆಯಲ್ಲಿ ತೆಗೆದುಕೊಂಡಿದ್ದು. ಈ ಬಗ್ಗೆ ಎಷ್ಟು ಖರ್ಚು ಬರುತ್ತದೋ ಅದನ್ನು ನಮ್ಮ ಎಸ್ಟಿಮೇಟ್‌ನಲ್ಲಿ ಸೇರಿಸಿಲ್ಲ, ಇದು ಸ್ಪಷ್ಟವಾಗಿದೆ. ಇದರಲ್ಲಿ ಮುಚ್ಚುಮರೆ ಏನೂ ಇಲ್ಲ. ತುಟ್ಟಿ ಭತ್ಯಕ್ಕಾಗಿ ಹೆಚ್ಚುವರಿಯಾಗಿ 7-8 ಕೋಟಿ ರೂಪಾಯಿಗಳ ಖರ್ಚು ನರ್ಕಾರಕ್ಕೆ ಬರುತ್ತದೆ. ಈ ಖರ್ಚನ್ನು ಬಿಟ್ಟರೆ ಇಡೀ ನಮ್ಮ ಹಣಕಾಸಿನ ಪರಿಸ್ಥಿತಿಯ ಚಿತ್ರ ಸ್ವಲ್ಪಮಟ್ಟಿಗೆ ಉಳಿತಾಯದ ಚಿತ್ರವಾಗುತ್ತದೆ. ತುಟ್ಟಿಭತ್ಯದ ಖರ್ಚನ್ನು ಸೇರಿಸಿ ನೋಡಿದರೆ ಸ್ವಾಭಾವಿಕವಾಗಿ ಉಳಿತಾಯದ ಬಡ್ಜೆಟ್ ಆಗುವುದಿಲ್ಲ. ಆದ್ದರಿಂದ ತೋರಿಕೆಗೆ ಉಳಿತಾಯದ ಪತ್ರವೆಂದು ಏನು ಮಾನ್ಯ ಸದಸ್ಯರುಗಳು ಕೆಲವರು ಹೇಳಿದರು ಅದು ನಿಜವಲ್ಲ. ಈ ತುಟ್ಟಿಭತ್ಯದ ಖರ್ಚನ್ನು ಏತಕ್ಕೆ ಸೇರಿಸಲಿಲ್ಲವೆಂದರೆ ನಮ್ಮ ಅಂದಾಜಿನ ಪ್ರಕಾರ ರೆವಿನ್ಯೂ ನರ್‌ಪ್ಲಸ್ ಎಷ್ಟು ಇರುತ್ತದೋ ಅಷ್ಟೇ ರೆವಿನ್ಯೂ ಹೆಚ್ಚುತ್ತದೆ. ಇದು ಹಣಕಾಸಿನ ಪರಿಸ್ಥಿತಿಯ ಒಂದು ಮುಖ್ಯ ವಾದಂಥ ಅಂಶ. ಅದನ್ನು ಇಂದು ಮರೆಯಬಾರದು. ಒಂದು ನಿರ್ಣಯವನ್ನು ಮತ್ತು ಇಡೀ ಹಣಕಾಸಿನ ಮುಂಗಡ ಪತ್ರವನ್ನು ತಯಾರು ಮಾಡುವಾಗ ನಾನು ಏನು ಕೇಂದ್ರ ನರ್ಕಾರದವರು ಹಣಕಾಸಿನ ಆಯೋಗವನ್ನು ನೇಮಕ ಮಾಡಿದ್ದಾರೆ ಮತ್ತು ಹಣಕಾಸಿನ ಆಯೋಗಕ್ಕೆ ಯಾವ ಟರ್ಮ್ಸ್ ಆಫ್ ರೆಫರೆನ್ಸ್ ಕೊಟ್ಟಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಂಡು ಈ ಮುಂಗಡ ಪತ್ರವನ್ನು ತಯಾರು ಮಾಡಿದ್ದೇನೆ. ಅದನ್ನು ಸಹ ಮಾನ್ಯ ಸದಸ್ಯರುಗಳು ತಿಳಿಯಬೇಕು. ಇದನ್ನು ಸಂಪೂರ್ಣವಾಗಿ ಬಿಚ್ಚಿ ಹೇಳುವುದಕ್ಕೆ ಇಷ್ಟವಿರಲಿಲ್ಲ. ಯಾವ ಯಾವ ಕಾರಣಗಳನ್ನು ಅಳವಡಿಸಿಕೊಂಡು ಈ ಮುಂಗಡ ಪತ್ರವನ್ನು ಸಿದ್ಧಮಾಡಿದೆಯೋ ಅದನ್ನೆಲ್ಲಾ ಹೇಳುವುದು ಸರಿಯಲ್ಲ. ಇಷ್ಟು ಮಾತ್ರ ಮಾನ್ಯ ಸದಸ್ಯರಿಗೆ ಹೇಳಬಲ್ಲೆ, ಈ ಮುಂಗಡ ಪತ್ರದಲ್ಲಿ ಕೃತ್ರಿಮತೆಯಾಗಲೀ, ಅವಾಸ್ತವಿಕತೆಯಾಗಲೀ ಇಲ್ಲ. ಹಣಕಾಸಿನ ಚಿತ್ರವನ್ನು ಮುಚ್ಚುಮರೆ ಮಾಡಿ ಅಡಗಿಸಿಡುವ ವಿಚಾರವಲ್ಲ.

ಇನ್ನು ಮಾನ್ಯ ಸದಸ್ಯರ ಗಮನವನ್ನು ಮತ್ತೊಂದು ಕಡೆಗೆ ಸೆಳೆಯುತ್ತೇನೆ. ಯಾವುದೇ ಒಂದು ರಾಜ್ಯ ಅಥವಾ ದೇಶದಲ್ಲಿ ಪ್ರಗತಿಯಾಗಿದೆಯೋ ಇಲ್ಲವೋ, ಆಗಿದ್ದರೆ ಎಷ್ಟರಮಟ್ಟಿಗೆ ಆಗಿದೆ ಎಂಬುದನ್ನೆಲ್ಲಾ ಅಳೆಯುವುದಕ್ಕೆ ಒಂದು ಮಾನದಂಡವಿದೆ. ಶ್ರೀಮಾನ್ ನರಸಿಂಹನ್ ಅವರು ಕಳೆದ 20 ವರ್ಷಗಳಲ್ಲಿ ಅಂಧಕಾರವನ್ನು ನೋಡಿರಬಹುದು. ಶ್ರೀಮಾನ್ ಅಂಜನಪ್ಪನವರು ಮತ್ತೆ ಬೇರೆ ನೋಡಿರಬಹುದು. ನಮ್ಮ ಶಿಕ್ಷಣ ಮಂತ್ರಿಗಳು ಹೇಳಿದಂತೆ ಆಗಿರುವ ಪ್ರಗತಿಯನ್ನು ಕಾಣದಿದ್ದವರಿಗೆ ದಿನದ 24 ಗಂಟೆಗಳೂ ಸಹ ಕತ್ತಲು ಎಂದು ಹೇಳಬಹುದು.

ಶ್ರೀ ಜಿ. ಎ. ಅಂಜನಪ್ಪ.—ತಮಗೆ ದಿನದ 24 ಗಂಟೆಯೂ ಬೆಳಕೇ ಕಾಣುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಯಾರಿಗೆ ಬೆಳಕುಕಾಣುತ್ತದೋ ಅವರಿಗೆ ಕಣ್ಣು ಇದೆ ಎಂದು ಅರ್ಥ. ಯಾರಿಗೆ ಹಗಲು ಹೊತ್ತು ಕಾಣುವುದಿಲ್ಲವೋ ಅವರು ಅಂಧರು ಎಂದು ಅರ್ಥವಾಗುತ್ತದೆ.

ಶ್ರೀ ಜಿ. ಎ. ಅಂಜನಪ್ಪ.—ಕಾಂಗ್ರೆಸ್‌ನವರಿಗೆ ರಾತ್ರಿಯ ಹೊತ್ತೂ ಕಾಣುತ್ತದೆ ಎಂದು ಹೇಳಬೇಕಾಗುತ್ತದೆ !

ಶ್ರೀ ರಾಮಕೃಷ್ಣ ಹೆಗಡೆ.—ಅದೇ ದಿವ್ಯದೃಷ್ಟಿ !

ಶ್ರೀ ಜಿ. ಎ. ಅಂಜನಪ್ಪ.—ನಿಮಗೆ ದಿವ್ಯದೃಷ್ಟಿ ಬಹಳ ಹಾಸ್ಯ ಇದೆ !

ಶ್ರೀ ರಾಮಕೃಷ್ಣ ಹೆಗಡೆ.—ಆದ್ದರಿಂದ ಪ್ರತಿಯೊಬ್ಬ ಸದಸ್ಯನೂ, ಪ್ರತಿಯೊಬ್ಬ ವ್ಯಕ್ತಿಯೂ ತನ್ನ ತನ್ನ ದೃಷ್ಟಿಯಿಂದ, ತನ್ನ ತನ್ನ ಮನೋಭಾವನೆಯಿಂದ ಪರಿಸ್ಥಿತಿಯನ್ನು ತಿಳಿದುಕೊಳ್ಳುತ್ತಾನೆ. ಮತ್ತು ಪರಿಸ್ಥಿತಿಯನ್ನು ಅಳೆಯುವುದಕ್ಕೆ ಪ್ರಯತ್ನ ಮಾಡುತ್ತಾನೆ. ನಿಷ್ಪಕ್ಷಪಾತವಾಗಿ ಹೇಳಬೇಕಾದರೆ ಈ ದೇಶದಲ್ಲಿ ಮತ್ತು ಈ ರಾಜ್ಯದಲ್ಲಿ ಪ್ರಗತಿಯಾಗಿದೆ. ಆ ರೀತಿ ಆಗಿದ್ದರೆ ಎಷ್ಟರಮಟ್ಟಿಗೆ ಆಗಿದೆ, ನಮ್ಮ ಜನರ ನರಾನರಿ ಗುತ್ಪನ್ನ ಎಷ್ಟರಮಟ್ಟಿಗೆ ಹೆಚ್ಚಿದೆ ಎನ್ನುವುದನ್ನೆಲ್ಲಾ ಅಳೆಯುವುದಕ್ಕೆ ಒಂದು ಮಾಪದಂಡವಿರುತ್ತದೆ. ಈ ವಿವರಗಳನ್ನೆಲ್ಲಾ ತಿಳಿಸಿರುವ ಒಂದು ಚಿಕ್ಕ ಪುಸ್ತಕವನ್ನು ಮಾನ್ಯ ಸದಸ್ಯರುಗಳಿಗೆ ಕೊಟ್ಟಿದೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಕಾನ್ಸ್ ಆಫ್ ಲಿವಿಂಗ್ ಹೆಚ್ಚಿರುವುದಕ್ಕೆ ಏನು ಹೇಳುತ್ತೀರಿ?

ಶ್ರೀ ರಾಮಕೃಷ್ಣ ಹೆಗಡೆ.—ಕಾನ್ಸ್ ಆಫ್ ಲಿವಿಂಗ್ ಹೆಚ್ಚಿದ್ದರೂ ಕೂಡ ಅದು ಪ್ರಾಸ್ಪರಿಟಿಯ ಒಂದು ದ್ಯೋತಕ. ಮಾನ್ಯ ಸದಸ್ಯರುಗಳು ಕೆಲವರು 20 ವರ್ಷದ ವಿಚಾರವನ್ನು ಹೇಳಿದರು, ಆದರೆ ನಾನು ಅವಕ್ಕೆ ಹೋಗುವುದಿಲ್ಲ, ಕಳೆದ 10 ವರ್ಷಗಳ ವಿಚಾರಕ್ಕೆ ಹೋಗುತ್ತೇನೆ. 1956-57 ರಲ್ಲಿ ಇಡೀ ದೇಶದ ನರಾನರಿ ಉತ್ಪನ್ನ 283 ಇದ್ದರೆ 1964-65 ರಲ್ಲಿ 421.5ಕ್ಕೆ ಹೆಚ್ಚಿದೆ. ಅಂದರೆ ಈ 8 ವರ್ಷಗಳಲ್ಲಿ 48.8 ಪರ್‌ಸೆಂಟ್ ವೃದ್ಧಿಯಾಗಿದೆ. ಅಂದರೆ ಪ್ರತಿ ವರ್ಷ ನರಾನರಿ 6.10ರಂತೆ ವೃದ್ಧಿಯಾಗಿದೆ. ನಮ್ಮ ರಾಜ್ಯವನ್ನು ತೆಗೆದುಕೊಂಡರೆ ಇದೇ ಅವಧಿಯಲ್ಲಿ 232.4 ರಿಂದ 391.7 ರವರೆಗೆ ಅಂದರೆ 100ಕ್ಕೆ 60.5 ರಷ್ಟು ವೃದ್ಧಿಯಾಗಿದೆ. ಇಡೀ ದೇಶದ್ದು ನರಾನರಿ 6.10 ಇದ್ದರೆ ನಮ್ಮ ಮೈಸೂರು ರಾಜ್ಯದ್ದು 8.56 ಆಗಿದೆ. ಇದು ಏನು ತೋರಿಸುತ್ತೆ, ಪ್ರಗತಿಯನ್ನು ತೋರಿಸುತ್ತದೋ ಅಥವಾ ಅವನತಿಯನ್ನು ತೋರಿಸುತ್ತದೋ? ಇದೇ ರೀತಿ ವ್ಯವಸಾಯದ ಉತ್ಪನ್ನವನ್ನು ತೆಗೆದುಕೊಂಡರೆ, ಇಡೀ ದೇಶದ್ದು ತೆಗೆದುಕೊಂಡರೆ 86.1 ಪರ್‌ಸೆಂಟ್ ವೃದ್ಧಿಯಾಗಿದ್ದರೆ ನಮ್ಮ ರಾಜ್ಯದಲ್ಲಿ 96.3 ಪರ್‌ಸೆಂಟ್ ವೃದ್ಧಿಯಾಗಿದೆ. ಇಡೀ ದೇಶದ್ದು 10 ಪರ್‌ಸೆಂಟ್ ನರಾನರಿ ವೃದ್ಧಿಯಾಗಿದ್ದರೆ ನಮ್ಮ ರಾಜ್ಯದ್ದು 12.3ರಷ್ಟು ವೃದ್ಧಿಯಾಗಿದೆ. ಇದೇ ರೀತಿ ಕೈಗಾರಿಕಾ ರಂಗದಲ್ಲೂ ಸಹ ಮೊದಲು 38.9 ಇದ್ದದ್ದು ಈಗ 40.1 ಆಗಿದೆ. ಅಂದರೆ ನರಾನರಿ ವರ್ಷದಲ್ಲಿ ವೃದ್ಧಿಯಾಗಿರುವುದು 102.0.

Mr. CHAIRMAN.—The House will now rise and meet at 11-00 A.M.

The House rose at Thirty Minutes past Ten of the Clock to reassemble at Eleven of the Clock-

The House re-assembled at Four Minutes past Eleven of the Clock.

[MR. DEPUTY CHAIRMAN in the Chair]

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಈ ಚರ್ಚೆಯಲ್ಲಿ ಮಾತನಾಡುತ್ತಾ, ಅನೇಕ ಸದಸ್ಯರುಗಳು, ಅನೇಕ ವಿಷಯಗಳನ್ನು ಮತ್ತು ಬೇರೆ ಬೇರೆ ಖಾತೆಗೆ ಸಂಬಂಧಪಟ್ಟ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಅವರು ಎತ್ತಿದಂತಹ ಪ್ರತಿಯೊಂದು ವಿಷಯಕ್ಕೂ ಉತ್ತರ ಕೊಡಬೇಕಾದರೆ, ನನಗಿರತಕ್ಕ ಅಲ್ಪಕಾಲಾವಧಿಯಲ್ಲಿ ಸಾಧ್ಯವಿಲ್ಲ. ಆದಕ್ಕಾಗಿ ಅವರೆಲ್ಲರ ಕ್ಷಮಾಪಣೆಯನ್ನು ಕೇಳುತ್ತೇನೆ. ಬೇರೆ ಅವಕಾಶ ನಮಗೆ ಸಿಗುತ್ತದೆ. ಅಪ್ರೊಪ್ರಿಯೇಷನ್ ಬಿಲ್ಲು ಬಂದಂತಹ ಸಮಯದಲ್ಲಿ ಮತ್ತು ಸಪ್ಲಿಮೆಂಟರಿ ಗ್ರಾಂಟ್ ಚರ್ಚೆಯಾಗತಕ್ಕ ಸಮಯದಲ್ಲಿ ಅವಕಾಶ ಸಿಗುತ್ತದೆ, ಆವಾಗ ಸಂಬಂಧಪಟ್ಟ ಖಾತೆಯ ಮಂತ್ರಿಗಳು ಉತ್ತರ ಕೊಡುತ್ತಾರೆ, ಮತ್ತು ನನ್ನ ಬೇಡಿಕೆಯ ಬಗ್ಗೆ ನಾನು ಉತ್ತರವನ್ನು ಕೊಡುತ್ತೇನೆ.

ಒಂದು ವಿಚಾರವನ್ನು ಅನೇಕ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದರು. ಅದೇನೆಂದರೆ, ನಾವು ಹೆಚ್ಚು ಹೆಚ್ಚು ಕೇಂದ್ರ ಸರ್ಕಾರದ ಮೇಲೆ, ನಮ್ಮ ಯೋಜನೆಯ ಬಗ್ಗೆ ಅವಲಂಬಿಸಬೇಕಾಗುತ್ತದೆ ಎನ್ನುವಂತಹ ವಿಚಾರ. ಇದರಲ್ಲಿ ಯಾವ ಒಂದೂ ಆಶ್ಚರ್ಯವಿಲ್ಲ. ಇಂದು ನಮ್ಮ ಘಟನೆಯ ಪ್ರಕಾರ ಆರ್ಥಿಕ ವಿಚಾರದಲ್ಲಿ ಕೇಂದ್ರಸರ್ಕಾರ ಮತ್ತು ರಾಜ್ಯಸರ್ಕಾರಗಳ ನಡುವಿನ ಸಂಬಂಧ ಮತ್ತು ವ್ಯವಸ್ಥೆ ಯಾವ ರೀತಿ ಇದೆಯೋ ಅದರ ಪ್ರಕಾರ ಏನು ನಾವು ಇರಾಸ್ಟಿಕ್ ಎಂದು ಹೇಳುತ್ತೇವೆ, ಅಂಥ ಉತ್ಪನ್ನ ಕೇಂದ್ರಸರ್ಕಾರಕ್ಕೆ ಹೋಗುತ್ತದೆ. ರಾಜ್ಯಸರ್ಕಾರಕ್ಕೆ ಇರತಕ್ಕಂತಹ ಬಾಬುಗಳಲ್ಲಿ ಅಗ್ರಿಕಲ್ಚರರ್ ಇನ್‌ಕಂ ಟ್ಯಾಕ್ಸ್ ಮತ್ತು ಸೇಲ್ಸ್‌ಟ್ಯಾಕ್ಸನ್ನು ಬಿಟ್ಟರೆ ಬೇರೆ ಯಾವ ಬಾಬುಗಳಲ್ಲಿಯೂ ನಮಗೆ ಹೆಚ್ಚಿನ ವರಮಾನ ಸಿಗುವುದು ಸಾಧ್ಯವಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಮೈಸೂರಿನ ಸರ್ಕಾರ ಮತ್ತು ಇನ್ನು ಕೆಲವು ರಾಜ್ಯ ಸರ್ಕಾರಗಳು ಅನೇಕ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರಗಳ ನಡುವೆ ಆರ್ಥಿಕ ಸಂಬಂಧ ಮತ್ತು ಆರ್ಥಿಕ ವ್ಯವಸ್ಥೆ ಪುನರ್ವಿಮರ್ಶಿತವಾಗಬೇಕು ಮತ್ತು ರಾಜ್ಯಸರ್ಕಾರಗಳ ಮೇಲಿರತಕ್ಕಂತಹ ಜವಾಬ್ದಾರಿಗನು ಗುಣವಾಗಿ ಉತ್ಪನ್ನ ಸಿಕ್ಕತಕ್ಕ ವ್ಯವಸ್ಥೆ ಆಗಬೇಕು ಎಂದು ಒತ್ತಿಒತ್ತಿ ಪ್ರಸ್ತಾಪ ಮಾಡಿದ್ದೇವೆ. ಈ ಸರ್ಕಾರದ ಮೇಲೆ ಬಹಳ ಸಾಲದ ಭಾರ ಇದೆ. ಅದು ಇಷ್ಟೊಂದು ವಿಹಿತವಾದುದಲ್ಲವೆಂದು ಕೆಲವು ಮಾನ್ಯ ಸದಸ್ಯರುಗಳು ಟೀಕೆ ಮಾಡಿದರು. ಸಾಲದ ಭಾರ ಇರತಕ್ಕದ್ದು ನಿಜ. ನಾನು ಹಿಂದೆ

ಹೇಳಿದ ಹಾಗೆ ನಮ್ಮ ಸಾಲದ ಭಾರ ಹೆಚ್ಚುತ್ತಾ ಹೋದ ಹಾಗೆ ನಾವು ಮಾಡಿರತಕ್ಕ ಅನ್ಯಯ ಪೊತ್ತವೂ ಕೂಡಾ ಹೆಚ್ಚುತ್ತಾ ಹೋಗುತ್ತದೆ. ಮತ್ತು ಅಭಿವೃದ್ಧಿಯ ಯುಗದಲ್ಲಿ ನಾವಿರುವಾಗ ಅಭಿವೃದ್ಧಿ ಕೆಲಸಗಳನ್ನು ವರ್ಷ ವರ್ಷಕ್ಕೂ ಹೆಚ್ಚು ಹೆಚ್ಚು ಮಾಡತಕ್ಕದ್ದು ಅವಶ್ಯವಿರುವಾಗ ಸಾಲ ಮಾಡತಕ್ಕದ್ದು ಅನಿವಾರ್ಯವಾದದ್ದು. ಎಲ್ಲಿಯವರೆಗೆ ನಮ್ಮ ಕಾರ್ಯಕ್ರಮಗಳು ಫಲ ಕೊಡತಕ್ಕಂಥಹ ಪರಿಸ್ಥಿತಿಗೆ ಬಂದು ಮುಟ್ಟುವುದಿಲ್ಲವೋ, ಮತ್ತು ಎಲ್ಲಿಯವರೆಗೆ ಸ್ವಯಂಚಾಲಿತವಾದ, ಆರ್ಥಿಕ ವ್ಯವಸ್ಥೆಯ ಮಟ್ಟಕ್ಕೆ ಮುಟ್ಟುವುದಿಲ್ಲವೋ, ಅಲ್ಲಿಯವರೆಗೆ ನಾವು ಆರ್ಥಿಕ ಸಹಾಯಕ್ಕಾಗಿ ಬೇರೆಯವರನ್ನು ಅವಲಂಬನ ಮಾಡತಕ್ಕದ್ದು ಅಗತ್ಯ. ಆದರೆ ಮಾನ್ಯ ಸದಸ್ಯರುಗಳು ಒಂದು ಚಿಂತೆ ಏನು ವ್ಯಕ್ತಪಡಿಸಿದರು, ಆ ಚಿಂತೆಯನ್ನು ಸ್ವಲ್ಪಮಟ್ಟಿಗೆ ಒಪ್ಪುತ್ತೇನೆ. ಅದೇನೆಂದರೆ, ಏನೋ ಬೇರೆ ಕಡೆಯಿಂದ ಸಾಲ ತಂದು ನಾವು ಬೇರೆ ಬೇರೆ ಕಾರ್ಯಕ್ರಮಗಳಿಗೆ ವಿನಿಯೋಗಿಸುತ್ತಿದ್ದೇವೆ: ಆದರೆ ಆ ಕಾರ್ಯಕ್ರಮಗಳು ತೀವ್ರವಾಗಿ ಫಲ ಕೊಡತಕ್ಕಂಥವುಗಳಾಗಬೇಕು ಎಂದು. ಎಷ್ಟರಮಟ್ಟಿಗೆ ಸರ್ಕಾರ ಯಶಸ್ವಿಯಾಗಿ ತನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತದೆ ಎಂಬುದನ್ನು ನಾವು ನೋಡಬೇಕು. ಏನಾದರೂ ತಪ್ಪು ಆಗಿದ್ದರೆ, ಆದನ್ನು ತಿದ್ದಿಕೊಳ್ಳುವುದಕ್ಕೆ ಸರ್ಕಾರದವರು ಯಾವಾಗಲೂ ಸಿದ್ಧವಾಗಿದ್ದಾರೆಂಬುದನ್ನು ಹೇಳುತ್ತೇನೆ. ಕೆಲವು ನಿಮಿಷದ ನಂತರ ಉದ್ಯಮದ ವಿಚಾರ ಪ್ರಸ್ತಾಪ ಮಾಡುವಾಗ ಈ ವಿಚಾರಕ್ಕೆ ಪುನಃ ಬರುತ್ತೇನೆ. ಈಗ ಮಾನ್ಯ ಮಲ್ಲಾರಾಧ್ಯರು ಮತ್ತು ಇನ್ನಿತರರು ಒಂದು ಮಹತ್ವವಾದಂತಹ ಮಾತನ್ನು ಹೇಳಿದರು. ಆ ಮಾತು ಏನೆಂದರೆ, ವರ್ಷ ವರ್ಷಕ್ಕೆ ನಾನ್ ಪ್ಲಾನ್ ಖರ್ಚು ಹೆಚ್ಚಾಗುತ್ತಾ ಹೋಗುತ್ತದೆ ಎಂದು. ಆದರೂ ಕೂಡ ಮಾನ್ಯ ಸದಸ್ಯರು ಸ್ವಲ್ಪಮಟ್ಟಿಗೆ ಸೂಕ್ಷ್ಮವಾಗಿ ಅವಲೋಕಿಸಿದರೆ ಇದು ಅನಿವಾರ್ಯ ಎನ್ನುವುದು ಗೊತ್ತಾಗುತ್ತದೆ. ಯಾವುದನ್ನು ಪ್ಲಾನ್ ಎಕ್ಸ್‌ಪೆಂಡಿಚರು ಎಂದು ಪರಿಗಣಿಸಲಾಗುತ್ತದೋ ಆ ಕೆಲಸಗಳನ್ನು ಮುಂದೆ ಅನುಸರಿಸಿಕೊಂಡು ಹೋಗುವ ಕಾಲಕ್ಕೆ ಎಲ್ಲ ವೆಚ್ಚಗಳೂ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರೇ ಆಗುತ್ತದೆ. ಉದಾಹರಣೆಯಾಗಿ ಮೂರನೇ ಯೋಜನೆ ಅವಧಿಯಲ್ಲಿ ನಾವು ಅನೇಕ ಮೆಡಿಕಲ್ ಕಾಲೇಜುಗಳನ್ನು ಸ್ಥಾಪನೆ ಮಾಡಿದ್ದೇವೆ, ಶಾಲೆಗಳನ್ನು ಹಾಗೂ ಹೈಸ್ಕೂಲುಗಳನ್ನು ಆಸ್ಪತ್ರೆಗಳನ್ನು ಪ್ರಾರಂಭ ಮಾಡಿದ್ದೇವೆ. ಪ್ರೈಮರಿ ಹೆಲ್ತ್ ಯೂನಿಟ್ಟುಗಳನ್ನು ಸ್ಥಾಪನೆ ಮಾಡಿದ್ದೇವೆ ಮತ್ತು ಇನ್ನೂ ಅನೇಕ ಬೇರೆ ಬೇರೆ ಸಮಾಜಕಲ್ಯಾಣ ಕ್ಷೇತ್ರಗಳಲ್ಲಿ ಬೇರೆ ಬೇರೆ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಮೂರನೇ ಅವಧಿಯಲ್ಲಿ ಮಟ್ಟಿಗೆ ಆದಕ್ಕೆ ಕೆಲವೊಂದು ಹಣವನ್ನು ಇಲ್ಲಿ ಖರ್ಚು ಮಾಡಿದರೂ ಮತ್ತು ಈ ಯೋಜನೆಗೆ ಸಂಬಂಧಪಟ್ಟ ಕೆಲಸಗಳು ಮುಗಿದ ಮೇಲೆ ಅದೇ ಕೆಲಸಗಳಿಗಾಗಿ ಇದನ್ನು ಮೇಂಟೇನ್ ಮಾಡಲು ನಿರ್ವಹಣೆ ಮಾಡಿಕೊಂಡು ಹೋಗುವುದು ಏನಿದೆ ಅದನ್ನು ಪ್ಲಾನ್ ಎಕ್ಸ್‌ಪೆಂಡಿಚರು ಎಂದು ಹೇಳುವುದಕ್ಕೆ ಬರುವುದಿಲ್ಲ. ಆದುದರಿಂದ ಪ್ರತಿ ವರ್ಷವೂ ಏನು ಬೇರೆ ಬೇರೆ ಕಲಸಗಳಿಗೋಸ್ಕರ ಇವುಗಳನ್ನು ನಿರ್ವಹಣೆ ಮಾಡುವುದಕ್ಕೋಸ್ಕರ ಖರ್ಚು ಮಾಡಬೇಕೋ ಅವು ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲಿ ಬಂದೇ ಬರುತ್ತದೆ. ಇನ್ನೊಂದು ಮಹತ್ವದ್ದು ಎಂದರೆ, 1, 2, 3 ಮತ್ತು ನಾಲ್ಕನೇ ಯೋಜನೆಗಳು ಮುಕ್ತಾಯವಾದ ಮೇಲೆ ಖರ್ಚು ಹೆಚ್ಚು ಹೆಚ್ಚಾಗಿ ಏರುತ್ತಾ ಹೋಗುವುದು ಕೂಡ ಅಷ್ಟೇ ಸ್ವಾಭಾವಿಕವಾದುದು. ಆದುದರಿಂದ ಕೇವಲ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರು, ಸಿಬ್ಬಂದಿಗಾಗಿ ಹೆಚ್ಚಿಗೆ ಒಂದು ತರಹದ ಕಾತರ, ಒಂದು ತರಹದ ಚಿಂತೆ ವ್ಯಕ್ತಮಾಡುವುದು ಅಷ್ಟೇನೂ ಸರಿಯಾದುದಲ್ಲ. ಎಂದು ಮಾನ್ಯ ಸದಸ್ಯರ ಮುಂದೆ ಇಲ್ಲ ಹೇಳಬಯಸುತ್ತೇನೆ.

ಮಾನ್ಯ ಸದಸ್ಯರಾದ ಶ್ರೀಮಾನ್ ಮಲ್ಲಾರಾಧ್ಯರವರು ಬರುವ ವರ್ಷದ ಯೋಜನೆ ಬಗ್ಗೆ ರಿಸೋರ್ಸಸ್ ಯಾವ ರೀತಿ ನೀವು ಕೊಡಿಸುತ್ತೀರಿ ಎಂದು ಹೇಳುವುದರ ಬಗ್ಗೆ ಮುಂಗಡಪತ್ರದಲ್ಲಿ ಸರಿಯಾಗಿ ಕೊಟ್ಟಿಲ್ಲ ಎಂದು ಇಲ್ಲಿ ಹೇಳಿದರು. ಮತ್ತು ಮೇಂಟೆನೆನ್ಸ್ ಸೆಸ್ ಸುಮಾರು ಎರಡೂವರೆ ಕೋಟಿ ಬರುತ್ತದೆ ಎಂದು ಹೇಳುತ್ತೀರಿ. ಇದನ್ನು ಬಡ್ಜೆಟ್‌ನೊಳಗೆ ಮೊದಲೇ ಏಕೆ ಸೇರಿಸಲಿಲ್ಲ ಮತ್ತು ಏನು ಆದಾಯ ಬರುತ್ತದೆ ಅದರಲ್ಲಿ ಮೇಂಟೆನೆನ್ಸ್‌ಗೂ ಹೋಗುತ್ತದೆ ಎನ್ನುವುದನ್ನು ಇಲ್ಲಿ ಗಮನಕ್ಕೆ ತೆಗೆದುಕೊಂಡಿಲ್ಲ ಎಂದು ಹೇಳಿದರು. ಆದರೆ ಇದು ಕೇವಲ ಕಾಲ್ಪನಿಕವಾಗುತ್ತದೆ ಎಂದೂ ಹೇಳಿದರು. ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರುವ ಹಾಗೆ ಮೇಂಟೆನೆನ್ಸ್ ಸೆಸ್ ಎನ್ನುವುದು ಹೊಸದೇನೂ ಅಲ್ಲ. ಅನೇಕ ವರ್ಷಗಳಿಂದ ನಮ್ಮ ಮೈಸೂರು ರಾಜ್ಯದಲ್ಲಿ ವಾಟರ್ ರೇಟು, ವೆಟರ್‌ಮೆಂಟು ಲೆವಿಯನ್ನು ಹೆಚ್ಚು ಮಾಡಿ ಅದನ್ನು ವಸೂಲು ಮಾಡುವುದಕ್ಕೆ ತೀರ್ಮಾನ ಮಾಡಿದಾಗ ಕೆಲವು ಅಭಿವ್ಯಾಯಗಳು ಬಂದವು. ಮೇಂಟೆನೆನ್ಸ್ ಸೆಸ್ ಸ್ವಲ್ಪ ಜನ ರೈತರಿಗೆ ಕಷ್ಟವಾಗಬಹುದು ಎಂದು ಇದನ್ನು ತಾತ್ಕಾಲಿಕವಾಗಿ ಬಿಡಬಹುದು ಎಂದು ಇದಕ್ಕಾಗಿ ಒಂದು ವರ್ಷದ ಮೇಂಟೆನೆನ್ಸ್ ಸೆಸ್ಸನ್ನು ವಸೂಲು ಮಾಡಲಿಲ್ಲ. ಸರಕಾರದವರು ಮೇಂಟೆನೆನ್ಸ್ ಸೆಸ್ಸನ್ನು ವಸೂಲು ಮಾಡಬೇಕು ಎಂದು ತೀರ್ಮಾನ ತೆಗೆದುಕೊಂಡರು. ಆ ವೇಳೆಗೆ ಸರಕಾರ ಬಡ್ಡಿ

(ಶ್ರೀ ರಾಮಕೃಷ್ಣ ಹೆಗಡೆ)

ಟ್ಟನ್ನು ತಯಾರು ಮಾಡಿಯಾಗಿತ್ತು. ಇದರಿಂದಾಗಿ ಬಡ್ಜೆಟ್ಟಿನಲ್ಲಿ ಇದನ್ನು ಸೇರಿಸುವುದು ಸಾಧ್ಯವಾಗಲಿಲ್ಲ. ಮೇಂಟಿನೆನ್ಸ್‌ನಿಂದ ಏನು ಸರಕಾರಕ್ಕೆ ಖರ್ಚು ಬರುತ್ತದೆ ಅದರ ಬಗ್ಗೆ ಏನು ಉತ್ತರ ಎಂದು ಕೇಳಿದರೆ ಅದಕ್ಕೆ ಉತ್ತರ ನಾನು ಬೇಳುವುದು ಇಷ್ಟೇ, ಈ ಸಾರಿ 50 ಸಿವಿಲ್ ವರ್ಕ್ಸ್ ರನ್ನೆ ಕೆಲಸಗಳು ಕಾಗೂ ಲೋಕೋಪಯೋಗಿ ಖಾತೆಯಲ್ಲಿ ಮಾಡುವ ಇತರ ಕಾರ್ಯಕ್ರಮಗಳಿಗಾಗಿ ಖರ್ಚು ಬಂತು ಮತ್ತು ಇದು ಈಗಿರತಕ್ಕ ಕೆಲಸಗಳ ನಿರ್ವಹಣೆಗಾಗಿ ಇವುಗಳನ್ನು ನಿರಿಯಾಗಿ ನಡೆಸಿಕೊಂಡು ಹೋಗತಕ್ಕ ಒಂದು ಜವಾಬುದಾರಿ ಮತ್ತು ಅದಕ್ಕೆ ಖರ್ಚು ಮಾಡಬೇಕಾದ ಹಣ ಇದರಲ್ಲಿ ಮಾನ್ಯ ಸದಸ್ಯರು ಗಮನ ಕೊಟ್ಟು ನೋಡಿದರೆ ಹಿಂದಿನ ವರ್ಷಗಳಿಗಿಂತ ಸುಮಾರು ಒಂದೂವರೆ ಕೋಟಿ ಯಷ್ಟನ್ನು ಕೇವಲ 50 ಸಿವಿಲ್ ವರ್ಕ್ಸ್‌ಕೆಲಸಗಳಿಗಾಗಿ ಹೆಚ್ಚಾಗಿ ನಾವು ಒದಗಿಸಿದ್ದೇವೆ ಮತ್ತು ಇನ್ನೂ ಬೇರೆ ಬೇರೆ ಬಾಬುಗಳಲ್ಲಿ ಮಾಡುವ ಕೆಲಸಗಳಿಗೋಸ್ಕರ ಅದಷ್ಟು ಹೆಚ್ಚು ಹಣವನ್ನು ಒದಗಿಸುತ್ತಿದ್ದೇವೆ. ಆದುದರಿಂದ ಮೇಂಟಿನೆನ್ಸ್ ಕಾಲಕ್ಕೆ ಖರ್ಚು ನಾವು ಗಣನೆಗೆ ತೆಗೆದುಕೊಂಡಿಲ್ಲ ಮತ್ತು ಅದು ಸಾಧ್ಯವೂ ಆಗುವುದಿಲ್ಲ. ಇನ್ನು ಬರುವ ವರ್ಷದ ಕೆಲಸಗಳಿಗೋಸ್ಕರ ನಾನು ಹೇಳಿದಂತೆ ಸುಮಾರು 65.20 ಲಕ್ಷದಷ್ಟು ಪೊತ್ತವನ್ನು ನಾವು ನಿಗದಿ ಮಾಡಿದ್ದೇವೆ. ಇಲ್ಲಿ ಮಾನ್ಯ ಸದಸ್ಯರಿಗೆ ಒಂದು ಮಾತನ್ನು ಅಭಿಮಾನದಿಂದ ಹೇಳಬೇಕಾಗಿದೆ. ಅದೇನೆಂದರೆ. ಇಡೀ ನಮ್ಮ ಹಿಂದೂಸ್ಥಾನದಲ್ಲಿ ನಮ್ಮ ದೇಶದಲ್ಲಿ ಈ ಚಾಲೂ ವರ್ಷದ ಯೋಜನೆ ಪೊತ್ತವನ್ನು ಮುಂದಿನ ವರ್ಷಕ್ಕೆ ಇಟ್ಟುಕೊಂಡು ಹೋಗತಕ್ಕ ರಾಜ್ಯಗಳಲ್ಲಿ ಒಂದಾಗಿದೆ. ನಾಲ್ಕು ರಾಜ್ಯಗಳು ಎಂದರೆ ಮಹಾರಾಷ್ಟ್ರ, ಗುಜರಾತ್, ಮೈಸೂರು ಹಾಗೂ ಕೇರಳ ಈ ನಾಲ್ಕು ರಾಜ್ಯಗಳಲ್ಲಿ ಬರುವ ವರ್ಷದ ಯೋಜನೆಯೆಲ್ಲೂ ಈ ವರ್ಷದ ಯೋಜನೆಯನ್ನೂ ಕೂಡಿಕೊಂಡು ಬರುತ್ತದೆ. ಉಳಿದ ಎಲ್ಲ ರಾಜ್ಯಗಳಲ್ಲೂ ಈ ರೀತಿ ಇಲ್ಲ. ಇದರ ಅಂಕೆ ಸಂಖ್ಯೆಗಳೂ ನನ್ನಲ್ಲಿವೆ. ಸಮಯ ಇದಕ್ಕೆ ಹೆಚ್ಚಾಗುವ ಕಾರಣ ಆ ಎಲ್ಲ ಅಂಕೆ ಸಂಖ್ಯೆಗಳನ್ನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಸುಮಾರು ಎರಡು ಕೋಟಿಯಿಂದ ಹಿಡಿದು 15 ಕೋಟಿಯವರೆಗೆ ಕೊರತೆ ಬರುವ ವರ್ಷದ ಬಡ್ಜೆಟ್ಟಿನಲ್ಲಿ ಇವೆಲ್ಲಾ ರಾಜ್ಯಗಳಲ್ಲಿ ಆಗುತ್ತದೆ. ಯೋಜನೆ ಪೆಡ್ಡ ಇಷ್ಟು ಎಂದು ಇಡಲಿಕ್ಕೆ ಮತ್ತೊಂದು ಕಾರಣವೂ ಇದೆ. ಅದೇನೆಂದರೆ, ನಾಲ್ಕನೇ ಯೋಜನೆ ಮಾನ್ಯ ಸದಸ್ಯರಿಗೆ ಈಗಾಗಲೆ ಗೊತ್ತಿರುವ ಹಾಗೆ ಬರುವ ವರ್ಷ 1969 ರಿಂದ ಆರಂಭವಾಗುತ್ತದೆ. ನಾಲ್ಕನೆ ಯೋಜನೆ ಮಾಡುವಾಗ ಹಿಂದಿನ ವರ್ಷದ ಮುಂದುವರಿಸಿದ ಯೋಜನೆಯ ಪೊತ್ತದ ಮೇಲೆ ಬಹುಮಟ್ಟಿಗೆ ಅವಲಂಬಿಸಿದೆ. ಏಕೆಂದರೆ ಪ್ರತಿವರ್ಷವೂ ಯೋಜನೆಯ ಖರ್ಚು ಮಾಡುತ್ತಿದ್ದೇವೆ ಮತ್ತು ಅದಕಾಗಿ ಹೆಚ್ಚು ಹಣವನ್ನೂ ಮುಂದಿನ ವರ್ಷದಲ್ಲಿ ಖರ್ಚು ಮಾಡಬೇಕಾದರೆ ಯಾವ ಯಾವ ಬಾಬುಗಳಿಗಾಗಿ ಖರ್ಚು ಮಾಡಬೇಕು ಮತ್ತು ಅದರಲ್ಲಡಗಿರತಕ್ಕ ಯೋಜನೆಗಳನ್ನು ಕೈಕೊಳ್ಳಬೇಕು ಎನ್ನುವ ಉದ್ದೇಶದಿಂದ ಎಷ್ಟೇ ಕಷ್ಟವಾಗಲೀ 60.25 ಲಕ್ಷಕ್ಕಿಂತ ಕಡಿಮೆ ಮಾಡುವ ಉದ್ದೇಶ ನಮಗೆ ಇಲ್ಲ ಎಂದು ಇಲ್ಲ ಒದಗಿಸಿಕೊಂಡಿದ್ದೇವೆ ಮತ್ತು ನಮ್ಮ ಭರವಸೆಯೂ ಯಶಸ್ವಿಯಾಗಿದೆ. ಎಂದು ಅಭಿಮಾನದಿಂದ ಇಲ್ಲಿ ಹೇಳುತ್ತೇನೆ. ಮಾನ್ಯ ಪ್ಲಾನಿಂಗ್ ಕಮಿಷನ್ ಆಧ್ಯರವರು ಯೋಜನೆಗೆ ಬೇಕಾಗುವ ಹಣವನ್ನು ಎಲ್ಲಿಂದ ತರುತ್ತೀರಿ. 37 ಕೋಟಿ ಯಷ್ಟು ಸೆಂಟ್ರಲ್ ಗವರ್ನಮೆಂಟಿನಿಂದ ಸಿಗುತ್ತದೆ. ಈ ದೇಶದ ಬೇರೆ ಯಾವ ಬಾಬುಗಳಿಂದಲೂ ಒದಗಿಸಿದಂತೆ ಕಾಣುವುದಿಲ್ಲ ಎಂದು ಅವರು ಹೇಳಿದರು. ನಮ್ಮ ರಿಸೋರ್ಸಸ್ ಬರುವ ಯೋಜನೆಯೊಳಗೆ ಈ ರೀತಿಯಾಗಿ ಇದೆ:

			Rs.
Balance from current revenues	...		6.63 crores
Public enterprises	...		6.21 ,,
Additional taxation measures already implemented : relaxation of prohibition, maintenance cess, etc.		Rs. 8.41 6.00 2.50	
Total	...	16.91	16.91 ,,

Loans from public:

	Rs.		
Loans to be raised	6 crores		
Minus repayment to be made	4.24 ,,		
Net	1.76		1.76 crores
Loans to be raised by MSEB		3.00	,,
Share in small savings		4.00	,,
Unfunded debt		1.61	,,
Miscellaneous capital receipts –minus 15.31 crores			
		Net 24.81	,,
Phased Central assistance		37.06	,,
All told...		61.87	,,
Budget balance...		60.98	,,
Net surplus...	Rs.	89 lakhs.	

